ಬೀದರ ಜಿಲ್ಲೆಯ ಮಠಗಳು - ಒಂದು ಅಧ್ಯಯನ

ಚರಿತ್ರೆ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರಪಡಿಸಿದ ನಿಬಂಧ

ಸಂಶೋಧಕರು

ನಳಿನ ಎಂ.ಎ., ಎಂ.ಇಡಿ.

ಮಾರ್ಗದರ್ಶಕರು

ಬಿ.ಟಿ. ಸೋಮಶೇಖರ್ ಎಂ.ಎ.

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಡ ವಿಶ್ವವಿದ್ಯಾನಿಲಯ, ಹಂಪಿ ಮಾನ್ಯತೆ ಪಡೆದಿದೆ)
ಸೆಪ್ಟೆಂಬರ್-2009

ಬೀದರ ಜಿಲ್ಲೆಯ ಮಠಗಳು - ಒಂದು ಅಧ್ಯಯನ

ಚರಿತ್ರೆ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರಪಡಿಸಿದ ನಿಬಂಧ

ಸಂಶೋಧಕರು

ನಳಿನ ಎಂ.ಎ., ಎಂ.ಇಡಿ.

ಮಾರ್ಗದರ್ಶಕರು

ಜಿ.ಟಿ. ಸೋಮಶೇಖರ್ ಎಂ.ಎ.

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಮಾನ್ಯತೆ ಪಡೆದಿದೆ)
ಸೆಪ್ಟೆಂಬರ್–2009

ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2008-09ನೇ ಸಾಲಿಗೆ ಚರಿತ್ರೆ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಬೀದರ ಜಿಲ್ಲೆಯ ಮಠಗಳು - ಒಂದು ಅಧ್ಯಯನ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು **ಶ್ರೀ ಜಿ. ಟಿ. ಸೋಮಶೇಖರ್** ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ.

ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

Nalina

ದಿನಾಂಕ: 15.09.2009

ಸಂಶೋಧಕರು

ಸ್ಥಳ : ಮಂಡ್ಯ

(ನಳಿನ)

ಕೆಆರ್‌ಎಸ್‌ಎಂಎಚ್ 00369

ಪ್ರಮಾಣ ಪತ್ರ

ನಳಿನ ಅವರು ಚರಿತ್ರೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ **"ಬೀದರ ಜಿಲ್ಲೆಯ ಮಠಗಳು - ಒಂದು ಅಧ್ಯಯನ"** ಎಂಬ ನಿಬಂಧ ಮೂಲ ಸಂಶೋಧನಾ ಕೃತಿಯಾಗಿದೆ. ಇವರು ನನ್ನ ಮಾರ್ಗದರ್ಶನದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ಈ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದಾರೆ. ಇದು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 15.09.2009

ಸ್ಥಳ : ಮಂಡ್ಯ

ಮಾರ್ಗದರ್ಶಕರು

(ಜಿ.ಟಿ. ಸೋಮಶೇಖರ್ ಎಂ.ಎ.**)**

ಹಿರಿಯ ಉಪನ್ಯಾಸಕರು

ಇತಿಹಾಸ ಅಧ್ಯಯನ ವಿಭಾಗ

ಮಾನಸಗಂಗೋತ್ರಿ, ಮೈಸೂರು.

ಪರಿವಿಡಿ

ಅಧ್ಯಾಯ - 1

ಪ್ರಸ್ತಾವನೆ

ಅಧ್ಯಯನದ ಸ್ವರೂಪ

ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಬೀದರ ಜಿಲ್ಲೆಯ ಕೊಡುಗೆ ಅಪಾರವಾದದ್ದು. ಚರಿತ್ರೆಯ ಪುಟಗಳನ್ನು ತಿರುವಿ ನೋಡಿದಾಗ ಈ ಜಿಲ್ಲೆ ಸಂಪದ್ಭರಿತ ಜಿಲ್ಲೆಯಾಗಿದೆ. ರಾಜ್ಯದ ರಾಜಧಾನಿಯಾದ ಬೆಂಗಳೂರಿನಿಂದ ಅತಿ ದೂರದಲ್ಲಿರುವ ಈ ಪುಟ್ಟ ಜಿಲ್ಲೆಯಲ್ಲಿ ವಾಯುಪಡೆ ತರಬೇತಿ ಕೇಂದ್ರ ಸ್ಥಾಪಿತವಾಗಿದ್ದು, ವಿವಿಧ ಬೃಹತ್ ಉದ್ದಿಮೆಗಳು ಸ್ಥಾಪಿತವಾಗಿವೆ. ಸಾಮಾಜಿಕ ಬದಲಾವಣೆಯಲ್ಲಿ ಕ್ರಾಂತಿಯ ಬೀಜವನ್ನು ಬಿತ್ತಿದ ಶ್ರೇಯಸ್ಸು ಕರ್ನಾಟಕದ ಐತಿಹಾಸಿಕ ಪುಣ್ಯ ಕ್ಷೇತ್ರವಾದ ಕಲ್ಯಾಣ ನಾಡಿಗೆ ಸಲ್ಲುತ್ತದೆ. ಈ ಕಲ್ಯಾಣ ನಾಡಿನ ಪ್ರದೇಶದಲ್ಲಿ ಈಗಿನ ಬೀದರ, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳು ಪ್ರಮುಖವಾಗಿ ಸೇರ್ಪಡೆಯಾಗಿದ್ದರೂ ಬೀದರ ಜಿಲ್ಲೆಯು ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ದೃಷ್ಟಿಯಿಂದ ಮಹತ್ವಪೂರ್ಣವಾದ ಸ್ಥಳವಾಗಿದೆ. ಹೀಗಿದ್ದರೂ ಬೀದರದ ಪ್ರಾಚೀನ ಇತಿಹಾಸದ ಚಿತ್ರ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಐದನೆಯ ಶತಮಾನದಿಂದ ಅನೇಕ ಅರಸು ಮನೆತನಗಳು ಆಳ್ವಿಕೆ ನಡೆಸಿದ ಈ ಜಿಲ್ಲೆಯು ಮೌರ್ಯರ, ಶಾತವಾಹನರ ಅಧೀನದಲ್ಲಿತ್ತು. ಎಂಟನೇ ಶತಮಾನದಿಂದ ರಾಷ್ಟ್ರಕೂಟ ಮನೆತನದ ಆಳ್ವಿಕೆಗೆ ಒಳಪಟ್ಟಿತ್ತು. ಹತ್ತನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಪ್ರಾರಂಭವಾಗಿದ್ದ ಇಂದಿನ ಬಸವ ಕಲ್ಯಾಣವು ಇದರ ರಾಜಧಾನಿಯಾಗಿದ್ದುದನ್ನು ಅನೇಕ ಸುಂದರವಾದ ಐತಿಹಾಸಿಕ ದೇಗುಲಗಳು ಅಲ್ಲದೆ ಚಾಲುಕ್ಯ, ಕಲಚೂರಿ, ಸೆವುಣ ಮತ್ತು ಬಹುಮನಿ ಮನೆತನಗಳು ತಮ್ಮ ಆಳ್ವಿಕೆಯಲ್ಲಿ ಕೆಲವು ಮಂದಿರ, ಮಸೀದಿಗಳನ್ನು ನಿರ್ಮಿಸಿದ್ದು ಅವಶೇಷಗಳ ಮೂಲಕ ಕಂಡುಬರುತ್ತದೆ.

ಕರ್ನಾಟಕದ ಕಿರೀಟವೆಂದು ಪ್ರಖ್ಯಾತವಾದ ಬೀದರ ಜಿಲ್ಲೆಯು ಸಾಂಸ್ಕೃತಿಕವಾಗಿ ಕರ್ನಾಟಕದ ಕಿರೀಟವೇ ಆಗಿದೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣ ನಾಡಿನಲ್ಲಿ ಅನೇಕ ಶರಣ-ಶರಣೆಯರು ನಡೆಸಿದ ಅದ್ಭುತವಾದ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಯಿಂದ ಇಡೀ ದೇಶದ ಲಕ್ಷ್ಯವನ್ನು ತನ್ನತ್ತ ಸೆಳೆದುಕೊಂಡ ಬೀದರದ ಇತಿಹಾಸ ಪುಟ ಪುಟಗಳಲ್ಲಿ ಅವಿಸ್ಮರಣೀಯ. ಅಲ್ಲಮಪ್ರಭು, ಬಸವೇಶ್ವರ ಚನ್ನಬಸವೇಶ್ವರ, ಅಕ್ಕಮಹಾದೇವಿ ಮುಂತಾದ ಶರಣ-ಶರಣೆಯರಿಂದ ಕಲ್ಯಾಣ ನಾಡು ಕೈಲಾಸ ಸದೃಶವಾಗಿ ಬೆಳಗಿತ್ತು. ಅವರು ಕೇವಲ ವೀರಶೈವ ಧರ್ಮ ಪುನರುತ್ಥಾನವೆಂದು ಅರ್ಥೈಸಲಿಲ್ಲ. ಮಾನವ ಧರ್ಮದ ತಿರುಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ವಿವರಿಸುತ್ತ ಬದುಕಿನ ಮೌಲ್ಯಗಳ ಪುನರ್ವಿಮರ್ಶೆಯನ್ನು

ಮಾಡಿದರು. ಜಾತಿ-ಮತ-ಪಂಥ, ಕುಲ-ಗೋತ್ರಗಳ ಗೊಡವೆಯನ್ನು ಬದಿಗಿರಿಸಿ ಸತ್ಯ ಸಮಾನತೆಯ-ಭಕ್ತಿ ತತ್ವಗಳ ಮೇಲೆ ಹೊಸ ಸಮಾಜ ನಿರ್ಮಾಣಕ್ಕೆ ಕಾರಣರಾಗಿ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಹೊಸ ವ್ಯಾಖ್ಯಾನವನ್ನೇ ಬರೆದರು.

ಬೀದರ ಜಿಲ್ಲೆಯಲ್ಲಿ ಅನೇಕ ವೀರಶೈವ ಮಠಗಳು ಅಸ್ತಿತ್ವದಲ್ಲಿದ್ದೂ, ಈ ಮಠಗಳ ಹುಟ್ಟು ಮತ್ತು ಬೆಳವಣಿಗೆ, ವೀರಶೈವ ಮಠಗಳಲ್ಲಿ ಎಷ್ಟು ಪ್ರಕಾರಗಳು ಹಾಗೂ ಇಪ್ಪತ್ತನೆ ಶತಮಾನದ ಸಾಮಾಜಿಕ ಬದಲಾವಣೆಯಲ್ಲಿ ಇವುಗಳ ಪಾತ್ರ ಇವೇ ಮೊದಲಾದವುಗಳನ್ನು ಹೇಳಿ, ಬೀದರ ಜಿಲ್ಲೆಯ ಪ್ರಮುಖ ಮಠಗಳ ಪರಿಚಯ ನೀಡಲಾಗಿದೆ.

ಬೀದರ ಜಿಲ್ಲೆಯ ಇತಿಹಾಸ

ರಾಜಕೀಯ ಹಿನ್ನೆಲೆಯಲ್ಲಿ ಬೀದರ ಜಿಲ್ಲೆಯ ಇತಿಹಾಸ ಅವಿಸ್ಮರಣೀಯವಾದದ್ದು. 5ನೇ ಶತಮಾನದಿಂದ ಅನೇಕ ಅರಸು ಮನೆತನಗಳು ಆಳ್ವಿಕೆ ನಡೆಸಿದ್ದ ಈ ಜಿಲ್ಲೆಯ ಕಾಲ-ಕಾಲಾಂತರಕ್ಕೆ ಮೌರ್ಯ ಹಾಗೂ ಶಾತವಾಹನರ ಅಧೀನದಲ್ಲಿತ್ತು. ಮುಂದೆ 8ನೇ ಶತಮಾನದಿಂದ ರಾಷ್ಟ್ರಕೂಟ ಮನೆತನದ ಆಳ್ವಿಕೆಗೆ ಒಳಪಟ್ಟು, ಮುಂದೆ 10ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಪ್ರಾರಂಭವಾಗಿದ್ದ ಇಂದಿನ ಬಸವಕಲ್ಯಾಣವು ಇದರ ರಾಜಧಾನಿಯಾದುದ್ದನ್ನು ಇತಿಹಾಸದ ಮೂಲಕ ಕಾಣುತ್ತೇವೆ. ಮುಂದೆ ಕಲಚುರಿ, ಕಾಕತೀಯರು, ಖಿಲ್ಜಿ, ಬಹುಮನಿ, ಬರೀದಶಾಹಿ, ಮೊಗಲ ಅರಸರ ಹಾಗೂ ಹೈದ್ರಾಬಾದ್ ನಿಜಾಮರ ಆಡಳಿತಕ್ಕೊಳಪಟ್ಟಿರುವ ಈ ಜಿಲ್ಲೆಯು ವಿಭಿನ್ನ ಜನಾಂಗಗಳ ವಿವಿಧ ಕಲೆಗಳ ಹಾಗೂ ಸಾಹಿತ್ಯ ಸಂಸ್ಕೃತಿಗಳ ಅನೇಕ ಸುಂದರವಾದ ಐತಿಹಾಸಿಕ ದೇಗುಲಗಳ ಆಗರವಾಗಿರುವುದನ್ನು ನೋಡಬಹುದು.

ಪೌರಾಣಿಕವಾಗಿ ಮಹಾಭಾರತದಲ್ಲಿ ಬರುವ 'ವಿಧರ್ಭ' ಎಂಬುದಕ್ಕೆ ಹೋಲುವುದರಿಂದ ಅಲ್ಲಿ ಬರುವ "ವಿಧರ್ಭ" ನಗರವೇ ಬೀದರ ಆಗಿರಬಹುದೆಂಬುದು ಒಂದು ಊಹೆ. ಐತಿಹ್ಯದ ಪ್ರಕಾರ ವಿದುರ ರಾಜನ ಜಹಾಗೀರು ಸೀಮೆಯ ಪ್ರಧಾನ ಪಟ್ಟಣ. ರಾಜ ಭೀಮಸೇನನ ರಾಜಧಾನಿ ನಳ ದಮಯಂತಿಯರ ಪ್ರಣಯೋದ್ಯಾನದ ರಮ್ಯ ನಗರಿ, ಕೃಷ್ಣನ ಬೃಹ್ಮನಗಳನ್ನು ಗೆದ್ದ ಪಟ್ಟ ಮಹಿಷಿ ರುಕ್ಮಿಣಿಯ ನೆಲೆ. ಬೀದರಿನ ಮೂಲ ಹೆಸರು ಬಿದಿರು, ಬಿದಿರೆ, ಅಂದರೆ ಇಲ್ಲಿ ಬಿದಿರು ಬೆಳೆಯುವ ಪ್ರದೇಶವಾಗಿತ್ತು. ಆದ್ದರಿಂದಾಗಿ ಈ ಪ್ರದೇಶಕ್ಕೆ ಬಿದಿರೆ, ಬಿದಿರುಪುರ, ಬಿದರೂರ, ಬಿದರೆ, ಬೀದರ ಇತ್ಯಾದಿ ಹೆಸರುಗಳಿವೆ. ಆದರೆ ಇಂದು ಜಿಲ್ಲೆಯಲ್ಲಿ ಬಿದಿರು ಬೆಳೆಯುವುದಿಲ್ಲ. ಬಹುಮನಿ ಸುಲ್ತಾನರ ಆಡಳಿತದ ಕಾಲದಲ್ಲಿ ಅಹಮ್ಮದಾಬಾದ್ ಬೀದರ ಇಲ್ಲವೇ ಮೊಹಮ್ಮದಬಾದ್ ಬೀದರ ಎಂದು ಕರೆಸಿಕೊಂಡಿರುವ ಈ ಪ್ರದೇಶ ಔರಂಗಜೇಬನಿಂದ

'ಮುಜಾಫರಬಾದ್' ಎಂದು ಹೆಸರಿಸಲ್ಪಟ್ಟಿದೆ. ತೀರ ಪ್ರಾಚೀನ ಕಾಲದಲ್ಲಿ ಜನಪದರು 'ಧರಿ' ಎಂದು ಕರೆಯುತ್ತಿದ್ದರು.

ಕರ್ನಾಟಕ ಉತ್ತರದ ದಿಕ್ಕಿನಲ್ಲಿರುವ ಬೀದರ ಜಿಲ್ಲೆಯ ಭೂ ಭಾಗವು 17.35 ಮತ್ತು 187.25 ಉತ್ತರ ಅಕ್ಷಾಂಶ ಮತ್ತು 76.42 ಹಾಗೂ 77.35 ಪೂರ್ವ ರೇಖಾಂಶಗಳ ಮಧ್ಯದಲ್ಲಿ ಮೈಚಾಚಿಕೊಂಡಿದೆ. ಪೂರ್ವದಿಂದ ಪಶ್ಚಿಮಕ್ಕೆ ಬೀದರ ಜಿಲ್ಲೆಯ ಗರಿಷ್ಟ ಉದ್ದವು 93.4 ಕಿ.ಮೀ. ಉದ್ದು, ದಕ್ಷಿಣೋತ್ತರವಾಗಿ 115.2 ಕಿ.ಮೀ. ದೂರವಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ 5458.9 ಚದರ ಕಿಲೋಮೀಟರ್ ಇದೆ. ಐದು ತಾಲ್ಲೂಕುಗಳಿಂದ ಕೂಡಿದ ಈ ಜಿಲ್ಲೆಯಲ್ಲಿ ಔರಾದ ಹಾಗೂ ಭಾಲ್ಕಿ ತಾಲ್ಲೂಕು ಎರೆ ಭೂಮಿ ಹೊಂದಿದ್ದರೆ, ಬೀದರ ತಾಲ್ಲೂಕು ಅರ್ಧ ಕೆಂಪು, ಅರ್ಧ ಎರೆ ಭೂಮಿ ಹೊಂದಿದೆ. ಬಸವಕಲ್ಯಾಣ ಮತ್ತು ಹುಮನಾಬಾದ್ ತಾಲ್ಲೂಕುಗಳಲ್ಲಿ ಹೆಚ್ಚಿನಾಂಶ ಕೆಂಪು ಭೂಮಿಯಿಂದ ಕೂಡಿದೆ.

ಕಾರಂಜಾ, ಮಾಂಜರಾ ಜಿಲ್ಲೆಯ ಪ್ರಮುಖ ನದಿಗಳು ಅಂತೆಯೇ ಮುಲ್ಲಾಮಾರಿ, ಚುಳಕಿನಾಲಾ, ಮಾಣಿಕನಗರ ನಾಲಾ, ಮದರಿ ನಾಲಗಳು ಹರಿದು ಭೂಮಿಗೆ ತಂಪಿನ ಸಿಂಚನ ಮಾಡಿದೆ. ಸಮುದ್ರ ಪಾತಾಳದಿಂದ 670 ಮೀಟರ್ ಎತ್ತರವಿರುವ ಬೀದರ ಹವಾಮಾನ ಆರೋಗ್ಯಕರವಾಗಿದೆ. ನೀರು ಸಿಹಿಯಾಗಿದೆ. ಆದ್ದರಿಂದಲೇ ಈ ಜಿಲ್ಲೆ ಆಹ್ಲಾದಕರ ಹವೆಯ ನಿರ್ಝರಿಗಳ ಬೀಡೆಂದು ಪ್ರಸಿದ್ಧವಾಗಿದೆ. ಬೀದರಿನ ಪ್ರೇಕ್ಷಣೀಯ ಸ್ಥಳಗಳು ಹಾಗೂ ತಾಣಗಳನ್ನು ನೋಡಿದ ನಂತರ ಅಪರೂಪದ ಕಲಾತ್ಮಕ ಸಂಪತ್ತನ್ನು ಸಾಂಸ್ಕೃತಿಕ ಹಿರಿಮೆಯನ್ನು ಕಂಡು ಹೃದಯ ಪ್ರಫುಲ್ಲಗೊಳ್ಳುತ್ತದೆ.

ಬೀದರ ಜಿಲ್ಲೆಯು ಬಿದರಿ ಕಲೆಯಿಂದ ಪ್ರಸಿದ್ಧಗೊಂಡಿದೆ. ಈ ಕಲೆಯು ಜಗತ್ತಿನಾದ್ಯಂತ ಪ್ರಚಲಿತದಲ್ಲಿದೆ. ಬಿದರಿ ಕಲೆ ಉಗಮದಿಂದ ಬೀದರ ಜಿಲ್ಲೆಯ ಹೆಸರು ನಾಮಕರಣಗೊಂಡಿದೆ. ಈ ಜಿಲ್ಲೆಯ ಹೆಸರು ಅವಲೋಕಿಸಿದಾಗ ವಿದುರನೂರ ಮಹಾಭಾರತದ ಕಾಲದಷ್ಟೇ ಪ್ರಾಚೀನವಾಗಿದೆ. ಕಾಲ ಕಾಲಕ್ಕೆ ಅನೇಕ ಹೆಸರುಗಳಿಂದ ಪ್ರಸಿದ್ಧಿ ಪಡೆಯುತ್ತ ಬಿದಿರು, ಬಿದಿರೆ ಎಂದರೆ ಬಿದಿರು ಬೆಳೆಯುವ ಪ್ರದೇಶ ಅಂತೆಯೇ ಇದಕ್ಕೆ ಬಿದಿರೆ, ಬಿದಿರುಪುರ, ಬಿದನೂರ, ಬಿದರೆ ಎಂಬಿತ್ಯಾದಿ ಹೆಸರುಗಳು ಗುರುತಿಸಬಹುದು. ಸುಮಾರು 15ನೆಯ ಶತಮಾನದಲ್ಲಿ ಕನ್ನಡ-ಮರಾಠಿ ಗ್ರಂಥಗಳಲ್ಲಿ ಈ ಹೆಸರುಗಳ ಉಲ್ಲೇಖವಿದೆ. ಮುಸ್ಲಿಂ ಅರಸರ ಕಾಲದಲ್ಲಿ ಅಹಮ್ಮದಬಾದ-ಬೀದರ-ಮಹಮ್ಮದಬಾದ-ಬೀದರವೆಂದು ಹೆಸರು ಹೊಂದಿದ್ದು ಕಾಲಾಂತರದಲ್ಲಿ ಬೀದರ ಎಂದು ಬದಲಾಗಿದೆ. ವಿಶ್ವವಿಖ್ಯಾತಿ ಹೊಂದಿರುವ ಬಿದರಿ ಕಲೆಗಳನ್ನು ತಯಾರಿಸುವವರು ಇಂದಿಗೂ ಬೀದರಿನಲ್ಲಿ ಹೇರಳವಾಗಿ ಸಿಗುತ್ತಾರೆ.

ಗವಾನ ಮದರಸಾ ಪ್ರಸಿದ್ಧ ಐತಿಹಾಸಿಕ ಸ್ಮಾರಕ. ಇದೊಂದು ಭವ್ಯ ಕಟ್ಟಡ. ಮೂರನೇ ಮಹಮ್ಮದಷಾಹನ ಪ್ರಧಾನ ಮಂತ್ರಿಯಾಗಿದ್ದ ಖಾಜಾ ಮಹಮ್ಮದ ಗವಾನ ಕ್ರಿ.ಶ. 1472ರಲ್ಲಿ ಈ ಮಹಾವಿದ್ಯಾಲಯವನ್ನು ಕಟ್ಟಿಸಿದ್ದನು. ಮೂರಂತಸ್ತಿನ ಈ ಕಟ್ಟಡ ಇಂದಿಗೂ ಮಹಾಮಹಿಮನ ಸ್ಮಾರಕವಾಗಿ ನಿಂತಿದೆ. ಈ ವಿದ್ಯಾಲಯದಲ್ಲಿ ಅರಬ್ಬಿ, ರಾಜ್ಯಶಾಸ್ತ್ರ, ಕೆತ್ತನೆ ಕಲೆಗಳ ಅಧ್ಯಯನ ನಡೆಯುತ್ತಿತ್ತು. ಪೂರ್ವ ದಿಕ್ಕಿಗೆ ಮುಖಮಾಡಿ ನಿಂತಿರುವ ಈ ಕಟ್ಟಡದ ಎರಡು ಭಾಗಗಳಿಗೆ ಎತ್ತರವಾದ ಮಿನಾರಗಳು ಇದ್ದವು. ಅವುಗಳ ಪೈಕಿ ಬಲಭಾಗದ ಮಿನರ್ 1669ರಲ್ಲಿ ಸಿಡಿಲಿನ ಹೊಡೆತಕ್ಕೆ ಬಿದ್ದುಹೋಗಿದೆ ಎಂದು ಹೇಳಲಾಗುತ್ತಿದೆ. ಉಳಿದಿರುವ ಎಡಭಾಗದ ಮಿನಾರ್ ಹಾಗೂ ಈ ಮಿನಾರ್ ಮೇಲೆ ಬರೆಯಲಾದ ಲಿಪಿ ಈ ಕಟ್ಟಡದ ಕಲಾತ್ಮಕತೆಯನ್ನು ಬಿಂಬಿಸುತ್ತದೆ. ಈ ವಿದ್ಯಾಲಯದಲ್ಲಿ ಗ್ರಂಥಾಲಯ, ಉಪನ್ಯಾಸ ಭವನ, ಮಸೀದಿ, ವಿದ್ಯಾರ್ಥಿ ಹಾಗೂ ಉಪನ್ಯಾಸಕರಿಗಾಗಿ ಪ್ರತ್ಯೇಕ ಕೋಣೆಗಳನ್ನು ಹೊಂದಲಾಗಿತ್ತಲ್ಲದೇ ಮೂರು ಸಾವಿರ ಕೈ ಬರಹದ ಉಪಯುಕ್ತ ಗ್ರಂಥಗಳನ್ನು ಸಂಗ್ರಹವಾಗಿದ್ದ ಈ ವಿದ್ಯಾಲಯದಲ್ಲಿ ದೇಶದ ವಿವಿಧ ಭಾಗಗಳಿಂದ ಬಂದ ನೂರಾರು ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದರು. ಈ ವಿದ್ಯಾಲಯದ ಮುಂದೆ ವಿಶಾಲ ಪ್ರಾಂಗಣವಿದ್ದು ಬಹುಮನಿ ಕಾಲದ ಅತ್ಯುತ್ತಮ ಮಾದರಿಯಾಗಿರುವ ಈ ಕಟ್ಟಡವನ್ನು ಸುಂದರವಾದ ಹಂಚುಗಳಿಂದ ಮತ್ತು ಖುರಾನದ ಶ್ಲೋಕಗಳಿಂದ ಅಲಂಕರಿಸಲಾಗಿದೆ. ಪರ್ಸಿ ಬ್ರೌನ್ ಈ ಕಟ್ಟಡದ ಬಗ್ಗೆ ಬರೆಯುತ್ತ "ಮದರಸವು ಪರ್ಷಿಯ ನಗರಗಳನ್ನು ಅಲಂಕರಿಸಿರುವ ಭವ್ಯ ವಿಶ್ವವಿದ್ಯಾಲಯಗಳನ್ನು ಹೋಲುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ ಸಮರಕಂದದಿಂದ ಕೆತ್ತಿಕೊಂಡು ಬಂದು ಇಲ್ಲಿ ಇಟ್ಟಂತೆ ಕಾಣುತ್ತದೆ" ಎಂದು ಉದ್ಧರಿಸಿದ್ದಾನೆ. ಅತ್ಯಂತ ಸುಂದರವಾಗಿರುವ ಬೀದರ ಕೋಟೆಯು ಕೆಂಪು ಜಂಬಿಟ್ಟಿಗೆಯ ಭೂಮಿಯ ಮೇಲೆ ಸ್ಥಿರವಾಗಿ ನಿಂತಿದೆ. ಈ ಕೋಟೆಯ ಪರಿಧಿಯು 3 ಮೈಲುಗಳಷ್ಟಿದೆ. ಜಲದುರ್ಗದ ಮಾದರಿಯ ಈ ಕೋಟೆಯ ಸುತ್ತಲೂ ಮೂರು ಸುತ್ತಿನ ನೀರು ಸಂಗ್ರಾಹಕ ಕಂದಕಗಳಿವೆ. ಅಲ್ಲಲ್ಲಿ ತೋಪುಗಳನ್ನು ಬಳಸಲು ನಿರ್ಮಿಸಲಾದ ಬ್ಯಾರೇಜುಗಳಿವೆ. ಶತ್ರುಗಳ ಮೇಲೆ ಕಾದ ಎಣ್ಣೆ ಸುರಿಯುವಂತಹ ಏರ್ಪಾಡು ದ್ವಾರಗಳಲ್ಲೇ ಮಾಡಿದ್ದು ಕಂಡುಬರುತ್ತದೆ. ಗಂಡಾಂತರ ಸಮಯದಲ್ಲಿ ಪಾರಾಗಲು ಅನುಕೂಲವಾಗುವಂತಹ ಸುರಂಗ ಮಾರ್ಗಗಳು ಈ ಕೋಟೆಯಲ್ಲಿ ಕಾಣಸಿಗುತ್ತದೆ. ಸೈಫನ್ ವ್ಯವಸ್ಥೆಯ ಮಾದರಿಯಲ್ಲಿ ನೀರಿನ ಪೂರೈಕೆ ನಡೆಯುತ್ತಿತ್ತು ಎಂಬುದು ಕೋಟೆಯಲ್ಲಿ ಅಳಿದುಳಿದಿರುವ ಅವಶೇಷಗಳಿಂದ ತಿಳಿದುಬರುತ್ತದೆ.

ಬೀದರ ನಗರದ ಹೊರಭಾಗದಲ್ಲಿ ಬೃಹದಾಕಾರದ ಗುಮ್ಮಟವೊಂದು ಕಾಣಬರುತ್ತದೆ. ಅಲ್ಲಿ ಬರೀದ ಷಾಹಿ ಅರಸರ ಗೋರಿಗಳಿವೆ. ಬಹು ಎತ್ತರವಾಗಿರುವ ಈ ಸಮಾಧಿಯ ಗುಮ್ಮಟಗಳು ಅಂಡಾಕಾರದಲ್ಲಿದ್ದು ಒಳಭಾಗದಲ್ಲಿ ಕುಸುರಿ ಕೆಲಸ, ಲಿಪಿ ಕಾರ್ಯ ಆಕರ್ಷಣೆಯಾಗಿವೆ.

ಕ್ರಿ. ಶ. 10ನೇ ಶತಮಾನದಲ್ಲಿ ಕಲ್ಯಾಣ ಪಟ್ಟಣ ಚಾಲುಕ್ಯರ ರಾಜಧಾನಿಯಾಗಿತ್ತು. ಈ ಪಟ್ಟಣದ ಉತ್ತರದ ದಿಕ್ಕಿಗೆ ದುರ್ಗಮವಾದ ಸುಂದರ ಕೋಟೆ ಅಚ್ಚಳಿಯದೆ ನಿಂತಿದೆ. ಬಹಳ ವಿಶಾಲವಾಗಿಲ್ಲದಿದ್ದರೂ ಕರಿ ಕಲ್ಲಿನಿಂದ ನಿರ್ಮಿಸಿದ ಈ ಕೋಟೆ ಸುಭದ್ರವಾಗಿದೆ. ಕಲ್ಯಾಣ ಚಾಲುಕ್ಯರಿಂದ ಬಂದಿದ್ದ ಈ ಕೋಟೆಯು ವಿಶಿಷ್ಟವಾಗಿದೆ. 150 ಅಡಿ ಎತ್ತರದ ಮೇಲೆ ಸದಾ ನೀರು ಇರುವುದು. ಆಟವಾರ ಈ ಬಾವಿಯಿಂದ ನೀರನ್ನು ಸೇದಲು ಗಾಣಲಾಡಿಸುವ ದೊಡ್ಡ ಚಕ್ರವೊಂದನ್ನು ಇಲ್ಲಿ ಕಾಣಬಹುದಾಗಿದೆ. ಕೋಟೆಯ ಮೇಲ್ಭಾಗದಲ್ಲಿರುವ ಗುಡಿಯಲ್ಲಿ ಯಾವುದೇ ಮೂರ್ತಿ ಕಾಣಸಿಗುವುದಿಲ್ಲ. ವಿಶಾಲವಾದ ದರ್ಬಾರ ಹೊಂದಿದ್ದ ಅರಮನೆ ಇದ್ದು, ಅದು ಬಿಜ್ಜಳನದೆಂದು ಹೇಳಲಾಗಿದೆ. ಮದ್ದಿನ ಮನೆ, ಖಜಾನೆ, ಸ್ನಾನ ಗೃಹಗಳನ್ನು ಇಲ್ಲಿ ಕಾಣಬಹುದಾಗಿದೆ. ಕೋಟೆಗೆ ದಕ್ಷಿಣ ದಿಕ್ಕಿನಲ್ಲಿ ಮಹಾದ್ವಾರವಿದ್ದು ಕೋಟೆಯ ಕಟ್ಟಡ ಚಿತ್ತಾಕರ್ಷಕವಾಗಿದ್ದು ಐತಿಹಾಸಿಕ ಮಹತ್ವವನ್ನು ಬಿಂಬಿಸುತ್ತದೆ.

ಬೀದರಿನ ಮೂರು ಮೈಲಿ ದೂರವಿರುವ ಅಷ್ಟೂರ ಗ್ರಾಮದಲ್ಲಿ ಬಹುಮನಿ ರಾಜಮನೆತನದವರ ಕಬರಿಸ್ತಾನಗಳಿವೆ. ಅಲ್ಲಿ ಸಂತನೆಂದು (ವೆಲಿ) ಕರೆಯಲಾಗುತ್ತಿದ್ದ ಅಹಮದ ಷಾಹನ ಗೋರಿಯಿದೆ. ಹಿಂದೂ ಮುಸಲ್ಮಾನರಿಂದ ಗೌರವಿಸಲ್ಪಡುವ ಈತನ ಉರುಷ ಧರ್ಮ ಸಮ್ಮೈಕ್ಯತೆಯ ಪ್ರತೀಕವಾಗಿದೆ. ಈ ಉರುಸು ಲಿಂಗಾಯಿತ ಸ್ವಾಮಿಯ ಪ್ರಜೆಯಿಂದ ಪ್ರಾರಂಭವಾಗುವುದು ಒಂದು ವಿಶೇಷತೆ. ಈ ಸಮಾಧಿಯ ಗುಮ್ಮಟ ಉತ್ತಮ ಶಿಲ್ಪಕೆಯಿಂದ ಕೂಡಿದ್ದು ಒಳಭಾಗದಲ್ಲಿ ಅಮೂಲ್ಯ ಹರಳುಗಳಿಂದ ಶೃಂಗರಿಸಲಾಗಿದೆಯಲ್ಲದೆ ವರ್ಣರಂಜಿತ ಚಿತ್ರಕಲೆಯು ಕಂಡುಬರುತ್ತದೆ. ಬೀದರನ ಜಮ್ಮಾ ಮಸೀದಿ, ಕರಿಮಸೀದಿ, ಶಿಲ್ಪದ ದೃಷ್ಟಿಯಿಂದ ನೋಡತಕ್ಕಂತಹವುಗಳಾಗಿವೆ. ಬೀದರ ನಗರದಲ್ಲಿರುವ ಹಜರತ ಅಬ್ದುಲ ಫೈಜ ದರ್ಗಾ, ಮುಲ್ತಾನಿ ಪಾಷಾ ದರ್ಗಾ, ಬಸವಕಲ್ಯಾಣದ ಬಾಗಸವಾರ ಮತ್ತು ಪೀಠ ದರ್ಗಾಗಳು ಇತಿಹಾಸ ಪ್ರಸಿದ್ಧವಾಗಿವೆ. ಎಲ್ಲಾ ಜಾತಿಯ ಜನ ಈ ದರ್ಗಾಗಳಿಗೆ ನಡೆದುಕೊಳ್ಳುತ್ತಾರೆ.

ಸಮುದ್ರ ಮಟ್ಟದಿಂದ ಎತ್ತರದಲ್ಲಿರುವ ಬೀದರಿನಲ್ಲಿ ನೀರಿನ ಝರಿ ಹಾಗೂ ಚಿಲುಮೆಗಳಿವೆ. ನಗರದ ಪೂರ್ವ ದಿಕ್ಕಿಗೆ ಎರಡು ಕಿಲೋಮೀಟರ್ ದೂರದಲ್ಲಿ ಗುಹಾಂತರ ದೇವಾಲಯವಿದೆ. ಈ ಕ್ಷೇತ್ರವನ್ನು 'ನರಸಿಂಹ ಝರಾ' ಎಂದು ಕರೆಯುತ್ತಾರೆ. ಸುಮಾರು 90 ಮೀ. ಉದ್ದದ ಗುಹೆಯೊಳಗೆ ನೀರಿನ ಝರಿ ಪ್ರವೇಶಿಸುತ್ತದೆ. ಎದೆ ಮಟ್ಟದ ನೀರು ತುಂಬಿರುವ ಗುಹೆ ಪ್ರವೇಶಿಸಿ ನರಸಿಂಹ ದೇವರ ದರ್ಶನ ಪಡೆಯಬೇಕಾಗುತ್ತದೆ. ಇಲ್ಲಿ ಸದಾ ಕಾಲ ನೀರು ಹರಿಯುತ್ತಿರುವುದರಿಂದ ಭಕ್ತಾದಿಗಳು ನರಸಿಂಹನ ದರ್ಶನಕ್ಕಾಗಿ ಟೊಂಕ ಮಟ್ಟದ ನೀರಿನಲ್ಲಿ ಹೋಗಲೇಬೇಕಾಗುತ್ತದೆ. ಇದೊಂದು ಅಪರೂಪದ ದೇವಾಲಯ ಹಾಗೂ ಪವಿತ್ರ ಕ್ಷೇತ್ರವಾಗಿದೆ.

ನಗರದ ಪಶ್ಚಿಮ ದಿಕ್ಕಿನಲ್ಲಿರುವ ಗುರುನಾನಕ ಝರಾ ಸಿಖ್ಖರ ಪವಿತ್ರ ಯಾತ್ರಾಸ್ಥಳವಾಗಿದೆ. ಹೆಸರೇ ಸೂಚಿಸುವಂತೆ ಸಿಖ್ ಧರ್ಮದ ಸಂಸ್ಥಾಪಕ ಸಂತ ಗುರುನಾನಕ ಅವರು ರಾಷ್ಟ್ರಾದ್ಯಂತ ಪಾದಯಾತ್ರೆ ಕೈಗೊಂಡ ಪ್ರವಾಸದ ಸಂದರ್ಭದಲ್ಲಿ ಇಲ್ಲಿಗೆ ಬಂದಿದ್ದರಂತೆ. ನೀರಿನ ಬವಣೆ ಅನುಭವಿಸುತ್ತಿರುವ ಇಲ್ಲಿಯ ಜನರ ಕೋರಿಕೆ ಮನ್ನಿಸಿ, ತಮ್ಮ ಪಾದದಿಂದ ಭೂಮಿಯನ್ನು ಮೆಟ್ಟಲು, ಆ ಸ್ಥಳದಲ್ಲಿ ಸಿಹಿ ನೀರಿನ ವರತೆ ಚಿಮ್ಮತೊಡಗಿತ್ತೆಂಬ ಪ್ರತೀತಿ ಇದೆ. ಈ ಸ್ಥಳವೇ ಇಂದು 'ನಾನಕ ಝರಾ' ಎಂದು ಪ್ರಸಿದ್ಧವಾಗಿದೆ. ನೀರು ಉದ್ಭವವಾಗುವ ಸ್ಥಳವನ್ನು ಅಮೃತ ಶಿಲೆಯಿಂದ ಕಟ್ಟಲಾಗಿದ್ದು, ಅಮೃತ ಕುಂಡವೆಂದು ಅದನ್ನು ಕರೆಯಲಾಗುತ್ತದೆ. ದಕ್ಷಿಣ ಭಾಕದಲ್ಲಿ ಸಿಖ್ಖರ ಪವಿತ್ರ ಯಾತ್ರಾ ಕ್ಷೇತ್ರವೆಂದು ಹೇಳಲಾದ ಈ ಸ್ಥಳ ಸೃಷ್ಟಿ ಸೌಂದರ್ಯದಿಂದ ಕೂಡಿ ನಯನಮನೋಹರವಾಗಿದೆ. ಇಲ್ಲಿಯೇ ಗುರುದ್ವಾರವನ್ನು ಕಟ್ಟಲಾಗಿದ್ದು ದೇಶದ ನಾನಾ ಭಾಗಗಳಿಂದ ಸಿಖ್ ಭಕ್ತಾದಿಗಳು ಈ ಕ್ಷೇತ್ರಕ್ಕೆ ಸಂದರ್ಶನ ನೀಡುತ್ತಾರೆ.

ಕಲಾ ದೇಗುಲಗಳು : ಬೀದರ ಜಿಲ್ಲೆಯ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ದೃಷ್ಟಿಯಿಂದ ಮಹತ್ವಪೂರ್ಣ ಸ್ಥಳವಾಗಿದೆ. ಈ ಜಿಲ್ಲೆಯಲ್ಲಿ ಹಲವಾರು ಸುಂದರವಾದ ಐತಿಹಾಸಿಕ ದೇಗುಲಗಳಿವೆ. ಚಾಲುಕ್ಯರು, ಕಲಚೂರಿಗಳು, ಸೇವುಣರು ತಮ್ಮ ತಮ್ಮ ಆಳ್ವಿಕೆಯಲ್ಲಿ ಅನೇಕ ಮಂದಿರಗಳನ್ನು ನಿರ್ಮಿಸಿದ್ದು ಅವಶೇಷಗಳ ಮೂಲಕ ಕಂಡುಬರುತ್ತದೆ. ಶಿಲ್ಪ ಕಲೆ ಮತ್ತು ಕಲಾನೈಪುಣ್ಯತೆ ಸಮೀಪದ ನಾರಾಯಣಪುರದ ಶಿವಮಂದಿರ ಪ್ರಸಿದ್ಧವಾಗಿದೆ. ಈ ದೇವಾಲಯ ಉನ್ನತ ಕಟ್ಟೆಯ ಮೇಲೆ ನಿರ್ಮಿತವಾಗಿದ್ದು, ಉತ್ತರವಾದ ಸಭಾ ಮಂಟಪ, ಸುಕನಾಶಿ, ಉನ್ನತ ಗರ್ಭಗೃಹದಿಂದ ಕೂಡಿದೆ. ಈ ಮಂದಿರ ತ್ರಿಕಾಲ ಮಾದರಿಯದ್ದಾಗಿದೆ. ಈಗ ಗರ್ಭಗೃಹದ ಒಂದು ಪಾರ್ಶ್ವಮಂದಿರ ನಾಶವಾಗಿದೆ. ಮಂದಿರದ ಹೊರಗೋಡೆಯ ಮೇಲೆ ಶಿಲಾಬಾಲಿಕೆಯರ ಮೂರ್ತಿಗಳು ಕಾಲದ ದವಡೆಯಲ್ಲಿ ಸಿಕ್ಕು ಉಳಿದಿವೆ. ಚಾಲುಕ್ಯರ ಶಿಲ್ಪಕಲಾ ಪ್ರೌಢಿಮೆಗೆ ಸಾಕ್ಷಿಯಾಗಿ ನಿಂತಿರುವ ಈ ಶಿಲಾ ಮೂರ್ತಿಗಳು ಮನೋಜ್ಞವಾಗಿವೆ. ನಾರಾಯಣಪುರದಲ್ಲಿದ್ದವೆಂದು ಹೇಳಲಾದ ಇತರ ಮಂದಿರಗಳ ಅವಶೇಷಗಳನ್ನು ಮಾತ್ರ ಕಾಣಬಹುದು. ಬಸವಕಲ್ಯಾಣದ ಪರ್ತಾಪುರ ಗ್ರಾಮದ ಶಿವಮಂದಿರ ಅದೇ ಕಾಲಕ್ಕೆ ಸಂಬಂಧಿಸಿದ್ದೆಂದು ಹೇಳಲಾಗಿದೆ. ಮೋರಖಂಡಿ ಗ್ರಾಮದ ಶಿವಮಂದಿರ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾಗಿದ್ದು ಕೆಲಕಾಲ ಚಾಲುಕ್ಯ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ಚಂಡಕಾಪುರದ ಸಮೀಪ ಅಮೃತ ಕುಂಡವೆಂಬ ತೀರ್ಥಸ್ಥಳವಿದೆ. ಅಲ್ಲಿಯ ಮಂದಿರಗಳು ಚಾಲುಕ್ಯ ಶೈಲಿಯಲ್ಲಿ ನಿರ್ಮಿತವಾಗಿವೆ.

ಬೀದರ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಸಂಚರಿಸಿದಾಗ ಕಾಣುವ ಪ್ರೇಕ್ಷಣೀಯ ಸ್ಥಳಗಳು ಅಸಂಖ್ಯಾತ. ಬೀದರಿಗೆ ಬಂದವರು ಬಸವಕಲ್ಯಾಣ ನೋಡದೆ ಹೋಗಲಾರರು. ತನ್ನ ಐತಿಹಾಸಿಕ ಹಿರಿಮೆಯಿಂದ ಕೈ ಎತ್ತಿ ಕರೆಯುವ ಬಸವಕಲ್ಯಾಣ 12ನೇ ಶತಮಾನದ ಶರಣರ ಕ್ರಾಂತಿ ಭೂಮಿಯಾಗಿದೆ. ಬಸವಾದಿ ಶಿವಶರಣ-

ಶರಣೆಯರ ಅನುಭವ ಸದ್ಭಾವನೆಗಳು ಹೂವಾಗಿ ಅರಳಿದ್ದು ಇಲ್ಲಿರುವ ಅನುಭವ ಮಂಟಪದಲ್ಲಿ. ನಾಡ ಚರಿತ್ರೆಯಲ್ಲಿ ಅಷ್ಟೇ ಅಲ್ಲ, ಭಾರತದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಕಂಗೊಳಿಸುವ ಚಾಲುಕ್ಯ ಸಾಮ್ರಾಜ್ಯದ ಈ ಊರಿಗೆ ಉಜ್ವಲ ಇತಿಹಾಸವಿದೆ. ಚಾಲುಕ್ಯರ ರಾಜಧಾನಿಯಾಗಿದ್ದ ಈ ಪ್ರದೇಶದಲ್ಲೇ ವಚನಗಂಗೆ ಹರಿದುಬಂದುದು. 12ನೇ ಶತಮಾನದ ಮಹಾಕ್ರಾಂತಿಯ ಗಂಗೋತ್ರಿ ಎಂದು ಬಣ್ಣಿಸಲಾದ ಕಲ್ಯಾಣವು ಕಾಯಕಯೋಗ ಪ್ರಚುರಪಡಿಸಿದ ಪವಿತ್ರ ಕ್ಷೇತ್ರ. ಬಿಜ್ಜಳನ ಪ್ರಧಾನಿಯಾದ ಬಸವಣ್ಣ ನೆಲೆಸಿದ ಪುಣ್ಯವೀಡು. ಇಂದು ಕಲ್ಯಾಣದಲ್ಲಿರುವ ಬಸವೇಶ್ವರ ದೇವಾಲಯವಿರುವ ಸ್ಥಳದಲ್ಲಿ ಹಿಂದೆ ಬಸವಣ್ಣನವರು ಜನತೆಯ ಕಷ್ಟಸುಖ ವಿಚಾರಿಸಲು ಆಸೀನರಾಗುತ್ತಿದ್ದರೆಂಬ ಪ್ರತೀತಿಯ ಪರುಷ ಕಟ್ಟೆ, ಪ್ರಭುದೇವರ ಗದ್ದಿಗೆ, ಅಕ್ಕನಾಗಮ್ಮನ ಗವಿ, ತ್ರಿಪುರಾಂತಕ ಕೆರೆ, ಬಸವೇಶ್ವರ ಮಹಾಮನೆ, ಮಡಿವಾಳ ಮಾಚಯ್ಯ ಮಂದಿರ, ನವೀಕೃತ ಅನುಭವ ಮಂಟಪ, ಗೋಸಾಯಿ ಮಠ, ಸದಾನಂದ ಸರಸ್ವತಿ ಪೀಠ, ಉರಿಲಿಂಗ ಪೆದ್ದಿ ಮಠ, ಬಂದವರ ಓಣಿ ಇವು ಬಸವಕಲ್ಯಾಣದಲ್ಲಿ ಪ್ರವಾಸಿಗರು ವೀಕ್ಷಿಸಬಹುದಾದ ಸ್ಥಳಗಳು. ಈ ತಾಲ್ಲೂಕಿನ ಹಾರಕೂಡ ಚನ್ನಬಸವೇಶ್ವರರ ಮಠ ಪ್ರಸಿದ್ಧವಾದುದು.

ಪೂರ್ವದಲ್ಲಿ ಜಯಸಿಂಗಪುರ ಎಂದು ಕರೆಯಲಾಗುತ್ತಿದ್ದ ಹುಮನಾಬಾದ ಇಂದ ತಾಲ್ಲೂಕು ಕೇಂದ್ರವಾಗಿದೆ. ಚಾಲುಕ್ಯ ದೊರೆ ಜಯಸಿಂಗನು 1240ರಲ್ಲಿ ಊರನ್ನು ಕಟ್ಟಿದನೆಂದು ತಿಳಿದುಬರುತ್ತದೆ. ಹುಮನಾಬಾದಿನ ಬಳಿಯ ಮಾಣಿಕನಗರದಲ್ಲಿ ಸಕಲ ಮತಚಾರ್ಯರೆನಿಸಿದ ಮಾಣಿಕ ಪ್ರಭುಗಳ ಭವ್ಯ ಮಂದಿರವಿದೆ. ಇದೊಂದು ಆಧ್ಯಾತ್ಮಿಕ ಸ್ಥಳವಾಗಿದ್ದು, ವಿದ್ಯಾಕೇಂದ್ರವೂ ಆಗಿದೆ. ಈ ಬಕ್ಕಪ್ರಭು ಶಿವಯೋಗಿಗಳ ಪಾದಸ್ಪರ್ಶದಿಂದ ಪುನೀತವಾದ ನೆಲ. ಹುಮನಾಬಾದದ ಪಶ್ಚಿಮಕ್ಕೆ ಮೋಳಕೇರಾ ಗ್ರಾಮದಲ್ಲಿರುವ ಶರಣ ಮೋಳಿಗೆ ಮಾರಯ್ಯನ ಗಿನೋಡುವಂತದ್ದು, ಗಡವಂತಿ, ಹುಡಗಿ, ಚಿಟಗುಪ್ಪ, ಬೆಳಕೇರಾ, ಹಳ್ಳಿಖೇಡ (ಕೆ) ಮತ್ತು ನಂದಗಾಂವ ಗ್ರಾಮಗಳು ಐತಿಹ್ಯ ಹಾಗೂ ಧಾರ್ಮಿಕ ಮಹತ್ವದಿಂದ ಕೂಡಿದ ಸ್ಥಳಗಳಾಗಿವೆ. ಹಳ್ಳಿಖೇಡ(ಬಿ) ಗ್ರಾಮದಲ್ಲಿ ಬೃಹತ್ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿವೆ. ಹಳ್ಳಿಖೇಡ(ಕೆ) ಈ ಗ್ರಾಮದಲ್ಲಿ ಕೊಳವೆ ಬಾವಿಗಳ ಮೂಲಕ ಸದಾಕಾಲ ಚಿಮ್ಮುವ ನೀರಿನ ಚಿಲುಮೆಗಳು ವೈಶಿಷ್ಟ್ಯಪೂರ್ಣವಾಗಿವೆ.

ಶಾಸನಗಳನ್ವಯ ಭಲ್ಲುಂಕ ಎಂದು ಹೆಸರಿಸಲಾದ ಈ ಊರು ಇಂದು ಭಾಲ್ಕಿ ಎಂದು ಕರೆಯಲ್ಪಡುತ್ತದೆ. ಶಿವಭಕ್ತ ಕುಂಬಾರ ಗುಂಡಯ್ಯನ ಜನ್ಮಸ್ಥಳ ಇದಾಗಿದೆ. ಪಾಳೆಗಾರನೊಬ್ಬ ನಿರ್ಮಿಸಿದ ಕೋಟೆ ಹೊಂದಿರುವ ಈ ಊರಿನ ಭಾಲ್ಕೇಶ್ವರ ಮಂದಿರ ಪ್ರಸಿದ್ಧವಾಗಿದೆ. ಇಲ್ಲಿರುವ ಕುಂಭೇಶ್ವರ ದೇವಾಲಯದ ನಿಂತ ಗಣಪತಿ ಹಾಗೂ ಕುಳಿತ ಹನುಮಂತ ದೇವರ ಮೂರ್ತಿಗಳು ವಿಶಿಷ್ಟವಾದವುಗಳು. ಧರ್ಮ ಸಂಸ್ಕೃತಿಗೆ ಹೆಸರಾದ ಹಿರೇಮಠ ಸಂಸ್ಥಾನ, ಮಹಾಂತೇಶ್ವರ ಮಠಗಳು, ಸಂಗಮೇಶ್ವರ ಹಾಗೂ ರಾಮ ಮಂದಿರಗಳು ಈ ಪಟ್ಟಣದಲ್ಲಿವೆ. ಈ ತಾಲ್ಲೂಕಿನ ಖಟಕ ಚಿಂಚೋಳಿಯ ಆಂಜನೇಯ, ಖಾನಾಪೂರದ ಮಲ್ಲಣ್ಣ, ತೂಗಾಂವ

ಹಲಸಿಯ ಲಕ್ಷ್ಮೀ ಮಂದಿರ, ಸಿದ್ದೇಶ್ವರದ ಸಿದ್ಧಲಿಂಗ ದೇವಾಲಯ, ಹಳ್ಳಿಬೇಡದ ಸಂಗಮೇಶ್ವರ ಮಂದಿರ ಮುಂತಾದವುಗಳು ಪ್ರಾಚೀನವಾದ ಪುಣ್ಯಕ್ಷೇತ್ರಗಳಾಗಿವೆ.

ವೀರಶೈವ ಧರ್ಮದ ಹಿನ್ನೆಲೆ

ವೀರಶೈವ ಧರ್ಮದ ಕಾಲವನ್ನು ಹೇಳುವುದು ಕಷ್ಟವೆಂದು ವಿದ್ವಾಂಸರ ಮತ. ಶೈವ ಧರ್ಮದ ಪ್ರಮುಖ ಶಾಖೆ ವೀರಶೈವ ಧರ್ಮ, ಶೈವ ಧರ್ಮವು ಕ್ರಮೇಣ ಕೆಲವು ಬದಲಾವಣೆಗಳನ್ನು ಹೊಂದಿ ವೀರಶೈವ ಧರ್ಮದಲ್ಲಿ ಪರಿಪೂರ್ಣತೆಯನ್ನು ಪಡೆಯಿತು. ವೀರಶೈವ ಧರ್ಮದ ಪರಂಪರೆಯಲ್ಲಿ ಪೀಠಗಳ ಸಂಪ್ರದಾಯದ ಮಠಗಳು ಕಾಣುತ್ತೇವೆ. ವೀರಶೈವ ಧರ್ಮದಲ್ಲಿ ಗುರುಪೀಠ ಹಾಗೂ ನಿರಂಜನ ಪೀಠ ಎಂದು ಎರಡು ಭಾಗಗಳು ಇವೆ. ಗುರುಪೀಠಗಳಿಗೆ ಸಿಂಹಾಸನವೆಂದು ಕರೆಯುವುದುಂಟು. ನಿರಂಜನ ಪೀಠಗಳಿಗೆ ವಿರಕ್ತ ಶೂನ್ಯ ಸಿಂಹಾಸನವೆಂದು ಕರೆಯುತ್ತಾರೆ. ಗುರುಸ್ಥಳ ಪೀಠಗಳು ಶಿವಾಚಾರ್ಯ ಪರಂಪರೆಗೆ ಸೇರಿದರೆ ವಿರಕ್ತ ಪೀಠಗಳು ಶೂನ್ಯ ಸಿಂಹಾಸನಕ್ಕೆ ಸೇರಿದವುಗಳಾಗಿವೆ.

ಹಿಂದೂ ಧರ್ಮದ ಕಕ್ಷೆಯಲ್ಲಿ ಬರುವ ವೀರಶೈವ ಧರ್ಮದ ಹಿನ್ನೆಲೆಯಾಗಿ ಕೆಲವು ವಿದ್ವಾಂಸರು ಹೀಗೆ ಹೇಳುತ್ತಾರೆ. ಶೈವ, ವೀರಶೈವ, ವೃತ್ಸಭಿಜ್ಞಾ ಈ ಮೂರು (ಶಿವನೆ) ಒಂದೇ ಎಂದು ಭಾವಿಸಲಾಗಿದೆ. ವೀರಶೈವ ಧರ್ಮವು ಶೈವಧರ್ಮದ ವಿಕಸಿತ ರೂಪವೆಂದು ಬೇರೆ ಹೇಳಬೇಕಾಗಿಲ್ಲ. ವೀರ ಎಂಬುದು ಈ ಶಾಖೆಯ ವೈಶಿಷ್ಟ್ಯವಾಗಿದೆ. ಶಿವನಲ್ಲಿ ಅಚಲವಾದ ಭಕ್ತಿ ಹಾಗೂ ನಿಷ್ಠೆಯನ್ನು ಇಟ್ಟಿರುವುದು ಇದು ಸೂಚಿಸುತ್ತದೆ.

ವೀರಶೈವದಲ್ಲಿ ಶಿವ ಶಕ್ತಿಗಳಿಗೆ ಅವಿನಾಭಾವ ಸಂಬಂಧವಿದೆ. ಪರ ಬ್ರಹ್ಮಸ್ವರೂಪನಾದ ಶಿವನ ಅಂಶವೇ ಜೀವ. ಸಿದ್ಧಾಂತ ಶಿಖಾಮಣಿಯಲ್ಲಿ ಪ್ರಸ್ತಾಪಿಸಿರುವಂತೆ ರೇಣುಕರು ಕೈಲಾಸದ ಶಿವಗಣದಲ್ಲಿ ಒಬ್ಬರು. ಷಣ್ಮುಖ ವೃಷಭರಂತೆ. ವೃಷಭನು ಭೂಲೋಕಕ್ಕೆ ಬಂದು ಬಸವ ಎಂದು ಹೆಸರು ಪಡೆದು ಲೋಕೋದ್ಧಾರ ಕಾರ್ಯವನ್ನು ಕೈಗೊಂಡಂತೆ ರೇಣುಕರು ರೇವಣಸಿದ್ಧ ಎಂಬ ಹೆಸರು ತಳೆದು ಅಂತಹುದೇ ಕಾರ್ಯವನ್ನು ಕೈಗೊಂಡರೆಂಬ ಕಲ್ಪನೆಯಾಗಿದೆ. ಐತಿಹಾಸಿಕ ವ್ಯಕ್ತಿಯಾದ ಬಸವನ ಹಿರಿಯ ಸಮಕಾಲೀನರು ಎಂಬ ಪುರಾವೆಯನ್ನು ಗಮನಿಸಿದಾಗ ರೇಣುಕರೆ ವೀರಶೈವ ಧರ್ಮದ ಸ್ಥಾಪಕರು ಎಂದು ಗುರುತಿಸಲಾಗದು.

ಬಸವಣ್ಣನವರು ವೀರಶೈವ ಧರ್ಮ ಸ್ಥಾಪಕರಲ್ಲ, ಅವರು ಆ ಧರ್ಮ ಸ್ಥಾಪಿಸಿ ಷಟ್‌ಸ್ಥಲ ಸಿದ್ಧಾಂತವನ್ನು ಪಂಚಾಚಾರಗಳನ್ನು ರೂಪಿಸಿ ಇಷ್ಟಲಿಂಗದ ಪರಿಕಲ್ಪನೆಯನ್ನು ಪ್ರಪ್ರಥಮವಾಗಿ ಕಂಡು ಅದನ್ನೆಲ್ಲ ತನ್ನ ಬದುಕಿನ ಐದಾರು ದಶಕಗಳ ಅವಧಿಯಲ್ಲಿ ಪ್ರಚಾರ ಮಾಡಿದರೆಂಬುದು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವನಿಗಿಂತ ಪೂರ್ವದಲ್ಲಿ ಸುಮಾರು ನಲವತ್ತು ವರ್ಷಗಳ ಹಿಂದಿದ್ದ ಕೊಂಡಗುಳಿ ಕೇಶಿರಾಜರಲ್ಲಿಯೇ (ಕ್ರಿ.ಶ.1120)

ವೀರಶೈವ ಧರ್ಮದ ಪರಿಭಾಷೆ ಕಾಣಿಸಿಕೊಂಡಿದೆ. ಅಂದರೆ ಬಸವಣ್ಣನ ಕಾಲಕ್ಕಿಂತ ಪೂರ್ವದಲ್ಲಿ ವೀರಶೈವ ಧರ್ಮ ಬೆಳೆದು ನಿಂತಿದೆಯೆಂಬುದು ಬೇರೆ ಹೇಳಬೇಕಾಗಿಲ್ಲ.

ಹನ್ನೆರಡನೇ ಶತಮಾನಕ್ಕಿಂತ ಪೂರ್ವದಲ್ಲಿ ವೀರಶೈವ ಧರ್ಮ ಇತ್ತಾದರೂ ಅದು ಅಷ್ಟೊಂದು ಪ್ರಚಾರದಲ್ಲಿ ಇರಲಿಲ್ಲ. ಅದರ ಪ್ರಾರಂಭಿಕ ಇತಿಹಾಸ ಮುಸುಕಾಗಿಯೇ ಇತ್ತೆಂದು ಹೇಳಬಹುದು. ಅದು ಸುಸಂಘಟಿತವಾಗಿ ಹಾಗೂ ವ್ಯವಸ್ಥಿತವಾಗಿ ರೂಪ ತಾಳಿ ಬೆಳಕಿಗೆ ಬಂದದ್ದು ಬಸವಣ್ಣನವರ ಕಾಲದಲ್ಲಿಯೇ ಎಂದು ನಿಸ್ಸಂದೇಹವಾಗಿ ಹೇಳಬಹುದು. ಬಸವಾದಿ ಪ್ರಮಥರು ನಡೆಸಿದ ವಚನ ಚಳುವಳಿ, ವಚನ ಕ್ರಾಂತಿ, ಧಾರ್ಮಿಕ ಕ್ರಾಂತಿ, ಸಾಮಾಜಿಕ ಕ್ರಾಂತಿ ಮುಂತಾದ ಕ್ರಾಂತಿ ಚಳುವಳಿಗಳ ಮುಖಾಂತರ ವೀರಶೈವ ಧರ್ಮವು ಹೆಚ್ಚಿನ ಪ್ರಚಾರ ತಾಳಿ ವೀರಶೈವ ಧರ್ಮಕ್ಕೆ ಹೊಸ ಕಳೆಬಂತು. ಶರಣ ಚಳುವಳಿಯಲ್ಲಿ ಅಸಂಖ್ಯಾತ ಭಕ್ತ ಸಮೂಹದವರು (ವೀರಶೈವರು) ಸೇರಿಕೊಂಡು ಪ್ರತಿಭಟನೆಯ ಹೊನಲುಗಳನ್ನು ಪ್ರವಾಹರೂಪವಾಗಿ ಕಂಡವು. ಇಂತಹ ಚಳುವಳಿ ನಡೆದದ್ದು ಪ್ರಪ್ರಥಮ. ಈ ಚಳುವಳಿಯ ರೂವಾರಿಯಾದ ಹಾಗೂ ಕೇಂದ್ರ ವ್ಯಕ್ತಿಯೇ ಬಸವಣ್ಣ ಎಂಬುದು ಎಲ್ಲರಿಗೂ ತಿಳಿದ ವಿಷಯ. ಅವರ ಜೊತೆ ಅಲ್ಲಮಪ್ರಭು, ಚನ್ನಬಸವಣ್ಣ, ಮಡಿವಾಳ ಮಾಚಿದೇವ ಡೋಹಾರ ಕಕ್ಕಯ್ಯ, ಅಕ್ಕಮಹಾದೇವಿ ಮುಂತಾದ ಶರಣ ಶರಣೆಯರು ಈ ಚಳುವಳಿಯಲ್ಲಿ ಭಾಗವಹಿಸಿದ್ದರು.

ಅಧ್ಯಯನದ ಉದ್ದೇಶ :

ಯಾವುದೇ ಒಂದು ಅಧ್ಯಯನವು ಐತಿಹಾಸಿಕ ದೃಷ್ಟಿಯಿಂದ ಅಧ್ಯಯನಿಸುವಾಗ ಅದರ ಮೂಲ ನೆಲೆಯನ್ನು ಪತ್ತೆಹಚ್ಚುವುದು ಬಹುಮುಖ್ಯ. ವಿವಿಧ ನೆಲೆಗಳಿಂದ ಆಕಾರಗಳಿಂದ ಅನುಕೂಲಕ್ಕೆ ತಕ್ಕಂತೆ ಸಂಶೋಧನಾತ್ಮಕವಾಗಿ ನೋಡಿದರೆ ಅದು ಒಂದು ವ್ಯವಸ್ಥಿತ ರೀತಿಯಲ್ಲಿ ಕಾಣಲು ಸಾಧ್ಯವಾಗುತ್ತದೆ. 12ನೇ ಶತಮಾನದ ಪೂರ್ವದಿಂದಲೂ ವೀರಶೈವ ಮಠಗಳು ಬೀದರ ಜಿಲ್ಲೆಯಲ್ಲಿ ವ್ಯಾಪಕವಾಗಿ ಬೆಳೆದುಬಂದಿವೆ. ಮಠಗಳ ಮಠಾಧೀಶರು ಸಾಮಾಜಿಕ ಬದಲಾವಣೆ ಮಾಡಲು ಶತ ಪ್ರಯತ್ನ ಮಾಡುತ್ತಿದ್ದಾರೆ. ಭಕ್ತ ಸಮೂಹವನ್ನು ಪ್ರೀತಿ ವಿಶ್ವಾಸಗಳಿಂದ ಕಾಣುತ್ತಿರುವ ಮಠಾಧೀಶರು ಸಮಾಜ ಮುಖಿಯಾದ ಕಾರ್ಯಗಳನ್ನು ಮಾಡುತ್ತಿರುವುದು ಸತ್ಯ.

ಬೀದರ ಜಿಲ್ಲೆಯಲ್ಲಿ ಒಳಗೊಂಡಿರುವ ಐದು ತಾಲ್ಲೂಕುಗಳನ್ನು ಅಧ್ಯಯನದ ದೃಷ್ಟಿಯಿಂದ ನೋಡಿದಾಗ ಇಲ್ಲಿ ಸುಮಾರು 24 ವೀರಶೈವ ಮಠಗಳು ದೊರೆಯುತ್ತವೆ. ಅವುಗಳಲ್ಲಿ ಸುಮಾರು 14 ವೀರಶೈವ ಮಠಗಳು ಪ್ರಚಲಿತದಲ್ಲಿವೆ. ಅಂದರೆ ಮಠದಲ್ಲಿ ಮಠಾಧೀಶರು ದೊರೆಯುತ್ತಾರೆ. ಉಳಿದ ಮಠಗಳು ಹಾಳು-ದೇಗುಲದಂತೆ

ಕಾಣುವುದು ಸತ್ಯ. ಸಾಮಾಜಿಕ ಬದಲಾವಣೆಯಲ್ಲಿ ಬೀದರ ಜಿಲ್ಲೆಯ ವೀರಶೈವ ಮಠಗಳ ಪಾತ್ರ ಶ್ರೇಷ್ಠವಾದದ್ದು. ವೀರಶೈವ ಮಠಗಳು ಧಾರ್ಮಿಕ ಕೇಂದ್ರಗಳಾಗಿ ಜನಪರವಾದ ಅನೇಕ ಸಮಾಜ ಸೇವಾ ಕಾರ್ಯಗಳಲ್ಲಿ ತಲ್ಲೀನವಾಗಿವೆ. ಇಂತಹ ಮಠಗಳನ್ನು ಪತ್ತೆಹಚ್ಚುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಮಠಾಧೀಶರು ಮಠಗಳನ್ನು ಕಟ್ಟಿಕೊಂಡು ಅವುಗಳಲ್ಲಿ ನೆಲೆ ನಿಂತು ವೀರಶೈವ ಧರ್ಮ ಹಾಗೂ ನಂಬುಗೆಗಳನ್ನು ಪ್ರಸಾರ ಕಾರ್ಯಗಳನ್ನು ಎಂದಿನಿಂದಲೂ ಆರಂಭಿಸಿ ಬರುತ್ತಿದ್ದಾರೆ. ಸಮಾಜ ಮುಖಿಯೊಂದಿಗೆ ಬೆರೆತು ಮಠಗಳು ದಾಸೋಹಕ್ಕೆ ಸಂಬಂಧ ಹೊಂದಿವೆ. ಇವುಗಳ ಮೂಲಕ ಅಸ್ಪೃಶ್ಯತಾ ನಿವಾರಣೆ ಮಾಡಿ ಸಮಾನತೆಯನ್ನು ತಂದುಕೊಟ್ಟಿರುವುದನ್ನು ಶೋಧಿಸುವುದು ಈ ಪ್ರಬಂಧದ ಮುಖ್ಯ ಧ್ಯೇಯವಾಗಿದೆ. ಅಂತರ ಜಾತಿಯ ವಿವಾಹ ಮಾಡಿಸುವ ಮೂಲಕ ಮಠಾಧೀಶರು ಮಠಗಳ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ವೀರಶೈವ ಮಠಗಳ ಶಿಕ್ಷಣ ಕೇಂದ್ರಗಳನ್ನು ತೆರೆದು ಅವುಗಳ ಮೂಲಕ ಸಾಮಾಜಿಕ ಬದಲಾವಣೆಗಳನ್ನು ಮಾಡುತ್ತಿರುವುದು ಶ್ಲಾಘನೀಯ.

ವೀರಶೈವ ಮಠಗಳಲ್ಲಿ ದಾಸೋಹ ಮಠಗಳು ಹಾಗೂ ವಿರಕ್ತ ಮಠಗಳು ಪ್ರತ್ಯೇಕ ಬದಲಾವಣೆಗಳನ್ನು ಗುರುತಿಸುವುದಲ್ಲದೆ, ಈ ಎರಡು ಮಠಗಳ ತತ್ವಗಳನ್ನು ಕೂಲಂಕಷವಾಗಿ ಚರ್ಚಿಸುವುದು. ಮುಖ್ಯವಾಗಿ ವೀರಶೈವ ಮಠಗಳ ಕಾರ್ಯ ವಿವರಣೆಯ ಮೂಲಕ ಸಾಮಾಜಿಕ ಬದಲಾವಣೆ ಮಾಡಿದ ಪರಿಯನ್ನು ಶೋಧಿಸುವುದು. ಹೀಗೆ ಬೀದರ ಜಿಲ್ಲೆಯ ವೀರಶೈವ ಮಠಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಗುರುತಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ :

ಬೀದರ ಜಿಲ್ಲೆಯ ವ್ಯಾಪ್ತಿಯೂ ಚಿಕ್ಕದಾಗಿದ್ದರೂ ಇದರ ಕೀರ್ತಿ ಇತಿಹಾಸದ ಪುಟ ಪುಟಗಳಲ್ಲಿ ದೊರೆಯುತ್ತದೆ. ಐದು ತಾಲ್ಲೂಕುಗಳನ್ನೊಳಗೊಂಡ ಬೀದರ ಜಿಲ್ಲೆಯಲ್ಲಿ ವೀರಶೈವ ಧರ್ಮವೂ ತನ್ನದೇ ಆದ ವೈಶಾಲ್ಯತೆ ಹೊಂದಿದೆ. ವೀರಶೈವ ಧರ್ಮದ ಕೇಂದ್ರ ಬಿಂದುವಾದ ಅನುಭವ ಮಂಟಪ ಬೀದರ ಜಿಲ್ಲೆಯಲ್ಲಿದೆ. ಇಲ್ಲಿದೆ ಅನೇಕ ಹರ-ಗುರು ಜಂಗಮ ಪುಂಗದವರು ನೆಲೆ ನಿಂತು ತಮ್ಮ ಅಮೂಲ್ಯವಾದ ತತ್ವಗಳನ್ನು ಬೆಳಕಿಗೆ ತಂದಿದ್ದಾರೆ. ಧರ್ಮಶಾಸ್ತ್ರದ ಹಿನ್ನೆಲೆಯಲ್ಲಿ ಕರ್ನಾಟಕದಾದ್ಯಂತ ವೀರಶೈವ ಮಠಗಳು ದೊರೆಯುತ್ತವೆ.

ಪ್ರಸ್ತುತ ಅಧ್ಯಯನವು ಬೀದರ ಜಿಲ್ಲೆ ಐದು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಒಳಗೊಂಡಿರುವ ವೀರಶೈವ ಮಠಗಳ ಅಧ್ಯಯನಿಸಲಾಗುವುದು. ಈ ಕ್ಷೇತ್ರಗಳಲ್ಲಿ ಕಾರ್ಯವ್ಯಾಪ್ತಿಯನ್ನು ಮಾಡಿದಾಗ ಭಾಲ್ಕಿ ಹೀರೆಮಠ,

ಭಾತಂಬ್ರಾ ವಿರಕ್ತಮಠ, ಚಾಂಬೋಳ ಹಿರೇಮಠ, ಗಡಿಗೌಡಗಾಂವ ಹಿರೇಮಠ ಹೀಗೆ ಬೀದರ ಜಿಲ್ಲೆಯ ವ್ಯಾಪ್ತಿಯಲ್ಲಿ ಮುಂತಾದ ಕಡೆ ವೀರಶೈವ ಮಠಗಳು ದೊರೆಯುತ್ತವೆ.

ಬೀದರ ಜಿಲ್ಲೆಯ ವೀರಶೈವ ಮಠಗಳು ಧಾರ್ಮಿಕ ಕೇಂದ್ರಗಳಾಗಿವೆ. ಅವುಗಳ ಪಾತ್ರ ಹಿರಿದಾದುದು. ಸಾಮಾಜಿಕ ಬದಲಾವಣೆಯಲ್ಲಿ ಹಲವಾರು ವೀರಶೈವ ಮಠಗಳು ಪ್ರಮುಖ ಪಾತ್ರವೆನಿಸಿವೆ. ಉದಾಹರಣೆಗೆ ಭಾಲ್ಕಿ ಮಠದ ಶತಾಯುಷಿಯಾದ ಚೆನ್ನಬಸವ ಪಟ್ಟದೇವರು ಮಠದ ಪ್ರಗತಿಯೊಂದಿಗೆ ಹಲವಾರು ಸಮಾಜಮುಖಿ ರಿಜ '~ರಿ ♦ j j▮ A ‡ Z ; oÚ ȧ 107 ವರ್ಷ ಬಾಳಿದ ಮಹಾಪುರುಷರು. ನಾಡಿಗಾಗಿ, ನುಡಿಗಾಗಿ, ಜನರ ಬದುಕಿಗಾಗಿ, ವೀರತನದಿಂದ ಬದುಕಿ ಬಾಳಿದ ಮಠಾಧೀಶರು ಜಾತಿ ಪದ್ಧತಿ ನಿರ್ಮೂಲನೆ ಮಾಡಿ ಶರಣರ ಆದರ್ಶ ತತ್ವಗಳನ್ನು ಸಾರ್ವಜನಿಕರಿಗೆ ತಿಳಿಸುವುದಲ್ಲದೆ ಅದನ್ನು ಅನುಷ್ಠಾನದಲ್ಲಿ ತಂದ ಧೀಮಂತರು. ಅವರಿಗೆ ಕಾಯಕಯೋಗಿ ಎಂದೇ ಕರೆಯುತ್ತಾರೆ. ಇಂತಹ ಸರ್ವತೋಮುಖ ಅಭಿವೃದ್ಧಿ ಸಾಧಿಸಬೇಕಾದರೆ ಮಠಾಧಿಪತಿಗಳ ಸ್ಥಾನ ಹಿರಿದು. ಒಟ್ಟಾರೆಯಾಗಿ ಬೀದರ ಜಿಲ್ಲೆಯಲ್ಲಿ ಒಳಗೊಂಡ ವೀರಶೈವ ಮಠಗಳನ್ನು ಐತಿಹಾಸಿಕವಾಗಿ ಕಂಡುಹಿಡಿಯುವುದು. ಈ ಅಧ್ಯಯನ ಸಹ ವ್ಯಾಪ್ತಿಯಾಗಿದೆ.

ಅಧ್ಯಯನದ ವಿಧಾನ :

ಈ ಅಧ್ಯಯನದಲ್ಲಿ ಮೂರು ರೀತಿಯ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಮೊದಲನೆಯ ವಿಧಾನವು ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದೆ. ಬೀದರ ಜಿಲ್ಲೆಯ ಭಾಲ್ಕಿಯ ಹಿರೇಮಠ, ಹುಲಸೂರು ವಿರಕ್ತಿಮಠ, ಬಾತಂಬ್ರಾ, ವಿರಕ್ತಮಠ, ಬೀದರ ಸಿದ್ಧಾರೂಡಮಠ, ಹುಲಕುಂಠಿ, ಬೇಮಳಖೇಡಾ ಮಠ, ಅಲಿಯಂಬರ ಮಠ, ಠಾಣಕುಸನೂರು ಮಠ ಮತ್ತು ಚಾಂಬೋಳ ಮಠಗಳ ಪ್ರದೇಶಗಳಲ್ಲಿ ಕ್ಷೇತ್ರ ಕಾರ್ಯವನ್ನು ಕೈಗೊಳ್ಳಲಾಗಿದೆ. ಮಠಗಳ ಇತಿಹಾಸ ಮಠಾಧೀಶರ ವೈಶಾವಳಿ ತಿಳಿದುಕೊಳ್ಳುವ ಬಗ್ಗೆ ಅಧ್ಯಯನ ನಡೆಸಲು ಈ ವಿಧಾನವನ್ನು ಅಳವಡಿಸಿದೆ. ಎರಡನೆ ವಿಧಾನವು ಮೌಖಿಕ ಮಾಹಿತಿ ಸಂಗ್ರಹಣೆಯ ವಿಧಾನಕ್ಕೆ ಸಂಬಂಧಿಸಿದೆ. ಮಠವು ಸಲ್ಲಿಸಿದ ಸೇವೆಯನ್ನು ಈ ವಿಧಾನದಿಂದ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಮೂರನೇ ವಿಧಾನವು ಪ್ರಾಥಮಿಕ ಆಕರಗಳು, ದ್ವಿತೀಯ ಆಕರಗಳು ಎಂಬ ಎರಡು ವಿಧದ ಅಧ್ಯಯನ ಸಾಮಾಗ್ರಿಗಳ ಸಂಗ್ರಹಣೆ ಹಾಗೂ ಉಪಯೋಗಕ್ಕೆ ಸಂಬಂಧಿಸಿದೆ. ಪ್ರಾಥಮಿಕ ಮತ್ತು ದ್ವಿತೀಯ ಆಕರಗಳಿಂದ ಮಠಗಳ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಕ್ಷೇತ್ರಗಳಲ್ಲಿ ಕೈಗೊಂಡ ಕಾರ್ಯವನ್ನು ಪತ್ತೆಹಚ್ಚಲು ಈ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಈ ಮೂರು ವಿಧಾನಗಳಿಂದ ಪಡೆದ ಅಧ್ಯಯನ ಸಾಮಗ್ರಿಗಳನ್ನು ಅಧ್ಯಯನದ ಉದ್ದೇಶಕ್ಕೆ ಧಕ್ಕೆ ಬರದಂತೆ ಔಚಿತ್ಯಪೂರ್ಣವಾಗಿ ಬಳಸಿಕೊಳ್ಳಲಾಗಿದೆ. ಇವುಗಳಿಂದ ಪಡೆದ ಮಾಹಿತಿಗಳಲ್ಲಿ ಕೆಳಕಂಡ ರೀತಿಯಲ್ಲಿ ಸ್ಥೂಲವಾಗಿ ವರ್ಗೀಕರಿಸಲಾಗಿದೆ.

1. ಮಾಹಿತಿಗಳ ಸಂಗ್ರಹಣೆ

2. ಅವುಗಳ ವರ್ಗೀಕರಣ

3. ವಿಶ್ಲೇಷಣೆ

4. ಊಹಾತ್ಮಕ ಪರಿಕಲ್ಪನೆ

ಅಧ್ಯಯನದ ವಿಂಗಡಣೆ :

ಪ್ರಬಂಧದ ಮೊದಲನೆ ಅಧ್ಯಾಯದಲ್ಲಿ ಪ್ರಸ್ತಾವನೆ ಹೇಳುತ್ತಾ ಬೀದರ ಜಿಲ್ಲೆಯ ಇತಿಹಾಸ, ವೀರಶೈವ ಧರ್ಮ, ಅಧ್ಯಯನದ ಉದ್ದೇಶ, ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಎರಡನೇ ಅಧ್ಯಾಯವು ಮಠಗಳ ಅರ್ಥ, ಸ್ವರೂಪ ಮತ್ತು ಇತಿಹಾಸ ಎಂದು ವಿಭಾಗಿಸಲಾಗಿದೆ. ಇದರಲ್ಲಿ ಮಠ ಎಂದರೇನು, ಮಠದ ಅರ್ಥ ನೀಡುತ್ತಾ ಮಠಗಳ ಪ್ರಕಾರಗಳು ಹಾಗೂ ಮಠಗಳ ಪ್ರಾಚೀನತೆಯ ಸ್ವರೂಪ ಇತಿಹಾಸವನ್ನು ಒತ್ತಿ ಹೇಳಲಾಗಿದೆ.

ಬೀದರ ಜಿಲ್ಲೆಯ ಪ್ರಮುಖ ಮಠಗಳ ಇತಿಹಾಸವೆಂಬುದು ಮೂರನೇ ಅಧ್ಯಾಯ ಒಳಗೊಂಡಿದೆ. ಈ ಅಧ್ಯಾಯವು ಇಡೀ ಬೀದರ ಜಿಲ್ಲೆಯ ವ್ಯಾಪ್ತಿಯಲ್ಲಿ ಒಳಗೊಂಡಿರುವ ವೀರಶೈವ ಮಠಗಳ ಇತಿಹಾಸವನ್ನು ಸಂಶೋಧನ ದೃಷ್ಟಿಯಿಂದ ನೋಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸಾಮಾಜಿಕ ಬದಲಾವಣೆಯಲ್ಲಿ ಮಠಗಳ ಪಾತ್ರ ಎಂಬ ಶೀರ್ಷಿಕೆಯನ್ನು ಕೊಡಲಾಗಿದೆ. ಈ ಅಧ್ಯಾಯವು ಈ ಮಹಾಪ್ರಬಂಧದ ಕೇಂದ್ರಬಿಂದುವಾಗಿದೆ. ಇದರ ಮುಖಾಂತರ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಪಾತ್ರವನ್ನು ಎಳೆಎಳೆಯಾಗಿ ಪ್ರಸ್ತಾಪಿಸಲಾಗಿದೆ. ಅಲ್ಲದೆ ದಾಸೋಹ ಕೇಂದ್ರಗಳಾಗಿ, ಕಲ್ಯಾಣ ಕೇಂದ್ರಗಳಾಗಿ, ಆರೋಗ್ಯ ಕೇಂದ್ರಗಳಾಗಿ ಸಲ್ಲಿಸುತ್ತಿರುವ ಕೊಡುಗೆ ಗಮನಾರ್ಹವಾದುದು.

ಅಧ್ಯಾಯ ಐದು ಉಪಸಂಹಾರ ಭಾಗವಾಗಿರುತ್ತದೆ. ಅನಂತರ ಅನುಬಂಧಗಳು ಮತ್ತು ಗ್ರಂಥಸೂಚಿ ಒಳಗೊಂಡಿರುತ್ತದೆ.

ಪರಾಮರ್ಶನ ಗ್ರಂಥಗಳು

1) ಎಂ. ಜಿ. ನಂಜುಂಡರಾಧ್ಯ : ಸ್ಮರಣ ಸಂಚಿಕೆ (ಸಂಪುಟ) ಸಂ. ಡಾ. ಹೆಚ್.ಪಿ. ಮಲ್ಲದೇವರು (1983).

2) ಎರಿಸಿಮೆ ಚೆನ್ನಪ್ಪ - ಟಿ.ಆರ್. ಮಹಾದೇವಯ್ಯ : ದಾಸೋಹ ಸಿರಿ (1981).

3) ಯರಿಸಿಮೆ ಚೆನ್ನಪ್ಪ - ಕೊಟ್ರೇಶ ಆರಾಧ್ಯ : ದಾಸೋಹ ಸಿರಿ (1981).

4) ವಿ. ಶಿವಾನಂದ : ಹೈ.ಕ. ಭಾಗದ ಕನ್ನಡ ಶಿಲಾಶಾಸನಗಳು (1992).

5) ಯರಿಸಿಮೆ ಚನ್ನಪ್ಪ -ಷಣ್ಮುಕಯ ಅಂಕುರಮಠ : ದಾಸೋಹ ಸಿರಿ (1981).

6) ಎಚ್. ತಿಪ್ಪೇರುದ್ರಸ್ವಾಮಿ : ಕನ್ನಡ ವಿಶ್ವಕೋಶ - ಸಂಪುಟ 12.

7. ಮಲ್ಲೇದೇವರು : (ಸ್ಮರಣ ಸಂ.) ಡಾ. ಜಿ ಶಿವರುದ್ರಪ್ಪ - ಅರ್ಚನ (1984).

8. ಎಚ್. ಎಂ. ಸದಾಶಿವಯ್ಯ : ಸಿದ್ದಗಂಗಾ ಶ್ರೀ

9. ಎ.ಕೆ. vii, ಶಿಕಾರಿಪೂರ

10. ಎಚ್. ಎಂ. ಸದಾಶಿವಯ್ಯಾ : ಸಿದ್ಧಗಂಗಾ ಶ್ರೀ

11. ಎಂ.ಎಂ. ಕಲ್ಬುರ್ಗಿ - ಎನ್. ವಿದ್ಯಾಶಂಕರ : ಸಮಗ್ರ ವಚನ ಸಂಪುಟ.

12. ಎಂ.ಎಂ. ಕಲ್ಬುರ್ಗಿ : ಕರ್ನಾಟಕದ ಕೈಫಿಯತ್ತುಗಳು (ಸಂಪಾದಕರು)

13. ಎ.ಕೆ. ix, ದೊಡ್ಡಬಳ್ಳಾಪುರ.

14. ವೈ.ಎಚ್. ನಾಯಕವಾಡಿ, ಬೀದರ ಜಿಲ್ಲೆಯ ಮಠಗಳು (ಅಪ್ರಕಟಿತ ಲೇಖನ) 2008.

ಅಧ್ಯಾಯ - 2

ಮಠಗಳ ಇತಿಹಾಸ

ಮಠಗಳ ಅರ್ಥ ಮತ್ತು ಸ್ವರೂಪ

ಮಠವೆಂದರೆ ಆಶ್ರಯ, ಧಾರ್ಮಿಕ ಕೇಂದ್ರ, ವಿದ್ಯಾಲಯ, ದೇವಾಲಯ, ಸನ್ಯಾಸಿಗಳು, ಸಂಸಾರಿಕ ಜೀವನ ತ್ಯಾಗ ಮಾಡಿದ ವಿರಕ್ತರ, ಮುನಿಗಳ ವಾಸಸ್ಥಾನ. ಇಂತಹ ವಿಭಿನ್ನ ಅರ್ಥವನ್ನು ಪ್ರಾಚೀನ ಕಾಲದಿಂದಲೂ ಹುಟ್ಟಿಕೊಂಡಿದೆ. ಮಠ ಶಬ್ದವು ಮೂಲತಃ ಸಂಸ್ಕೃತದಲ್ಲಿ ಬಳಕೆಯಾಗಿ "ಮಠತಿ" ಎಂಬ ಶಬ್ದವು ಕನ್ನಡಕ್ಕೆ ಪರ್ಯಾಯವಾಗಿ ಬಳಸಿಕೊಳ್ಳಲಾಗಿದೆ. ಈ ಶಬ್ದವು ಮಂದಿರ, ದೇವಾಲಯ, ಗುರುಕುಲ ವಿದ್ಯಾರ್ಥಿಗಳ ಕುಟೀರ ಎಂದು ಸಹ ಕರೆಯಲಾಗಿದೆ.

ಒಟ್ಟಾರೆಯಾಗಿ ಸನ್ಯಾಸಿಗಳ ವಾಸಸ್ಥಳ ಹಾಗೂ ಆಶ್ರಮಗಳಿಗೆ ವಿದ್ಯಾಲಯವೆನ್ನುವ ಅರ್ಥದಲ್ಲಿ ಬಳಕೆಯಾಯಿತೆಂದು ವಿದ್ವಾಂಸರ ಅಭಿಪ್ರಾಯ. ಮಠ ಶಬ್ದಕ್ಕೆ ಆಂಗ್ಲ ಭಾಷೆಯಲ್ಲಿ ಒಠಟಚಿಣಜಡಿಥಿ ಎಂಬ ಪದವಿದೆ. ಇದು ಗ್ರೀಕ್ ಮೂಲಕ ಒಠಡಿಚಿಛಿಠ ನಿಂದ ಬಂದಿದ್ದು. "ಸಂಸ್ಕೃತದ ನಿಘಂಟುಕಾರನಾದ ಅಮರಕೋಶದ ಅರ್ಥದಲ್ಲಿ ಅಮರಸಿಂಹನು ಹೇಳಿರುವಂತೆ ಮಠ ಎಂದರೆ ಧರ್ಮ ಕ್ಷೇತ್ರ, ಛತ್ರಾದಿನಿಲಯ, ಇಲ್ಲವೆ ಪರೋಪಕಾರದ ಆಗರ ಎಂದು ನುಡಿಯುತ್ತಾರೆ. ವೇದಗಳ ಕಾಲದಲ್ಲಿ ವನವಾಸಿಗಳಾಗಿದ್ದ ಋಷಿ ಮುನಿಗಳು ತಮ್ಮ ಆಶ್ರಮಗಳಲ್ಲಿ ವಿದ್ಯಾರ್ಥಿಗಳಿಗಾಗಿ ಪೂರ್ಣ ಶಾಲೆಗಳನ್ನು ರಚಿಸಿ ಅಲ್ಲಿಯವರೆಗೆ ವಿದ್ಯೆ ಕಲಿಸುತ್ತಿದ್ದ ಇವೇ ಗುರುಕುಲಗಳು ಈ ಗುರುಕುಲದ ಪರ್ಯಾಯ ನಾಮವೆ ಮಠ.

ಸಂಸ್ಕೃತದ ಶಬ್ದಕೋಶದಲ್ಲಿ ಮ್ಯಾಂಡೋಸಲರ ಅವರು ಹೇಳಿರುವಂತೆ, ಒಬ್ಬ ಸನ್ಯಾಸಿ ಇಲ್ಲವೆ ಅಭ್ಯರ್ಥಿಯ ಕುಟೀರ. ಒಂದು ಧಾರ್ಮಿಕ ಸಂಸ್ಥೆಯ ಇಲ್ಲವೆ ಪಾಠ ಶಾಲೆಯ ಮುಖ್ಯಸ್ಥ ಎಂಬ ಅರ್ಥವನ್ನು ನೀಡಿದ್ದಾರೆ. ಖ್ಯಾತ ಸಮಾಜಶಾಸ್ತ್ರಜ್ಞರಾದ ಪುರಿಯವರ ಅಭಿಪ್ರಾಯದಂತೆ ವ್ಯಕ್ತಿ ಸಂಸಾರಿಕ ಜೀವನವನ್ನು ತ್ಯಜಿಸಿ ಸನ್ಯಾಸಿ ಜೀವನಕ್ಕೆ ಬಂದಾಗ ಅವನಿಗೆ ಅವಶ್ಯಕವಾಗಿ ವಾಸಸ್ಥಾನ ಬೇಡಾಗಿದೆ. ಕವಿ ಪುಂಗವರ ನೆಲೆಮನೆಯಾಗಿದೆ. ಇಂತಹ ಪವಿತ್ರಕ್ಷೇತ್ರದ ಇತಿಹಾಸವನ್ನು ಅಧ್ಯಯನಿಸುವಾಗ ಹಲವಾರು ವಿಭಿನ್ನ ರೀತಿಯ ಕಲೆಗಳು ಗಮನ ಸೆಳೆಯುವುದನ್ನು ಕಾಣುತ್ತೇವೆ. ಸನ್ಯಾಸಿ ಜೀವನದ ನಿಯಮವನ್ನು ಪಾಲಿಸಲು ಒಂದು ಸಂಘಟನಾತ್ಮಕ ವ್ಯವಸ್ಥೆ ಬೇಕಾಗುತ್ತದೆ. ಇದನ್ನೆ 'ಮಠ' ಎಂದು ಕರೆಯುತ್ತಾರೆ.

ಖ್ಯಾತ ವಿದ್ವಾಂಸರಾದ ಆಪ್ಟೆಯವರು ತಮ್ಮ ಸಂಸ್ಕೃತ ಹಿಂದಿಕೋಶದಲ್ಲಿ ಹೇಳಿರುವಂತೆ ಮಠವೆಂದರೆ ಸನ್ಯಾಸಿಯ ಕೊಠಡಿ, ಸಾಧಕರ ಕುಟೀರ, ವಿಹಾರ, ಶಿಕ್ಷಾಲಯ, ವಿದ್ಯಾಮಂದಿರ, ಜ್ಞಾನಪೀಠ, ದೇವಾಲಯ, ಮಂದಿರ ಮುಂತಾದ ಅರ್ಥ ಹೇಳುತ್ತಾರೆ. ಸನ್ಯಾಸಿಗಳು, ಸಾಧಕರು, ಸಂಸಾರಿಕ ಜೀವನ ತ್ಯಾಗ ಮಾಡಿದ ವಿರಕ್ತರು ತಮ್ಮ ದಿನನಿತ್ಯ ಪೂಜೆ, ಪಾಠಗಳನ್ನು ಹಾಗೂ ಆಧ್ಯಾತ್ಮಿಕ ಚಿಂತನೆಗಾಗಿ ಪ್ರಶಾಂತ ಸ್ಥಳ ನೇಮಕ ಮಾಡಿಕೊಳ್ಳುತ್ತಿದ್ದರು. ಆ ಸ್ಥಳಗಳಿಗೆ ಆಶ್ರಮಗಳೆಂದು ಕರೆಯುತ್ತಿದ್ದರು. ಇಂತಹ ಆಶ್ರಮಗಳಿಗೆ ಮುಂದೆ ಕಾಲಾಂತರವಾಗಿ ಪರಿಣಮಿಸಿ ಮಠಗಳಾಗಿ ಪರಿವರ್ತನೆಗೊಂಡವು.

"ಮಠವೆಂದರೆ ವಿದ್ಯಾಗಾರ, ಕೆಲವಂತು ಒಳ್ಳೆಯ ವಿಶ್ವವಿದ್ಯಾಲಯದಂತೆ ಇದ್ದು, ಅಲ್ಲಿ ಅಧ್ಯಯನ, ಅಧ್ಯಾಪನ ಹಾಗೂ ಪ್ರಕಾರಗಳು ನಿರಂತರವಾಗಿ ನಡೆಯುತ್ತವೆ". "ಮಠವೆಂದರೆ ಕೇವಲ ಆಶ್ರಯ ಮಾತ್ರವಲ್ಲ ಅದೊಂದು ಧಾರ್ಮಿಕ ಕೇಂದ್ರವಾಗಿ ಪರಿಣಮಿಸುತ್ತದೆ. ಸಮಸ್ತ ಸಮಾಜವೇ ಸಾಂಘಿಕವಾಗಿ ವಿಕಾಸಗೊಳ್ಳುವಂತೆ ಮಾಡುವ ಪವಿತ್ರ ಕ್ಷೇತ್ರವಾಗಿರುತ್ತದೆ. ಮಠಗಳು ಮಾನವ ಕುಲದ ನಂದಾದೀಪಗಳು, ಮಠಗಳಿಂದಲೇ ಭಾರತದ ಸಂಸ್ಕೃತಿ ಉಳಿದಿರುವುದೆಂದು ಭಾರತದ ಪ್ರಥಮ ರಾಷ್ಟ್ರಪತಿಯಾದ ಡಾ|| ರಾಜೇಂದ್ರ ಪ್ರಸಾದ ಅವರು ನುಡಿಯುತ್ತಾರೆ.

ಮಠವೆಂಬ ಶಬ್ದವು ವಿವಿಧ ವಿದ್ವಾಂಸರು ವಿವಿಧ ಪ್ರಕಾರಗಳಲ್ಲಿ ಹೇಳಿರುವುದು ಗಮನಿಸಿದಾಗ ಮಠ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಮಾಜಕ್ಕೆ ಬಿಟ್ಟು ಮಠವಿಲ್ಲ, ಮಠಕ್ಕೆ ಬಿಟ್ಟು ಸಮಾಜವಿಲ್ಲ ಎನ್ನುವಂತೆ ಕರೆಯಬಹುದು. ಸಮಾಜಮುಖಿಯೊಂದಿಗೆ ಬೆರೆದು ಜನರಿಗೆ ಸುಮಾರ್ಗವನ್ನು ತೋರಿ ಅವರ ಭವಿಷ್ಯವನ್ನು ಉನ್ನತದೆಡೆಗೆ ಕರೆದೊಯ್ಯುವ ಕೇಂದ್ರಬಿಂದುಗಳಾಗಿವೆ. ಧರ್ಮರಕ್ಷಣೆಯ ಮೂಲವಾಗಿಟ್ಟುಕೊಂಡು ಮುಂದೆ ಗುರುಕುಲಗಳಾಗಿ, ವಿದ್ಯಾ ಕೇಂದ್ರಗಳಾಗಿ ಪವಿತ್ರ ಕ್ಷೇತ್ರಗಳಾಗಿ ಬೆಳೆದಿವೆ.

ಮಠಗಳ ಉಗಮ ಮತ್ತು ಬೆಳವಣಿಗೆ :

ಯಾವುದೇ ಒಂದು ವಿಶಿಷ್ಟ ಬಗೆಯ ಅಧ್ಯಯನ ಕೈಗೊಂಡಾಗ ಅದನ್ನು ಬಹುಮುಖಿ ಸಂವೇದನೆಗಳ ಮೂಲಕ ವಿವಿಧ ನೆಲೆಗಳಲ್ಲಿ ಅಧ್ಯಯಿಸಬೇಕಾಗುತ್ತದೆ. ಅಂದಾಗ ನವ-ನವೀನ ವಸ್ತು ವಿನ್ಯಾಸಗಳು ಕಂಡುಕೊಳ್ಳಲು ಅನುಕೂಲವಾಗುತ್ತದೆ. ಅಲ್ಲದೆ ಅದರಿಂದ ಹಲವಾರು ಸೂಕ್ಷ್ಮ ಸಂಗತಿಗಳು ಬೆಳಕಿಗೆ ಬರುತ್ತವೆ. ಒಂದು ಶಬ್ದದ ಅರ್ಥ ಕಂಡುಹಿಡಿಯುವುದು ಸುಲಭ ಆದರೆ ಅದರ ಮೂಲ ಸ್ವರೂಪ ಕಂಡುಹಿಡಿಯುವುದು ಅಷ್ಟು ಸುಲಭದ ಮಾತಲ್ಲ. ಆದಿಕಾಲದಿಂದಲೂ ಇಂದಿನವರೆಗೆ ಸಾಧು-ಸತ್ಪುರುಷರು, ಸನ್ಯಾಸಿಗಳು ಇದ್ದಿರುವುದು ಕಾಣುತ್ತೇವೆ. ಅವರ ಸಮಾಜಮುಖಿಯೊಂದಿಗೆ ಬೆರೆತು ಸಮಾಜ ಸೇವಕರಾಗಿ ಜನರಲ್ಲಿರುವ ಅಂಧಕಾರ ಕಲ್ಮಶಗಳನ್ನು ಕಿತ್ತೊಗೆಯಲು ಪ್ರಯತ್ನಿಸುವ ತಾಣವಾಗಿವೆ.

ಧರ್ಮ ಜ್ಞಾನಿಗಳಾಗಿ ಧರ್ಮೋಪದೇಶ ಮಾಡುತ್ತ ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ ಎಂದು ಸಂಚಾರ ಮಾಡುತ್ತಿದ್ದರು. ಇವರಿಗೆ ಯಾವುದೇ ರೀತಿಯ ನೆಲೆಗಳು ಇರಲಿಲ್ಲ. ಅವರವರ ಧರ್ಮಾಭಿಮಾನಿಗಳು ಊಟ-ಬಟ್ಟೆಗಳ ವ್ಯವಸ್ಥೆ ಮಾಡುತ್ತಿದ್ದರು. ವಸತಿಗಾಗಿ ಒಂದು ಕೋಣೆ ಕಟ್ಟಿಕೊಡುತ್ತಿದ್ದರು (ಹುಲ್ಲು) ಈ ಕೋಣೆಗೆ (ಗುಡಿಸಲು) ಜನರು ಮೊಟ್ಟ ಮೊದಲು ಆಶ್ರಮವೆಂದು ಕರೆಯುತ್ತಿದ್ದರು. ನಂತರ ಜನರ ಕಂಕಣಬದ್ಧರಾದ ಸ್ವಾಮಿಗಳು ಅಲ್ಲಿ ನೆಲೆನಿಂತರು. ಭಕ್ತ ಸಮೂಹ ಹೆಚ್ಚಾದಂತೆ ಆಶ್ರಯ ಮಠದ ಸ್ವರೂಪ ಪಡೆದುಕೊಂಡಿತು.

"ಮಠಗಳು ಜೈನ, ವೀರಶೈವ, ವೈಷ್ಣವ ಯಾವುದೇ ಮತ ಧರ್ಮದವರು ಹೊಂದಿದ್ದ ಧಾರ್ಮಿಕ ಕೇಂದ್ರವಾಗಿದ್ದರೂ ಶಾಸನಗಳ ಆಧಾರದಿಂದ ಮಧ್ಯಕಾಲೀನ ಕರ್ನಾಟಕ ಶಾಸನದಲ್ಲಿ ಶೈವ ಧರ್ಮದ ಮಠ ಮುಖ್ಯವಾಗಿ ಶಾಖಾ-ಮುಖ, ಪಾಶುಪತ ಲಾಕಿಶಿರರ ಕೇಂದ್ರಗಳು ಹೆಚ್ಚು ಪ್ರಸಿದ್ಧವಾಗಿವೆ. ಕೊಡಿ ಮಠ ಇದಕ್ಕೆ ಉಲ್ಲೇಖ". ಮಠವೆನ್ನುವ ಪದವು ಪ್ರಪ್ರಥಮ ಬಾರಿಗೆ ಬೌದ್ಧ-ಧರ್ಮದಲ್ಲಿ ಕಂಡು ಬರುತ್ತದೆ. ಅಶ್ವಘೋಷ (ಮೂರನೆ ಶತಮಾನ) ತನ್ನ ಬುದ್ಧ ಚರಿತದಲ್ಲಿ ಹೀಗೆ ಹೇಳುತ್ತದೆ.

"ಬ್ರಹ್ಮಘೋಷೋಭವೆತ ಯತ್ರ ಬ್ರಹ್ಮಗ್ರಹಿಸಿಡಿತದೆವನ ಪೂಜನಂ ದಾನಂ ಮಠ ಮಿತ್ರ ಭೀವಿಯತೆ ಎಲ್ಲಿ ವೇದಾಧ್ಯಯನ ದೇವ ಪೂಜೆ ದಾನಧರ್ಮಾದಿ ಪರೋಪಕಾರಗಳು ನಡೆಯುತ್ತವೆಯೋ ಅಲ್ಲದೆ ಬ್ರಹ್ಮಜ್ಞಾನಗಳಾದ ಸನ್ಯಾಸಿಗಳಿಗೆ ಆಗ್ರ ತಾಣವೋ ಅದುವೇ ಮಠ".

ಭಾರತೀಯ ಇತಿಹಾಸದಲ್ಲಿ ಕ್ರಿ.ಪೂ. ನಾಲ್ಕನೇ ಶತಮಾನದಷ್ಟು ಪುರಾತನ ಕಾಲದಿಂದಲೆ ಗುರುಕುಲಗಳು ಇರುವುದು ತಿಳಿದುಬರುತ್ತವೆ. ರಾಮಾಯಣದ ಕಾಲದಲ್ಲಿ ಅನೇಕ ಋಷಿಮುನಿಗಳ ಆಶ್ರಮಗಳು, ತಪೋ ಕೇಂದ್ರಗಳು ಕರ್ನಾಟಕದಲ್ಲಿ ಇದ್ದವು. "ಪ್ರಾಚೀನ ಕಾಲದ ಬೌದ್ಧ ವಿಹಾರಗಳು ಹಾಗೂ ಜೈನ ಬಸದಿಗಳು ಇಂದಿನ ಮಠಗಳ ಸ್ವರೂಪವನ್ನೇ ಹೊಂದಿದ್ದವು". ಬೌದ್ಧ ಧರ್ಮದ ನವೋದಯ ಕಾಲಕ್ಕೆ ಸನ್ಯಾಸಿ ಮಠಗಳು ಅಸ್ತಿತ್ವದಲ್ಲಿರುವುದು ಕಂಡುಬರುತ್ತದೆ. ಮಠ ಇಲ್ಲವೆ ಸನ್ಯಾಸಿಗಳ ನಿವಾಸಕ್ಕೆ ಬೌದ್ಧರು 'ವಿಹಾರ' ಅಥವಾ 'ಸಂಘ' ಎಂದು ಕರೆಯುತ್ತಿದ್ದರು. ಬೌದ್ಧ ಧರ್ಮದಲ್ಲಿ ಮಠಗಳಿಗೆ ಉನ್ನತವಾದ ಸ್ಥಾನವಿತ್ತು.

"ಮಠಗಳಂತಹ ಧಾರ್ಮಿಕ ಕೇಂದ್ರಗಳು ಪ್ರಾರಂಭಗೊಂಡು ಜನಸಾಮಾನ್ಯರ ಗಮನದಲ್ಲಿ ಇರಿಸಿಕೊಂಡಿದ್ದ ಈ ಧರ್ಮಗಳು ಸಂಘ ಸ್ವರೂಪದ ಧರ್ಮೋಪದೇಶ ಕೈಗೊಂಡವು". ಭಾರತದಲ್ಲಿ ನಾಲ್ಕು ಮೂಲೆಗಳಲ್ಲಿ ಸ್ಥಾಪಿತವಾದ ಹಿಂದೂ ಮಠಗಳು ಬೌದ್ಧಿಕ ಮತ್ತು ಆಧ್ಯಾತ್ಮಿಕ ಏಕತೆಗೆ ನಾಂದಿಯಾಗಿವೆ. ಭಾರತದ ಸಾಂಸ್ಕೃತಿಕ ಏಕತೆಯ ಕಲ್ಪನೆಯನ್ನು ವೃದ್ಧಿಗೊಳಿಸುವ ಶಂಕರರ ಬಯಕೆಗೆ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎಂಬ

ನಾಲ್ಕು ದಿಕ್ಕಿನ ಮಠಗಳು ಕಂಡುಬರುತ್ತವೆ. ಮೇಲುಕೋಟೆಯಲ್ಲಿ ನೆಲೆಸಿದ ರಾಮಾನುಜರು ವೈಷ್ಣವ ಮಠಗಳನ್ನು ಸ್ಥಾಪಿಸಿ ಸುಮಾರು ಹನ್ನೆರಡು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು ಎಂಬುದು ವಿದ್ವಾಂಸರ ಭಿಮತ. ಇವರ ತರುವಾಯ ಬರುವ ಮಧ್ವಚಾರ್ಯರು ಶ್ರೀಕೃಷ್ಣನ ಪೂಜೆಗಾಗಿ ಎಂಟು ಮಠಗಳು ಸ್ಥಾಪಿಸಿದ್ದರು. ಅವು ಯಾವುವೆಂದರೆ :

1) ಸೋದೆಮಠ	2) ಕಣ್ಣೂರ ಮಠ	3) ಶಿರೂರ ಮಠ
4) ಪೇಜಾವರ ಮಠ	5) ಅದಮಾರು ಮಠ	6) ಫಲಿಮಾರು ಮಠ
7) ಕೃಷ್ಣಪುರ ಮಠ	8) ಪುತ್ತಿಗೆ ಮಠ	

ಹೀಗೆ ಎಂಟು ಮಠಗಳು ಶ್ರೀಕೃಷ್ಣನ ಎಂಟು ಮಡದಿಯರ ಸಂಕೇತವಾಗಿ ಸ್ಥಾಪಿತವಾಗಿವೆ. ಆರಂಭದಲ್ಲಿ ಮೂರು ವಾರುಗಳ ಪರ್ಯಾಯ ಪದ್ಧತಿಯಿಂದ ಈ ಮಠದ ಸ್ವಾಮಿಗಳು ಶ್ರೀಕೃಷ್ಣ ದೇವಾಲಯದ ಪ್ರಧಾನ ಅರ್ಚಕರಾಗಿದ್ದರು.

ಶ್ರೀ ಶಂಕರಾಚಾರ್ಯರು ದೇಶದ ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದ ಮಠಗಳು ಇಂತಿವೆ :

ಕ್ರ.ಸಂ.	ಸ್ಥಳ	ರಾಜ್ಯ	ಮಠ	ಪ್ರ. ಗುರು	ವೇದಾಗಮ
01	ಪೂರ್ವಪುರ	ಒರಿಸ್ಸಾ	ಗೋವರ್ಧನ	ಪದ್ಮನಾಮ	ಋಗ್ವೇದ
02	ಪಶ್ಚಿಮ	ಗುಜರಾತ	ಕಾಳಿಮಠ	ಹಸ್ತಾಮುಖ	ಸಾಮದೇವ
03	ಉತ್ತರ ಭದ್ರಿ	ಉತ್ತರ ಪ್ರದೇಶ	ಜ್ಯೋತಿಮಠ	ತೋಂಟದಾರ್ಯ	ಅಥರ್ವವೇದ
04	ದಕ್ಷಿಣ ಶೃಂಗೇರಿ	ಕರ್ನಾಟಕ	ಗಾಂಧಾಪೀಠ	ಸುರೇಶಾಚಾರ್ಯ	ಯಜುರ್ವೇದ

ಮಠಗಳ ಇತಿಹಾಸ ಗುರುತಿಸುವಾಗ ಕ್ರಿ.ಶ. 8ನೇ ಶತಮಾನ ಎಂದು ಗುರುತಿಸಲಾಗಿದೆ. ಬೌದ್ಧ ಮತ್ತು ಜೈನ ಧರ್ಮಗಳ ಜೊತೆಗೆ ಹಿಂದೂ ಧರ್ಮವು ಪುನರುತ್ಥಾನಗೊಂಡ ಕಾಲ. ಇದು ಹಿಂದೂ ಪರಂಪರೆಯಲ್ಲಿ ಪ್ರಪ್ರಥಮವಾಗಿ ಮಠಗಳು ನಿರ್ಮಾಣ ಮಾಡಿದವರು ಶಂಕರಾಚಾರ್ಯರು ಎಂದು ಗುರುತಿಸಬಹುದು. ಆ ದೃಷ್ಟಿಯಿಂದ ಅವರು ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದವರು.

ಶಂಕರಾಚಾರ್ಯರ ಪ್ರಭಾವದಿಂದ ಗುರುಪೀಠ ಹಾಗೂ ವಿರಕ್ತ ಪೀಠಗಳು ಅಸ್ತಿತ್ವಕ್ಕೆ ಬಂದವು. ಮಹಾಭಾರತಕ್ಕಿಂತ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ರಂಭಾಪೂರಿ ರೇಣುಕಾಚಾರ್ಯ, ಉಜ್ಜಯಿನಿ ದ್ವಾರಕಚಾರ್ಯ

ಹಿಮವತ, ಕೇದಾರದ ಏಕೋ ರಾಮರಾಧ್ಯಚಾರ್ಯ, ಶ್ರೀ ಶೈಲದ ಪಂಡಿತಾರಾಧ್ಯ ಹಾಗೂ ಕಾಶಿಯ ವಿಶ್ವರಾಧ್ಯ ಎಂಬ ಐವರು ಪಂಚಾಚಾರ್ಯರು ಸ್ಥಾಪಿಸಿದ ಆಧ್ಯಾತ್ಮಿಕ ಪೀಠಗಳು ಉಪಲಬ್ಧವಿವೆ. ಈ ಐದು ಆಚಾರ್ಯರು ಐತಿಹಾಸಿಕ ಗಣ್ಯವ್ಯಕ್ತಿಗಳೆಂದು ಗುರುತಿಸಬಹುದು.

ಶ್ರೀ ಶಂಕರಾಚಾರ್ಯರ ಕಾಲದ ಬಗೆಗೆ ನಿರ್ದಿಷ್ಟ ಅಭಿಪ್ರಾಯವಿಲ್ಲ. 6ನೆಯ ಶತಮಾನದಿಂದ 8ನೆಯ ಶತಮಾನದವರೆಗೂ ಅವರ ಕಾಲದ ಬಗೆಗೆ ವಾದವಿವಾದಗಳಿವೆ. ಇದರಿಂದಾಗಿ ಕ್ರಿ.ಶ.6ನೆಯ ಶತಮಾನದಿಂದಲೇ ಕರ್ನಾಟಕದಲ್ಲಿ ಮಠಗಳು ಅಸ್ತಿತ್ವದಲ್ಲಿದ್ದವೆಂಬುದನ್ನು ಒಪ್ಪಬೇಕಾಗುತ್ತದೆ. ಕರ್ನಾಟಕ ಮಠಗಳ ಪ್ರಾಚೀನತೆಯನ್ನು ಜೈನಮತದಿಂದ ಗುರುತಿಸಬೇಕಾಗುತ್ತದೆ. ಕದಂಬದೊರೆ ಬೊಪ್ಪದೇವನು ಜೈನ ಮಠವೊಂದರ ನಿರ್ವಹಣೆಗೆ ಭೂಮಿದಾನ ಮಾಡಿದ ಉಲ್ಲೇಖ ಚಿಕ್ಕಮಾಗಡಿ ಶಾಸನದ ಮೂಲಕ ತಿಳಿದುಬರುತ್ತದೆ. ನಂತರದಲ್ಲಿ ಕ್ರಿ.ಶ. 10 ರಿಂದ 13ನೇ ಶತಮಾನದಲ್ಲಿ ಮಠಗಳು ಕಾಳಾಮುಖ ಶೈವಮತದ ಉನ್ನತ ಕಾಲದಲ್ಲಿ ಹೆಚ್ಚಿನ ಮಹತ್ವವನ್ನು ಪಡೆದವು ಜೈನ ಧರ್ಮಕ್ಕೆ ಸೇರಿದ ಮಠಗಳು ಇದೇ ಸಮಯದಲ್ಲಿದ್ದವು. ಈ ಮಠಗಳು ರಾಜಾಶ್ರಯ ಹೊಂದಿದ್ದವು. ರಾಜರುಗಳಿಗೆ ಈ ಮಠದ ಗುರುಗಳು ರಾಜಗುರುಗಳಾಗಿಯೂ ಇರುತ್ತಿದ್ದರು.

ಧಾರವಾಡ ಜಿಲ್ಲೆಯ ರೋನ ತಾಲ್ಲೂಕಿನ ಸೂಡಿ ಗ್ರಾಮದ ಕ್ರಿ.ಶ. 1060ರ 1ನೆಯ ಸೋಮೇಶ್ವರನ ದತ್ತಿ ಶಾಸನದಲ್ಲಿ ಮಠದ ಪ್ರಸ್ತಾವ ಲಭ್ಯವಾಗುತ್ತದೆ. ಅದರ ಪ್ರಕಾರ ಮಠದಲ್ಲಿ ಓದುವ ವಿದ್ಯಾರ್ಥಿಗಳಿಗೆ, ಓದಿಸುವ ಓಜರಿಗೆ ಅಗತ್ಯವಾದ ಊಟ-ಉಪಚಾರಗಳಿಗೆ ನಿಗದಿತವಾಗಿ ದತ್ತಿಯನ್ನು ನೀಡಿದ ಉಲ್ಲೇಖ ಈ ಶಾಸನದಲ್ಲಿದೆ. ಆದುದರಿಂದ ಸೂಡಿಯ ಮಠವೇ ಕರ್ನಾಟಕದಲ್ಲಿ ಜೈನ ಮೊದಲ ಮಠವಾಗಿದೆ. ಅದೇ ರೀತಿ ಆರನೆಯ ವಿಕ್ರಮಾದಿತ್ಯನು ಕ್ರಿ.ಶ. 1071ರಲ್ಲಿ ಲಕುಲೇಶ್ವರ ಪಂಡಿತರ ಮಠದ ಅಧ್ಯಾಪಕರಾಗಿ ಮತ್ತು ವಿದ್ಯಾರ್ಥಿಗಳಿಗಾಗಿ ಕೋಟೆ ಗನೂರು ಎಂಬ ಗ್ರಾಮವನ್ನು ದಾನ ಮಾಡಿದ ಉಲ್ಲೇಖ ಹೂವಿನ ಹಡಗಲಿಯ ಕಲ್ಲೇಶ್ವರ ದೇವಾಲಯದಲ್ಲಿ ಲಭ್ಯವಾದ ಶಾಸನದಿಂದ ತಿಳಿದುಬರುತ್ತದೆ.

ಕಲಚೂರಿ ಬಿಜ್ಜಳನಿಗೆ ಸೇರಿದ ಕ್ರಿ.ಶ. 1168ರ ಮನಗೊಳಿ ಶಾಸನದಲ್ಲಿ ಶಾರದಾದೇವಿ ಮಠದ ಗುರು ಅಮೃತರಾಷಿ ಪಂಡಿತ ಎಂಬಾತನಿಗೆ ಉಪಭೋಗಕ್ಕಾಗಿ ದಾನ ನೀಡಿದ ವಿಷಯ ಪ್ರಸ್ತಾಪವಾಗಿರುವುದು ಅಂದಿನ ಮಠದ ವ್ಯವಸ್ಥೆ ಮತ್ತು ಚಟುವಟಿಕೆಗಳು ಹೇಗಿದ್ದವೆಂಬುದನ್ನು ಈ ಶಾಸನ ಸ್ಪಷ್ಟಪಡಿಸುತ್ತದೆ. ಹೀಗೆ 6ನೆಯ ಶತಮಾನದಿಂದ ಕರ್ನಾಟಕದಲ್ಲಿ ಮಠಗಳ ಪರಂಪರೆ ಪ್ರಾರಂಭವಾಗುತ್ತದೆ. ಕರ್ನಾಟಕದಾದ್ಯಂತ ಸಾವಿರಾರು ಮಠಗಳು ಅಸ್ತಿತ್ವದಲ್ಲಿದ್ದವೆಂಬುದನ್ನು ಶಾಸನಗಳು ಸಾರಿ ಹೇಳುತ್ತವೆ.

ಮಠಗಳ ಪ್ರಕಾರಗಳು :

12ನೇ ಶತಮಾನದ ಶರಣರ ಕಾಲದ ನಂತರ ವೀರಶೈವ ಧರ್ಮವನ್ನು ಉಳಿಸಿ ಬೆಳೆಸಿದ ಕೀರ್ತಿ ಇಂದಿನ ಮಠಗಳಿಗೆ ಸಲ್ಲುತ್ತದೆ. ಮಠಗಳು ಸಮಾಜದ ಎಲ್ಲಾ ವರ್ಗದ ಜನರಿಗೆ ಮುಕ್ತ ದ್ವಾರಗಳಿದ್ದಂತೆ. ನೂರಾರು ಪ್ರಕಾರದ ಮಠಗಳು ಎದ್ದು ಕಾಣುತ್ತವೆ. ಶಿವಶರಣರ ಕಾಲದಲ್ಲಿಯೇ ಅಸಂಖ್ಯಾತ ಮಠಗಳಿದ್ದ ಬಗ್ಗೆ ಶೂನ್ಯ ಸಂಪಾದನಾಕಾರರು ತಿಳಿಸುತ್ತಾರೆ. ಅಲ್ಲದೆ, ದಾಸೋಹ ನಡೆಸುವುದರಲ್ಲಿ ಪ್ರಸಿದ್ಧಿ ಪಡೆದವುಗಳಾಗಿದ್ದವು. ಒಂದು ಸಾವಿರ ಸಂಗಮಕ್ಕೆ ಆರೋಗಣೆಯ ಮಾಡಿಸುವ ದಾಸೋಹ ಮಾಡಿಸುವ ಸತ್ಯ ಸದಾಚಾರಿಗಳ ಮಠಗಳು ಐವತ್ತೆಂಟು ಸಾವಿರ. "ನಿತ್ಯ ಸಾವಿರದ ನೂರು ಜಂಗಮಕ್ಕೆ ದಾಸೋಹ ಮಾಡುವ ದಾಸೋಹಗಳ ಮಠಗಳು ಹನ್ನೊಂದು ಸಾವಿರ ಎಂದು ಹೇಳಿ ಇನ್ನೊಂದೆಡೆಯಲ್ಲಿ ಅಂತಹ ಒಟ್ಟು ದಾಸೋಹ ಮಠಗಳು ಎರಡು ಲಕ್ಷ ಎಂಭತ್ತೈದು ಸಾವಿರದ ಎಳುನೂರ ಎಪ್ಪತ್ತು ದಾಸೋಹ ಮಠಗಳಿವೆ" ಎಂದು ಹೇಳಿರುವುದಲ್ಲದೆ ಸಾಲಿ ಮಠಗಳು, ಓದಿಸುವ ಮಠಗಳು, ನಿತ್ಯನೇಮಿಗಳ ಮಠ, ಅಕ್ಕಪ್ರಸಾದಿ ಮಠ, ಚೌಕಿಮಠ, ವೃತ್ತಸ್ತರ ಮಠ, ಸನ್ಯಾಸಿ ಮಠ, ಶೀಲಸಂಪನ್ನರ ಮಠ ಹೀಗೆ ಮುಂತಾದ ಮಠಗಳು ಹೆಸರಿಸಿದರೂ, ಇವುಗಳಲ್ಲಿಯೇ ಮುಖ್ಯವಾಗಿ ಎರಡು ಪ್ರಕಾರದ ಮಠಗಳು ಕಂಡುಬರುತ್ತವೆ.

1) ಗುರು ವರ್ಗದ ಮಠಗಳು
2) ವಿರಕ್ತ ವರ್ಗದ ಮಠಗಳು

1. ಗುರು ವರ್ಗದ ಮಠಗಳು :

ಗುರು ವರ್ಗದ ಮಠಗಳು 1008 ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪನೆಗೊಂಡ ಉಜ್ಜಯಿನಿ ಸದ್ಧರ್ಮ, ಸಿಂಹಾಸನ, ಮಳಿವಗ್ಗಿ, ವೈಷ್ಣಸೂತ್ರ, ನಂದಿಗೋತ್ರಗಳೆಂಬ ಐದು ಪೀಠಗಳನ್ನೊಳಗೊಂಡಿರುವ ಐದು ಪ್ರಮುಖ ಸ್ಥಳಗಳಿವೆ.

1) ಉಜ್ಜಯಿನಿ
2) ರಂಭಾಪುರಿ
3) ಹಿಮವತ ಕೇದಾರ
4) ಕಾಶಿ (ಬನಾರಸ)
5) ಶ್ರೀಶೈಲ

ಈ ಸ್ಥಳಗಳು ಹೊಂದಿದ ಮಠಗಳು ಗುರುವರ್ಗದ ಮಠಗಳೆಂದು ಕರೆಯುತ್ತೇವೆ. ಇವುಗಳಲ್ಲಿಯೂ ಮೂರು ಪ್ರಕಾರದ ವಿಂಗಡಣೆಗಳಿವೆ.

1) ಹಿರೇಮಠಗಳು

2) ಶಿಷ್ಯ ವರ್ಗದ ಮಠಗಳು

3) ಪುತ್ರವರ್ಗದ ಮಠಗಳು

ಹಿರೇಮಠಗಳು ಹೆಸರೇ ಸೂಚಿಸಿರುವಂತೆ ಪ್ರತಿಯೊಂದು ಮಠಗಳಿಗೆ ಹಿರೇತನವಾಗಿರುತ್ತವೆ. ಇಂತಹ ಮಠಗಳ ಮಠಾಧೀಶರಿಗೆ "ಮದ್, ಘನ್, ಚಕ್ರವರ್ತಿ" ಎಂದು ಕರೆಯುತ್ತಾರೆ. ಅಲ್ಲದೆ "ಷಟಸ್ಥಲ ಬ್ರಹ್ಮಮೂರ್ತಿ"ಎಂದು ಕೂಡ ಕರೆಯುತ್ತಾರೆ. ಜೊತೆಗೆ ಪಟ್ಟದ್ದೇವರೆಂಬ ಬಿರುದಾಂಕಿತ ಉಳ್ಳವರಾಗಿರುತ್ತಾರೆ. ಈ ಮಠಗಳಿಗೆ ಮರಿಯನ್ನು ತೆಗೆದುಕೊಳ್ಳುವಾಗ ಮಠದ ಭಕ್ತರಲ್ಲಿಯೇ ಇರುವ ಯೋಗ್ಯವಾದ ವ್ಯಕ್ತಿಯನ್ನು ಆರಿಸಿ ಮಠಕ್ಕೆ ಮರಿಯನ್ನಾಗಿ ನೇಮಿಸಿ ಅಧಿಕಾರ ಕೊಟ್ಟು ಪಟ್ಟಾಭಿಷೇಕ ಮಾಡಿಸುತ್ತಾರೆ.

ಶಿಷ್ಯ ವರ್ಗದ ಮಠಗಳಲ್ಲಿ ತಮ್ಮ ಮಠದ ಶಿಷ್ಯರಾದವರಲ್ಲಿಯೇ ಮಾತ್ರ ಯೋಗ್ಯರಾದ ಒಬ್ಬರನ್ನು ಆಯ್ಕೆಮಾಡಿ, ಮರಿಯನ್ನಾಗಿಸಿಕೊಂಡು ಅಧಿಕಾರ ಕೊಟ್ಟು ಪಟ್ಟಾಧಿಕಾರ ಮಾಡುವರು.

ಪುತ್ರವರ್ಗದ ಮಠವು ಇಂತಹ ಗುರುಸ್ಥಳ ಮಠಗಳಲ್ಲಿ ಒಂದಾಗಿದೆ. ಇಂತಹ ಮಠಗಳಲ್ಲಿ ಬೇರೆ ಯಾರಿಗೂ, ಅಂದರೆ ಶಿಷ್ಯರೇ ಇರಲಿ, ಭಕ್ತರೇ ಇರಲಿ ಜನಸಾಮಾನ್ಯರೇ ಇರಲಿ ಯಾರಿಗೂ ಆಸ್ಪದವಿಲ್ಲ. ತಮ್ಮ ತಮ್ಮ ವಂಶದವರನ್ನೇ ಮಠಕ್ಕೆ ಮರಿಯನ್ನಾಗಿ ನೇಮಿಸಿ ಪಟ್ಟಾಧಿಕಾರ ಮಾಡಿಸುತ್ತಾರೆ. ಹೀಗೆ ಗುರುಸ್ಥಲ ಮಠಗಳಲ್ಲಿ ಮುಖ್ಯವಾಗಿ ಮೂರು ಪ್ರಕಾರದ ಮಠಗಳು ಕಂಡುಬಂದಿದೆ.

2. ವಿರಕ್ತ ವರ್ಗದ ಮಠಗಳು

ವಿರಕ್ತ ವರ್ಗದ ಮಠಗಳು ಹನ್ನೆರಡನೇ ಶತಮಾನಕ್ಕಿಂತ ಪ್ರಾಚೀನವಾಗಿ ಕೆಲವು ಮತಗಳು ಕಾಣಿಸಿದರೂ ಹನ್ನೆರಡನೆಯ ಶತಮಾನದಲ್ಲಿ ಅಲ್ಲಮಪ್ರಭುದೇವರು, ಬಸವಣ್ಣ, ಅಕ್ಕಮಹಾದೇವಿ ಮುಂತಾದ ವೀರ ಶರಣ ಶರಣೆಯರಿಂದ ಸ್ಥಾಪನೆಗೊಂಡಿದ್ದವು ಎಂದು ಹೇಳಬಹುದು. ಯಾವುದೇ ಸುಖ ದುಃಖಗಳನ್ನು ಅನುಭವಿಸದೇ ಮನೆಯನ್ನು ಬಂಧು-ಬಳಗಗಳನ್ನು ತ್ಯಜಿಸಿ, ಕಾವಿ ಬಟ್ಟೆಯನ್ನು ಧರಿಸಿ ದೇಶ ಸಂಚಾರಗೈದು ಒಂದು ಸ್ಥಳದಲ್ಲಿ ಉಳಿದು ಜನಸಾಮಾನ್ಯರಿಗೆ ಧರ್ಮದ ಉಪದೇಶ ಬೀರುತ್ತ ಸುಮಾರ್ಗವನ್ನು ತೋರಿಸುವ ಧೀರ, ಶೂರ, ವೀರರ ಸ್ಥಳವೇ ವಿರಕ್ತಮಠವೆಂದಾಗಿವೆ. ಇಂತಹ ವಿರಕ್ತರಲಿಯೇ ಐದು ಪೀಠದ ಐದು ಸ್ಥಳಗಳಿವೆ.

1) ಮುರಘಾ (ಮಾರ್ಗ) ಸಮಯ

2) ಕುಮಾರ ಸಮಯ

3) ಚಿಲ್ಲಾಳ ಸಮಯ

4) ಕೆಂಪಿನ ಸಮಯ

5) ಸಂಪಾದನೆ ಸಮಯ

ಇಂತಹ ಸ್ಥಳಗಳಲ್ಲಿ ಕಾವಿ ಬಟ್ಟೆಯನ್ನು ಧರಿಸಿ ಮನೆಯನ್ನು ತ್ಯಜಿಸಿದ ವ್ಯಕ್ತಿಯ ಗುಣಮಟ್ಟವನ್ನು ಅಳೆದು ವೀರತನ, ಶೂರತನ, ಚಾಣಾಕ್ಷತನ ಹೊಂದಿದವರು ಗುರುವಿನ ಆಶೀರ್ವಾದ ಪಡೆದು ಗುರುವಾಗುತ್ತಾರೆ. ಇವರಿಗೆ ಜಂಗಮನೆಂದು ಕರೆಯುತ್ತಾರೆ. ಇವರಿಗೆ ನಿರಂಜನ ಪಟ್ಟಾಭಿಷೇಕ ಮಾಡಿಸಿ ಅಧಿಕಾರ ಕೊಟ್ಟು ಅಧಿಪತಿಯಾಗಿ ನೇಮಿಸುತ್ತಾರೆ. ಈ ಜಂಗಮರಲ್ಲಿ ಪ್ರಮುಖರಾಗಿ ಎರಡು ಪ್ರಕಾರಗಳಿವೆ.

1) ಚರ ಜಂಗಮರು :

"ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ" ಎಂದರಿತು ಜಂಗಮರು ಎಡಗೈಯಲ್ಲಿ ಬಸವ ಮಹಾಜೋಳಿಗೆ ಹಿಡಿದು ಬಲಗೈಯಲ್ಲಿ ದಂಡು ಸಹಿತ ಹಳ್ಳಿ ಹಳ್ಳಿಗೆ ಪಟ್ಟಣಗಳಿಗೆ ಸಂಚರಿಸಿ, ಧರ್ಮದ ಉಪದೇಶಗಳ ಬೀಜಗಳನ್ನು ಬಿತ್ತುತ್ತ ಜನರಿಗೆ ಹಸನು ಮಾಡುವುದೇ ಚರ ಜಂಗಮರ ಮುಖ್ಯ ಉದ್ದೇಶವಾಗಿದೆ.

2) ಸ್ಥಿರ ಜಂಗಮರು :

ದೇಶ ಸಂಚಾರಗೈದು ಒಂದು ಪವಿತ್ರ ಸ್ಥಳವನ್ನು ಜಾಗೃತಿ ಮಾಡಿಕೊಂಡು ಕಸಬರಿಗೆಯೇ ತನ್ನ ಆಸ್ತಿಯೆಂದು ತಿಳಿದಿರುವವರೇ ಸ್ಥಿರ-ಜಂಗಮರು. ಈ ಪವಿತ್ರವಾದ ಸ್ಥದಲ್ಲಿಯೇ ಕುಳಿತು ಪಾಠ-ಪ್ರವಚನಗಳ ಮೂಲಕ ಜನರಿಗೆ ಉತ್ತಮವಾದ ಬೋಧನೆಯನ್ನು ನೀಡುತ್ತಾ, ಜನರನ್ನು ತಿದ್ದುತ್ತಾ ಜೊತೆಗೆ ಚರ್ಚಾಶ್ರೇಷ್ಠಗಳ ಮೂಲಕ ಧರ್ಮದ ಉಪಕೇಶ ನೇಸುತ್ತಾ ಸಮಾಜದಲ್ಲಿ ಲೋಕ ಕಲ್ಯಾಣಕ್ಕಾಗಿ, ಜನ ಕಲ್ಯಾಣಕ್ಕಾಗಿ ಹಗಲಿರುಳೆನ್ನದೆ ಕಂಕಣಬದ್ಧರಾಗಿರುತ್ತಾರೆ.

ಜನರಿಂದಲೇ ಮಠದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಿಸಿ, ಜಾತೀಯತೆ ನಿರ್ಮೂಲನೆ ಮಾಡುವ ಉದ್ದೇಶ ಹೊಂದಿರುತ್ತಾರೆ. ಅಲ್ಲದೆ ಉಪನ್ಯಾಸ ಶಿಬಿರಗಳ ಮೂಲಕ ನೇರವಾಗಿ ಜನರ ಮನವನ್ನು ಮುಟ್ಟುವಂತೆ ಹೇಳಿ ಅವರ ನಡೆ-ನುಡಿಯನ್ನು ತಿದ್ದುತ್ತಾರೆ. ಇವರಿಗೆ ಸ್ಥಿರ ಜಂಗಮರೆಂದು ಕರೆಯುತ್ತಾರೆ. ಇಂತಹ ಜಂಗಮರು ಲಿಂಗೈಕ್ಯರಾದ ಮೇಲೆ ಪರಜಂಗಮರಾಗುತ್ತಾರೆ.

ವೀರಶೈವ ಮಠಗಳೊಡನೆ ನಿಕಟ ಸಂಪರ್ಕ ಸಂಬಂಧಗಳನ್ನು ಹೊಂದಿರುವ ಮಠಗಳಲ್ಲಿ ಹಲವು ವಿಧಗಳಿವೆ. ಕೆಲವೊಂದು ಶ್ರೀಮಂತಿಕೆಯುಳ್ಳ ಮಠಗಳಾದರೆ, ಕೆಲವು ಬಡತನವಾಗಿರುತ್ತದೆ. ಕೆಲವು ದೊಡ್ಡ ಮಠಗಳಾದರೆ, ಕೆಲವು ಚಿಕ್ಕದಾಗಿರುತ್ತವೆ. ಕೆಲವು ನಗರದಲ್ಲಿದ್ದರೆ, ಕೆಲವು ಹಳ್ಳಿಗಳಲ್ಲಿರುತ್ತವೆ. "ಆಧ್ಯಾತ್ಮ ಚಟುವಟಿಕೆಗಳ ಜೊತೆಗೆ ಅನೇಕ ಲೌಕಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವಂಥವುಗಳು. ಕೇವಲ ಆಧ್ಯಾತ್ಮಿಕ ಚಿಂತನೆ, ಪೂಜೆ-ಪುನಸ್ಕಾರಗಳಲ್ಲಿ ನಿರತವಾಗಿರುವಂಥವು. ಕರ್ನಾಟಕದ ಒಳಗೆ ಮಾತ್ರವೇ ಅಲ್ಲ ಅದರ ಗಡಿಗಳಾಚೆಯೂ ಪ್ರಭಾವ ಉಳ್ಳವುಗಳು. ಕೇವಲ ಚಿಕ್ಕ ಸ್ಥಳೀಯ ವಲಯದೊಳಗೇ ಅಡಗಿ ಕುಂತಿರುವಂಥವುಗಳು. ದೊಡ್ಡ ವಿದ್ವಾಂಸರಾದ ಸ್ವಾಮಿಗಳು ಅಧ್ಯಕ್ಷರುಗಳಾಗಿರುವಂಥವುಗಳು. ಅಷ್ಟಾಗಿ ಓದಿರದ ಸ್ವಾಮಿಗಳು ಅಧ್ಯಕ್ಷರುಗಳಾಗಿರುವಂಥವುಗಳು. ಶರಣರ ತತ್ವಗಳಿಗೆ ಹೆಚ್ಚಿನ ಕಾಳಜಿ ನೀಡುವಂಥವುಗಳು. ಆ ತತ್ವಗಳಿಗೆ ಔಪಚಾರಿಕ ಸ್ಥಾನವನ್ನು ಮಾತ್ರ ನೀಡಿರುವಂಥವುಗಳು".

ಹೀಗೆ ವೀರಶೈವ ಮಠಗಳು ನಾನಾ ಪ್ರಕಾರದಲ್ಲಿರುವುದನ್ನು ನೋಡಿದರೆ ಸೂಕ್ತವೆನಿಸುತ್ತದೆ.

ಮಠಾಧೀಶರಾಗಲು ಅರ್ಹತೆಗಳು :

ಮಠಗಳ ಆದರ್ಶ ಪರಂಪರೆಯಂತೆ ಮಠಗಳಲ್ಲಿ ಶಿಷ್ಯಮರಿಯನ್ನು ಮಾಡಿಕೊಳ್ಳುವುದು ಸಂಸ್ಕೃತಿಯ ಪದ್ಧತಿ. ಆದರೆ ಎಂತಹವರನ್ನು ಶಿಷ್ಯಮರಿಯನ್ನಾಗಿ ತೆಗೆದುಕೊಳ್ಳಬೇಕೆಂಬುದೊಂದು ಸಮಸ್ಯೆ ತೊಳಲಾಡುತ್ತಿರುತ್ತದೆ. ಅಂತಹ ಸಮಯದಲ್ಲಿ ಶಿಷ್ಯಮರಿಯಾಗುವವರಲ್ಲಿ ಕೆಲವೊಂದು ಅರ್ಹತೆಗಳು ಅಗತ್ಯವಾಗಿವೆ.

"ಆಸೆಯಾಮಿಷ, ತಾಮಸ, ಹುಸಿ, ವಿಷಯ
ಕುಟಿಲ ಕುಹಕ, ಕ್ರೋಧ, ಕ್ಷುದ್ರ, ಮಿಥ್ಯ
ಇವನ್ನೆಲ್ಲ ನಾಲಿಗೆಯ ಮೇಲಿಂದ ತೆಗೆದು ಕಳೆಯಯ್ಯ
ಅದೇಕಂದಡೆ, ನಿಮ್ಮತ್ತಲೆನ್ನ ಬರಲಿಯವು
ಇದು ಕಾರಣ ಇವೆಲ್ಲವ ಕಳೆದು
ಎನ್ನ ಪಂಚಯ್ಯರ ಭಕ್ತನ ಮಾಡು
ಕೂಡಲಸಂಗಮದೇವಾ"

- ಬಸವಣ್ಣ

ಈ ಮೇಲಿನ ಬಸವಣ್ಣನವರ ಮಾತಿನಂತೆ ಸತ್ಯ ಕಠೋರವಾಗಿರುವವರನ್ನು ಮಠದ ಮರಿಯಾಗಲು ಯೋಗ್ಯರೆಂದು ಹೇಳಬೇಕಾಗುತ್ತದೆ. ಅಲ್ಲದೆ, ಧರ್ಮ ಪ್ರಚಾರಕ್ಕಾಗಿ ಆಚಾರನಿಷ್ಠರಾಗಿ ವೈರಾಗಯ ಮೂರ್ತಿಗಳ ತರಬೇತಿಗಾಗಲೀ ಒಂದು ಶಿಕ್ಷಣ ಸಂಸ್ಥೆ ಬೇಕೆಂದು ತಪೋವನರೂ, ವೈರಾಗ್ಯಮೂರ್ತಿಗಳೂ ಆದ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳು ಬಾದಾಮಿಯ ಬಳಿ ಶಿವಯೋಗಮಂದಿರ ಸಂಸ್ಥೆಯನ್ನು ಈ ಶತಮಾನದ ಆದಿ ಭಾಗದಲ್ಲಿ ಸ್ಥಾಪಿಸಿದರು. ಈ ಶಿಕ್ಷಣ ಸಂಸ್ಥೆಯಲ್ಲಿ ತಯಾರಾದ ಸ್ವಾಮಿಗಳನ್ನು ಲಿಂಗದೀಕ್ಷೆಕೊಟ್ಟು ಪಟ್ಟಾಭಿಷೇಕ ಮಾಡಿ ಅಧಿಕಾರಗಳನ್ನು ವಹಿಸಿಕೊಡುತ್ತಾರೆ.

> "ಮಠಗಳಿಂದು ಮಠಸ್ಥರೆಂದು ಹೊಗಳಿಸಿಕೊಂಬರು ಮಠಗಳ
> ಮಠಸ್ಥರ ಕರ್ತವ್ಯಗಳನರಿಯರು. ಅವುಗಳ ವಿವರ ಹೇಳಿಕೆ ಕೇಳಿರಯ್ಯ
> ಆತ್ಮಜ್ಞಾನ ಬೋಧೆ, ಜೀನ ವಿದ್ಯಾದಾನ, ವಿಶ್ವ ಭ್ರಾತೃ ಪ್ರೇಮ,
> ದರಿದ್ರ, ದೀನ, ಅನಾಥ ಸೇವೆ, ಸತ್ಯ, ನ್ಯಾಯ, ದಯಾ, ಮಾನ,
> ಪ್ರಾಣಾಭಿಮಾನ ರಕ್ಷಣೆ - ಇಂತಿವೆ ಮಠಗಳ, ಮಠಸ್ಥರ ಪಂಚ ಕರ್ತವ್ಯ
> ಗಳೆಂದರಿವುದು ಬಸವಲಿಂಗ ಪ್ರಿಯ ಕಟ್ಟೆಯ ಬಸವೇಶ್ವರನಲ್ಲಿ"

ಮಠದೊಳಗಣ ಬೆಕ್ಕು ಇಲಿಯ ಕಂಡೊಡನೆ ಪಟಪಟನೆ ನೆಗೆದಂತಾಯ್ತು ಕಾಣಾ ರಾಮನಾಥ" - ಎಂಬ ಜೇಡರ ದಾಸಿಮಯ್ಯನ ವಚನವನ್ನು ನೋಡಿದಾಗ ಮಠಗಲ್ಲಿನ ಸ್ವಾಮಿಗಳಿಗೆ ಚಂಚಲ ಮನಸ್ಸಿರಬಾರದು. ಅವರು ಏಕ ಚಿತ್ತಾಗ್ರಸ್ಥರಾಗಿರಬೇಕು ಎಂಬುದು ತಿಳಿದುಬರುತ್ತದೆ.

ಬ್ರಹ್ಮಚಾರಿಯಾಗಿರಬೇಕು, ವಿದ್ಯಾವಂತರಾಗಿರಬೇಕು, ಶಾಂತ ಸ್ವಭಾವದವರಾಗಿರಬೇಕು, ತಪಸ್ವಿಯಾಗಿರಬೇಕು, ಸಮಾಜದ ಕಲ್ಯಾಣದ ಚಿಂತೆ ಮಾಡುವಂತಿರಬೇಕು, ದುಷ್ಟ ಚಟಗಳಿಗೆ ಅಂಟಿಕೊಳ್ಳಬಾರದು, ಅಂತರಂಗ-ಬಹಿರಂಗ ಶುದ್ಧವಿರಬೇಕು, ಕಾಯಕಯೋಗಿಯಾಗಿರಬೇಕು, ಪಾಠ-ಪ್ರವಚನ ಬಲ್ಲವರಾಗಿರಬೇಕು, ನುಡಿದಂತೆ ನಡೆಯಬೇಕು, ಅರಿಷಡ್ವರ್ಗಗಳ ಮೆಟ್ಟಿ ಷಟಸ್ಥಲವನಿಂಬುಗೊಂಬದವನಿರಬೇಕು, ವಿನಯ ಭಂಡಾರಿಯಾಗಿರಬೇಕು, ದಲಿತೋದ್ಧಾರಕರಾಗಿರಬೇಕು, ಗುರುಮುಖದಿಂದ ತಾನಾರು ತನ್ನ ನಿಜವೇನೆಂದು ತಿಳಿದಿರಬೇಕು. ಭಕ್ತರ ಮನನೋಯಿಸಬಾರದು "ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ, ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ, ಛಲಬೇಕು ಶರಣಂಗೆ ಪರದೈವನೊಲ್ಲೆನೆಂಬ, ಛಲಬೇಕು ಶರಣಂಗೆ ಲಿಂಗ ಜಂಗಮ ಒಂದೇ" ಎಂಬ ಶರಣರ, ಬಸವಣ್ಣನವರ ವಚನಕ್ಕೆ ವಿರುದ್ಧವಾಗದಂತೆ ನಡೆದುಕೊಂಡು ಹೋಗಬೇಕಾಗುತ್ತದೆ.

"ಸತ್ಯಮೇವ ಜಯತೆ" ಎಂಬ ಮಹಾಮಂತ್ರವನ್ನು ಗಟ್ಟಿಯಾಗಿ ಹಿಡಿದಿರಬೇಕು. ಸತ್ಯಕ್ಕೆ ಸದಾಸಿದ್ಧನಾಗಿ, 'ನಾಳೆ ಬಪ್ಪುದು ನಮಗಿಂದೆ ಬರಲಿ, ಇಂದು ಬಪ್ಪುದು ನಮಗೀಗಲೇ ಬರಲಿ' ಎಂದು ಧೈರ್ಯದೊಂದಿಗೆ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಮೊದಲಾದ ಸೇವೆಗಳನ್ನು ಮಾಡುವಂತವರಿರಬೇಕು. ಅಂತಹ ಸ್ವಾಮಿಗಳು ಮಠಾಧೀಶರಾಗಲು ಯೋಗ್ಯರಾಗಿರುತ್ತಾರೆ.

"ಮಠದ ಸಂಪರ್ಕಕ್ಕೆ ಬರುವ ಪ್ರತಿಯೊಬ್ಬರ ಅಂತರಂಗವನ್ನು ಹೊಕ್ಕು, ಅವರ ಕಲ್ಮಶಗಳನ್ನು ತೊಳೆಯುವ ಕಾರ್ಯವು ಮಠದ ಸ್ವಾಮಿಗಳದು" ಭಕ್ತನು ಸುದುವಿನಯಸಂಪನ್ನನೂ, ಭ್ರಷ್ಟಮನಸ್ಸಿನಿಂದ ವಿದೂರನೂ ಆಗಿರುವಂತೆ ನೋಡಿಕೊಳ್ಳುವುದು ಅವರ ಆದ್ಯ ಕರ್ತವ್ಯ. ದುರ್ವ್ಯಸನಗಳಿಗೆ ತುತ್ತಾದ ವ್ಯಕ್ತಿಯನ್ನು ಪರಿವರ್ತಿಸಲು ನಾನಾ ಮಾರ್ಗೋಪಾಯಗಳನ್ನು ಉಪಯೋಗಿಸಬೇಕಾಗುತ್ತದೆ.

ಹೀಗೆ ಮೇಲೆ ತಿಳಿಸಿದ ಗುಣಗಳು ಹೆಚ್ಚನಾಂಶದಲ್ಲಿ ಕಂಡುಬಂದರೆ ಮಠದ ಮಠಾಧೀಶರಾಗಲು ಯೋಗ್ಯರೆಂದು ಪರಿಗಣಿಸಲಾಗುತ್ತದೆ.

ಪರಾಮರ್ಶನ ಗ್ರಂಥಗಳು :

1) ಎಂ. ಜಿ. ನಂಜುಂಡರಾಧ್ಯ : ಸ್ಮರಣ ಸಂಚಿಕೆ (ಸಂಪುಟ) ಸಂ. ಡಾ. ಹೆಚ್.ಪಿ. ಮಲ್ಲದೇವರು (1983).

2) ಎರಿಸಿಮೆ ಚೆನ್ನಪ್ಪ - ಟಿ.ಆರ್. ಮಹಾದೇವಯ್ಯ : ದಾಸೋಹ ಸಿರಿ (1981).

3) ಯರಿಸಿಮೆ ಚೆನ್ನಪ್ಪ - ಕೊಟ್ರೇಶ ಆರಾಧ್ಯ : ದಾಸೋಹ ಸಿರಿ (1981).

4) ವಿ. ಶಿವಾನಂದ : ಹೈ.ಕ. ಭಾಗದ ಕನ್ನಡ ಶಿಲಾಶಾಸನಗಳು (1992).

5) ಯರಿಸಿಮೆ ಚನ್ನಪ್ಪ -ಷಣ್ಮುಕಯ ಅಂಕುರಮಠ : ದಾಸೋಹ ಸಿರಿ (1981).

6) ಎಚ್. ತಿಪ್ಪೇರುದ್ರಸ್ವಾಮಿ : ಕನ್ನಡ ವಿಶ್ವಕೋಶ - ಸಂಪುಟ 12.

7. ಮಲ್ಲೇದೇವರು : (ಸ್ಮರಣ ಸಂ.) ಡಾ. ಜಿ ಶಿವರುದ್ರಪ್ಪ - ಅರ್ಚನ (1984).

8. ಎಚ್. ಎಂ. ಸದಾಶಿವಯ್ಯ : ಸಿದ್ಧಗಂಗಾ ಶ್ರೀ

9. ಎ.ಕೆ. vii, ಶಿಕಾರಿಪೂರ

10. ಎಚ್. ಎಂ. ಸದಾಶಿವಯ್ಯಾ : ಸಿದ್ಧಗಂಗಾ ಶ್ರೀ

11. ಎಂ.ಎಂ. ಕಲ್ಬುರ್ಗಿ - ಎನ್. ವಿದ್ಯಾಶಂಕರ : ಸಮಗ್ರ ವಚನ ಸಂಪುಟ.

12. ಎಂ.ಎಂ. ಕಲ್ಬುರ್ಗಿ : ಕರ್ನಾಟಕದ ಕೈಫಿಯತ್ತುಗಳು (ಸಂಪಾದಕರು)

13. ಎ.ಕೆ. ix, ದೊಡ್ಡಬಳ್ಳಾಪುರ.

14. ವೈ.ಎಚ್. ನಾಯಕವಾಡಿ, ಬೀದರ ಜಿಲ್ಲೆಯ ಮಠಗಳು (ಅಪ್ರಕಟಿತ ಲೇಖನ) 2008.

15. ಸ. ಸ. ಮಾಳವಾಡ : ಬಸವಣ್ಣನವರ ವಚನ ಸಂಗ್ರಹ

16. ಜಿ.ಬಿ. ವಿಶಾಜಿ : ಕಾಯಕ ಪರಿಣಾಮಿ (1991)

17. ಸಂಗಮೇಶ ಸೌದತ್ತಿಮಠ : ಚನ್ನವೀರ (1996)

18. ರಮೇಶ ಮೂಲಗೆ : ಬೀದರ ಜಿಲ್ಲೆಯ ವೀರಶೈವ ಮಠಗಳು (1998)

19. ಎಸ್.ಜಿ. ಸ್ವಾಮಿ : ಕಾಯಕ ಪರಿಣಾಮಿ (1991)

20. ಎಂ.ಜಿ. ದೇಶಪಾಂಡೆ : ಕಾಯಕ ಪರಿಣಾಮಿ (1991)

21. ಲಲ್ಲೇಶ್ವರಿ ತಾಯಿ ಮೂಗಿ : ಕಾಯಕ ಪರಿಣಾಮಿ (1991)

22. ಸಿದ್ಧರಾಮೇಶ್ವರ ಬೆಲ್ದಾಳೆ : ಕಾಯಕ ಪರಿಣಾಮಿ (1991)

23. ಗುರುಬಸಯ್ಯ ಅಮ್ಮಾಪುರ : ಕಾಯಕ ಪರಿಣಾಮಿ (1991)

24. ಸುಬ್ಬಣ್ಣಾ ಅಂಬೆಸಂಗೆ : ಕಾಯಕ ಪರಿಣಾಮಿ (1991)

25. ಕೆ.ಜಿ. ಮಾಶೆಟ್ಟಿ ಹುಡಗಿ : ಕಾಯಕ ಪರಿಣಾಮಿ (1991)

26. ವಿಕ್ರಮ ವಿಸಾಜಿ, ಭಾಲ್ಕಿ : ಕಾಯಕ ಪರಿಣಾಮಿ (1991)

27. ಸೋಮನಾಥಾ ನುಚ್ಚಾ, ಭಾಲ್ಕಿ : ಕಾಯಕ ಪರಿಣಾಮಿ (1991)

28. ಬಸವರಾಜ ಸಂಗಮದ : ಕಾಯಕ ಪರಿಣಾಮಿ (1991)

29. ಎಂ.ಜಿ. ದೇಶಪಾಂಡೆ, ಮೋರಗಿ : ಕಾಯಕ ಪರಿಣಾಮಿ (1991)

30. ಶ್ರೀದೇವಿ ಸೋಲಾಪೂರೆ, ಕಮಾಲನಗರ: ಕಾಯಕ ಪರಿಣಾಮಿ (1991)

31. ದೇಶಾಂಶ ಹುಡಗಿ : ಕಾಯಕ ಪರಿಣಾಮಿ (1991)

32. ಶಾಂತರಸ ಕಾಯಕ ಪರಿಣಾಮಿ (1991)

33. ಜಯದೇವಿ ತಾಯಿ ಕಾಯಕ ಪರಿಣಾಮಿ (1991)

34. ದೇವೇಂದ್ರ ಕುಮಾರ ಹಕಾರಿ ಕಾಯಕ ಪರಿಣಾಮಿ (1991)

35. ಜಿ.ಬಿ. ವಿಸಾಜಿ, ಭಾಲ್ಕಿ ಕಾಯಕ ಪರಿಣಾಮಿ (1991)

36. ವಿ. ಸಿದ್ಧರಾಮಣ್ಣ ಕಾಯಕ ಪರಿಣಾಮಿ (1991)

37. ಶರಣಯ್ಯ ಮಠಪತಿ, ಯಲದಗುಂಡಿ ಕಾಯಕ ಪರಿಣಾಮಿ (1991)

38. ಮಹಾದೇವಮ್ಮ ಸಂಗಮ ಕಾಯಕ ಪರಿಣಾಮಿ (1991)

39. ಎಂ.ಜಿ. ಗಂಗನಪಳ್ಳಿ ಕಾಯಕ ಪರಿಣಾಮಿ (1991)

40. ವೈಜಿನಾಥ ಬಿರಾದಾರ, ಮುಚಳಂಬಿ ಕಾಯಕ ಪರಿಣಾಮಿ (1991)

41. ಗುರುಲಿಂಗಪ್ಪಾ ಧಬಾಲೆ : ಬಸವಯೋಗಿ (2006)

42. ಶ್ರೀ ಶಿವಾನಂದ ಸ್ವಾಮಿಗಳು : ಶ್ರೀ ಶಿವಾನಂದ ಸ್ವಾಮಿಗಳ ವಚನಗಳು (1998)

ಅಧ್ಯಾಯ - 3

ಪ್ರಮುಖ ಮಠಗಳು

ಭಾಲ್ಕಿ ಹಿರೇಮಠ

ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಮಹತ್ಕಾರ್ಯಗಳಿಗೆ ಪ್ರಮುಖವೆನಿಸಿಕೊಂಡಿರುವ ಭಾಲ್ಕಿ ಹಿರೇಮಠವು ಬೀದರ ಜಿಲ್ಲೆಯ ಮಠಗಳಿಗೆಲ್ಲ ಕೇಂದ್ರಬಿಂದುವಾಗಿ ನಿಂತಿದೆ. ಈ ಮಠವು ಎಂಟುನೂರು ವರ್ಷಗಳಷ್ಟು ಇತಿಹಾಸವನ್ನು ಹೊಂದಿದೆ. ಇದರ ಸ್ಥಾಪಕರು ಶ್ರೀ ಚನ್ನಬಸವೇಶ್ವರರು. ಇವರ ತರುವಾಯ ಶ್ರೀ ದೇಶಮುಖ ಸ್ವಾಮಿಗಳು, ಸಿದ್ಧಬಸವಸ್ವಾಮಿಗಳು, ಷಣ್ಮುಖಯ್ಯ ಸ್ವಾಮಿಗಳು, ನೀಲಕಂಠಯ್ಯ ಸ್ವಾಮಿಗಳು, ಗುರುಲಿಂಗ ಸ್ವಾಮಿಗಳ ನಂತರ ಚನ್ನಬಸವ ಪಟ್ಟದ್ದೇವರು 1924ರಲ್ಲಿ ಮಠಾಧೀಶರಾದರು. ಇಂದು ನೂತನ ಶ್ರೀಗಳಾದ ಬಸವಲಿಂಗಪಟ್ಟದ್ದೇವರು ಅಧಿಪತಿಯಾಗಿದ್ದಾರೆ. ಇವರಲ್ಲಿಯೇ ಪ್ರಮುಖರಾದವರು ಶ್ರೀ ಚನ್ನಬಸವ ಪಟ್ಟದ್ದೇವರು.

ಇವರು ಕನ್ನಡ ಭಾಷೆ, ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿ ಹೊಂದಿದವರಾಗಿದ್ದರು. ಗಡಿ ಭಾಗವಾದ ಬೀದರಿನಲ್ಲಿ ಕನ್ನಡ ಉಳಿಸಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅಂದು ನಿಜಾಮ ಸರಕಾರದ ವಿರುದ್ಧ ಸಿಡಿದೆದ್ದ ಹುಲಿ ಇವರು. ಹೊರಗಡೆ ಉರ್ದು ಬೋರ್ಡು ಹಾಕಿ ಒಳಗಡೆ ಕನ್ನಡ ಕಲಿಸಿದ "ಕನ್ನಡ ವೀರ" ಎಂದರೆ ತಪ್ಪಾಗಲಾರದು.

ಶ್ರೀಗಳು ಬೀದರ ಜಿಲ್ಲೆಯ ಕಮಲನಗರ ಗ್ರಾಮದಲ್ಲಿ 1890 ಡಿಸೆಂಬರ್ 22ರಂದು ಜನ್ಮತಾಳಿದರು. ತಂದೆಯ ಹೆಸರು ರಾಚಪ್ಪಾ, ತಾಯಿ ಹೆಸರು ಸಂಗಮ್ಮಾ. ಇವರ ಮನೆತನದ ಹೆಸರು ಬುಳ್ಳಾ. ಶ್ರೀಗಳಿಗೆ ಬಾಲ್ಯದಲ್ಲಿ "ಮಹಾರುದ್ರಪ್ಪಾ" ಎಂಬ ಹೆಸರು ನಾಮಕರಣ ಮಾಡಿದರು. ಶ್ರೀಗಳು ಐದು ವರ್ಷದವರಿದ್ದಾಗಲೆ ತಂದೆ-ತಾಯಿಗಳು ಹಠತ್ತಾಗಿ ವಿಧಿವಶರಾದರು. ಕಾರಣ ಮಗುವು ಅನಾಥವಾಗಬಾರದೆಂದು ಭಾಲ್ಕಿ ಹಿರೇಮಠದ ಶ್ರೀ ಸಿದ್ಧಬಸವ ಪಟ್ಟಾಧ್ಯಕ್ಷರ ನೇತೃತ್ವದಲ್ಲಿ ಎಂಟನೆಯ ವಯಸ್ಸಿನಲ್ಲಿಯೇ ಅಯ್ಯಾಚಾರ ನಡೆಸಿ, ಪಟ್ಟಾಧಿಕಾರ ಮಾಡಲು ನೇಮಿಸಿದರು.

ಭಾಲ್ಕಿ ಹಿರೇಮಠದ ಅಂದಿನ ಪೀಠಾಧ್ಯಕ್ಷರಾದ ಶ್ರೀ ಸಿದ್ಧಬಸವ ಮಹಾಸ್ವಾಮಿಗಳು ಆಧ್ಯಾತ್ಮಿಕ ಜೀವಿಯಾಗಿದ್ದರು. ಚನ್ನಬಸವ ಶಿಶುವಿನ ಮುಖಲಕ್ಷಣವನ್ನು ನೋಡಿ ಆನಂದಪಟ್ಟರು. ಈ ಬಾಲಕನಿಗೆ ಶಿಕ್ಷಣ ಕೊಡಿಸಬೇಕೆಂಬ ಉದ್ದೇಶದಿಂದ ಮುಧೋಳ ಚರ ಮೂರ್ತಿಗಳಾದ ಶ್ರೀ ಶಿವಲಿಂಗ ಸ್ವಾಮಿಗಳನ್ನು

ತಮ್ಮ ಮಠಕ್ಕೆ ಆಹ್ವಾನಿಸಿದರು. ಶ್ರೀ ಸಿದ್ಧಬಸವ ಮಹಾಸ್ವಾಮಿಗಳ ಕೋರಿಕೆಯಂತೆ ಮುಧೋಳ ಚರ ಮೂರ್ತಿಗಳು ಬಾಲಕ ಚನ್ನಬಸವರಿಗೆ ಶಿಕ್ಷಣ ಕಲಿಸಲು ಒಪ್ಪಿಕೊಂಡರು. ಬಾಲಕನಿಗೆ ತಮ್ಮೊಡನೆ ಕರೆದುಕೊಂಡು ಹೋಗಿ ಅಲ್ಲಿ ಅಕ್ಷರ ಜ್ಞಾನ ಉಣಬಡಿಸಿದರು. ಬಾಲಕ ಚನ್ನಬಸವರು ಗುರುಗಳ ಸೇವೆಯೊಂದಿಗೆ ಶಿಕ್ಷಣದಲ್ಲಿ ಆಸಕ್ತಿ ಹೊಂದಿದವರಾಗಿದ್ದರು. ಕನ್ನಡ ಭಾಷೆಯ ಲಿಪಿಯನ್ನು ಹಾಗೂ ಗಣಿತಗಳ ಲೆಕ್ಕಾಚಾರವನ್ನು ಕಲಿತರು. ಭಾಲ್ಕಿಯ ಹಿರೇಮಠದಲ್ಲಿ ತಮ್ಮ ಗುರುಗಳು ಅನಾರೋಗ್ಯವಾಗಿರುವ ಕಾರಮ ಶ್ರೀ ಚನ್ನಬಸವರು ಮುಧೋಳ ಶ್ರೀಗಳ ಅಪ್ಪಣೆಯ ಮೇರೆಗೆ ಭಾಲ್ಕಿಯ ಹಿರೇಮಠಕ್ಕೆ ಆಗಮಿಸಿದರು.

ಮುಧೋಳ ಚರಮೂರ್ತಿಗಳು ಸ್ಥಾಪಿಸಿದ ಗಳಂಗಪ್ಪ ಕನ್ನಡ ಶಾಲೆಯು ಔರಾದ(ಬಿ) ಗ್ರಾಮದ ಅಮರೇಶ್ವರ ಮಂದಿರದಲ್ಲಿ ಪ್ರಾರಂಭಿಸಿದರು. ಚನ್ನಬಸವರಿಗೆ ಈ ಶಾಲೆಯಲ್ಲಿ ಶಿಕ್ಷಣ ಕಲಿಸಲು ಕಳುಹಿಸಿಕೊಟ್ಟರು. ಶ್ರೀಗಳು ಅಲ್ಲಿ ಕೆಲವು ವರ್ಷಗಳವರೆಗೆ ಅಧ್ಯಯನವನ್ನು ಕೈಗೊಂಡರು. "ರಾಜಶೇಖರ ವಿಳಾಸ" ಷಡಕ್ಷರಿ ಬನಶಂಕರಿ ವಿಳಾಸ ಮುಂತಾದ ಅಮೂಲ್ಯ ಗ್ರಂಥಗಳನ್ನು ಓದಿದರು. ವಿದ್ಯಾರ್ಥಿ ಜೀವನದಿಂದಲೇ ಕನ್ನಡ ಭಾಷೆ ಓದು-ಬರಹಗಳಲ್ಲಿ ವಿಶೇಷ ಆಸಕ್ತಿ ಹೊಂದಿದರು. ಅಂತೆಯೇ "ಕರ್ನಾಟಕ ಶಬ್ದಮಂಜರಿ" ಮತ್ತು "ವೃಷಬೇಂದ್ರ ವಿಜಯ" ಗ್ರಂಥಗಳು ಸಹ ಅಭ್ಯಾಸ ಮಾಡಿದರು. ಮೈಸೂರಿನಿಂದ ಹೊರಹೊಮ್ಮುವ ಸುಪ್ರಸಿದ್ಧ ವಾರ ಪತ್ರಿಕೆಯಾದ "ಮೈಸೂರು ಸ್ಟಾರ್" ತಪ್ಪದೆ ಓದುತ್ತಿದ್ದರು. ಇದು ಲಿಂಗಾಯಿತ ಧರ್ಮದ ಆಚಾರ-ವಿಚಾರ ಸಂಸ್ಕೃತಿಗೆ ಮೀಸಲಾಗಿದ್ದ ಏಕೈಕ ಪತ್ರಿಕೆಯಾಗಿದೆ. ಈ ಪತ್ರಿಕೆಯು ಶ್ರೀಗಳಿಗೆ ತುಂಬಾ ಪ್ರಿಯವಾಗಿತ್ತೆಂದು ಹೇಳಬಹುದು.

ಭಾಲ್ಕಿ ಹಿರೇಮಠವು ಈ ಜಿಲ್ಲೆಯ ಲಿಂಗಾಯಿತ ಮಠಗಳಿಗೆ ಕೇಂದ್ರಬಿಂದುವಾಗಿದೆ. ಪ್ರಪ್ರಥಮ ಬೀದರ ಜಿಲ್ಲೆಯಲ್ಲಿ ಬಸವ ತತ್ವ ಪ್ರಚಾರ ಮಾಡಿದ ಪೂಜ್ಯರೆಂದರೆ ಚನ್ನಬಸವ ಪಟ್ಟದ್ದೇವರು. ಅವರು ಹಳ್ಳಿ ಪಟ್ಟಣಗಳೆಂಬ ಭೇಧ-ಭಾವ ಮಾಡದೆ ಪ್ರತಿಯೊಂದು ಗ್ರಾಮಗಳಿಗೆ ಸಂಚರಿಸಿದರು. ಆಯಾಯ ಗ್ರಾಮಗಳಲ್ಲಿ ಬಸವಣ್ಣನವರ ಮೂರ್ತಿಯನ್ನು ಸ್ಥಾಪಿಸಿದರು. ಬಸವ ತತ್ವದ ಸಂದೇಶವನ್ನು ಸಾರಿದರು. ಬಸವ ತತ್ವದಂತೆ ನಡೆಯಲು ಜನರಿಗೆ ಪ್ರಚೋದನೆ ನೀಡಿದರು.

"ದಾತಿ, ಮತ, ಪಂಥ, ಬಡವ, ಶ್ರೀಮಂತ ವರ್ಗ ಎಂಬ ಭೇಧ-ಭಾವ ಮಾಡದೆ ಸಕಲ ಧರ್ಮದವರಿಗೆ "ಲಿಂಗದೀಕ್ಷೆ" ಕೊಟ್ಟಿರುವುದು ಅವಿಸ್ಮರಣೀಯ. ಹಲವಾರು ಕೋಮಿಯ ಜನಾಂಗಕ್ಕೆ ಲಿಂಗದೀಕ್ಷೆ ಕೊಟ್ಟು ಸಂಸ್ಕಾರಗೊಳಿಸಿದ್ದಾರೆ. ದೀಕ್ಷೆಯ ಮಹತ್ವ, ಅರ್ಥವನ್ನು ಜನ ಸಾಮಾನ್ಯರಿಗೆ ಮನ ಮುಟ್ಟುಂತೆ ಹೇಳುವವರಾಗಿದ್ದರು. ಹಲವಾರು ಜನ ಸಮೂಹದೊಂದಿಗೆ ಆತ್ಮೀಯ ಸಂಬಂಧವನ್ನು ಇಟ್ಟುಕೊಂಡಿದ್ದರು. ಶ್ರೀಗಳಿಗೆ ಲಿಂಗ ದೀಕ್ಷ ಪಡೆದ ಹಲವಾರು ಕೋಮಿನ ಜನರು ಸಂಸ್ಕಾರಗೊಂಡಿದ್ದು ಕಾಣುತ್ತೇವೆ.

ಸಮಾಜ ಸರ್ವತೋಮುಖ ಬೆಳವಣಿಗೆಗಾಗಿ ಸದಾ ತಮ್ಮ ಜೀವನವನ್ನು ಮುಡುಪಾಗಿಟ್ಟವರು. ಅಸ್ಪೃಶ್ಯತಾ ನಿವಾರಣೆ ಮಾಡಿದ ಕ್ರಾಂತಿ ಪುರುಷರು. ಅನಾಥರ ರಕ್ಷಣೆ ಮಾಡಿದವರು. ಮಠದಲ್ಲಿ ಅನಾಥಾಶ್ರಮ ಸ್ಥಾಪಿಸಿ, ಅದರಡಿಯಲ್ಲಿ ಹಲವಾರು ಅನಾಥ ವಿದ್ಯಾರ್ಥಿಗಳಿಗೆ ಪಾಲನೆ ಪೋಷಣೆ ಒದಗಿಸಿದ ಶ್ರೀಗಳು ಸ್ವಂತ ಕಾಯಕ ಮಾಡಿ ಬಂದ ಆದಾಯದಲ್ಲಿ ಅನಾಥರ ರಕ್ಷಣೆ ಮಾಡುತ್ತಿದ್ದರು.

ಶ್ರೀಮಠದಲ್ಲಿ ಅನ್ನದಾಸೋಹ ಸತತವಾಗಿ ನಡೆಸಿಕೊಂಡು ಬರುತ್ತಿದ್ದರು. ದಾಸೋಹದಿಂದ ಮನಸ್ಸಿಗೆ ಹಾಗೂ ಆತ್ಮಕ್ಕೆ ಶಾಂತಿ ದೊರೆಯುತ್ತದೆಂದು ನಂಬಿದರು. ಶ್ರೀಗಳು ನಿಸ್ವಾರ್ಥದಿಂದ ಕಾಯಕ ಮಾಡಿ ಬರುವ ಆದಾಯದಿಂದ ಶ್ರೀಮಠದಲ್ಲಿ ದಾಸೋಹ ಮಾಡುತ್ತಿದ್ದರು. ವಿಶಾಲ ಹೃದಯವುಳ್ಳವರಾದ ಶ್ರೀಗಳು ಸಕಲರಿಗೆ ಸಮಾನರಾಗಿ ಕಾಣುತ್ತಿದ್ದರು.

1972ರಲ್ಲಿ ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಕ್ಷಾಮ ತಲೆದೋರಿತು. ಜನರು ತಮ್ಮ ಉಪ ಜೀವನಕ್ಕೆ ಆಹಾರವಿಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಅಂತಹ ಗಂಭೀರ ಸಮಸ್ಯೆಯ ಸಂದರ್ಭದಲ್ಲಿ ಚನ್ನಬಸವ ಪಟ್ಟದ್ದೇವರು ಅಕ್ಕಿಯ ಗಂಜಿಯಿಂದ ಹಲವಾರು ಭಕ್ತರಿಗೆ ದಾಸೋಹಗೈದ ಕೀರ್ತಿ ಅವರಿಗೆ ಸಲ್ಲುತ್ತದೆ.

ಧಾರ್ಮಿಕ ಹಾಗೂ ಸಾಮಾಜಿಕ ಕೊಡುಗೆಗಳಲ್ಲಿ ಗಣನೀಯವಾದ ಸೇವೆ ಸಲ್ಲಿಸಿದ ಇವರು ಮುಂದೆ ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಒಲವನ್ನು ತೋರಿದರು. 1931ರಲ್ಲಿ ನಾರಾಯಣಖೇಡ ತಾಲ್ಲೂಕಿನ ಮೋರಗಿ ಗ್ರಾಮದಲ್ಲಿ ಕನ್ನಡ ಪಾಠ ಶಾಲೆಯನ್ನು ಪ್ರಪ್ರಥಮವಾಗಿ ಪ್ರಾರಂಭಿಸಿದರು. 1940ರಲ್ಲಿ ದೇವಣಿ ಮತ್ತು ಮಾಂಜ್ರಾನದಿಗಳ ಸಂಗಮವಾದ ಕೂಡಲ ಸಂಗಮದಲ್ಲಿ ಮತ್ತೊಂದು ಪಾಠ ಶಾಲೆಯನ್ನು ಪ್ರಾರಂಭಿಸಿದರು. ಈ ಸಂಸ್ಥೆಗೆ ಶಾಂತಿವರ್ಧ ಶಿಕ್ಷಣ ಸಂಸ್ಥೆ ಎಂಬ ಹೆಸರು ನಾಮಕರಣ ಮಾಡಿದರು. ಅದರ ಮುಖಾಂತರ ಅನೇಕ ಶಾಲಾ ಕಾಲೇಜುಗಳನ್ನು ಸ್ಥಾಪಿಸಿ ನಡೆಸಿಕೊಂಡು ಬರಲಾಗಿದೆ.

ಒಟ್ಟಾರೆಯಾಗಿ ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಅನುಪಮ ಸೇವೆಯನ್ನು ಸಲ್ಲಿಸಿ 22 ಏಪ್ರಿಲ್ 1999ರಂದು ಕಲಬುರ್ಗಿಯ ಶ್ರೀ ಬಸವೇಶ್ವರ ಆಸ್ಪತ್ರೆಯಲ್ಲಿ ಲಿಂಗೈಕ್ಯರಾದರು. ಈ ಸುದ್ದಿಯನ್ನು ಕೇಳಿದ ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಿಂದ ಲಕ್ಷಾನುಗಟ್ಟಲೇ ಭಕ್ತರು ಆಗಮಿಸಿ ಅಂತಿಮ ದರ್ಶನ ಪಡೆದುಕೊಂಡರು.

ಭಾಲ್ಕಿ ಮಠದ ಶಾಖಾ ಮಠಗಳು

ಕ್ರ.ಸಂ.	ಊರುಗಳು	ತಾಲ್ಲೂಕು	ಜಿಲ್ಲೆ	ರಾಜ್ಯ
1)	ಕಮಲನಗರ	ಔರಾದ	ಬೀದರ	ಕರ್ನಾಟಕ
2)	ಬೋರಾಳ	ಔರಾದ	ಬೀದರ	ಕರ್ನಾಟಕ
3)	ವಲ್ಲೆಪೂರ	ಔರಾದ	ಬೀದರ	ಕರ್ನಾಟಕ
4)	ಕಾರಾಮುಂಗಿ	ನಾರಾಯಣಖೇಡ	ಮೇದಕ	ಆಂಧ್ರಪ್ರದೇಶ
5)	ಮೋರ್ಗಿ	ನಾರಾಯಣಖೇಡ	ಮೇದಕ	ಆಂಧ್ರಪ್ರದೇಶ
6)	ಮೈನಹಳ್ಳಿ	ನಾರಾಯಣಖೇಡ	ಮೇದಕ	ಆಂಧ್ರಪ್ರದೇಶ
7)	ಪಗಡಪಲ್ಲಿ	ನಾರಾಯಣ ಖೇಡ	ಮೇದಕ	ಆಂಧ್ರಪ್ರದೇಶ
8)	ಶಾಹಾಪೂರ	ನಾರಾಯಣಖೇಡ	ಮೇದಕ	ಆಂಧ್ರಪ್ರದೇಶ
9)	ಚಕುರ್ತಿ	ನಾರಾಯಣಖೇಡ	ಮೇದಕ	ಆಂಧ್ರಪ್ರದೇಶ
10)	ಹೋಕ್ರಾಣಿ	ನಾರಾಯಣಖೇಡ	ಮೇದಕ	ಆಂಧ್ರಪ್ರದೇಶ
11)	ಶಿರಾಡೋಳ	ಕಂಧಾರ	ನಾಂದೇಡ	ಮಹಾರಾಷ್ಟ್ರ
12)	ಗಾದಗಿ	ಬೀದರ	ಬೀದರ	ಕರ್ನಾಟಕ

ಹೀಗೆ ಭಾಲ್ಕಿ ಹಿರೇಮಠಧೀಮಧ ಹಲವಾರು ಶಾಖಾ ಮಠಗಳು ಸ್ಥಾಪಿಸಿದ್ದಾರೆ. ಪೂಜ್ಯಶ್ರೀ ಚನ್ನಬಸವಪಟ್ಟದ್ದೇವರು ಶಾಂತಿಯ ಸ್ಥಾಪನೆಗಾಗಿ ಬದುಕಿನಲ್ಲಿ ವಿವಿಧ ಗ್ರಾಮಗಳಲ್ಲಿ ಶಾಖಾ ಮಠಗಳನ್ನು ಸ್ಥಾಪಿಸಿದ್ದಾರೆ.

ಹಾರಕೂಡ ಹಿರೇಮಠ

ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಹಾರಕೂಡ ಹಿರೇಮಠವು ಬಸವಕಲ್ಯಾಣದಿಂದ ಸಲಗರ (ಕೆ) ಹೋಗುವ ಉತ್ತರ ಮಾರ್ಗದಲ್ಲಿ ಸುಮಾರು 25 ಕಿ.ಮೀ. ದೂರದಲ್ಲಿರುವ ಹಾರಕೂಡ ಎಂಬ ಚಿಕ್ಕ ಗ್ರಾಮ. ಗ್ರಾಮದ ಹೊರವಲಯದ ಪ್ರಕೃತಿಯ ವಾತಾವರಣದಲ್ಲಿ ಭವ್ಯವಾಗಿ ಬೆಳೆದಿರುವ ಹಾರಕೂಡ ಹಿರೇಮಠವು ಕಾಣುತ್ತದೆ. ಈ ಮಠಕ್ಕೆ ಸಾವಿರಾರು ವರ್ಷದ ಇತಿಹಾಸವಿದೆ. ಭಕ್ತಿ, ವೈರಾಗ್ಯ, ಜ್ಞಾನಗಳ ತ್ರಿವೀಧ ದಾಸೋಹಕ್ಕೆ ಈ ಮಠ ಹೆಸರಾಗಿದೆ.

ವಂಶಾವಳಿ :

ಸದ್ಗುರು ಶ್ರೀ ಸಂಗನಬಸವ ಸ್ವಾಮಿಗಳು	:	ಮಠದ ಮೂಲ ಸಂಸ್ಥಾಪಕರು
ಶ್ರೀ ಸಿದ್ಧಲಿಂಗ ಸ್ವಾಮಿಗಳು	:	ಇವರ ಗದ್ದುಗೆ ಕಾಳಗಿಯಲ್ಲಿದೆ.
ಶ್ರೀ ಚನ್ನವೀರ ಸ್ವಾಮಿಗಳು	:	ಇವರ ಗದ್ದುಗೆ ರುಕ್ಮಾಪುರದಲ್ಲಿದೆ.
ಶ್ರೀ ಬಸವಲಿಂಗ ಸ್ವಾಮಿಗಳು	:	ಇವರ ಗದ್ದುಗೆ ಶ್ರೀಮಠದಲ್ಲಿಯೇ ಇದೆ.
ಶ್ರೀ ಎರಡನೆ ಸಂಗನಬಸವ ಸ್ವಾಮಿಗಳು	:	ಇವರ ಗದ್ದುಗೆ ಶ್ರೀಮಠದಲ್ಲಿಯೇ ಇದೆ.
ಶ್ರೀ ಚನ್ನಬಸವ ಶಿವಯೋಗಿಗಳು	:	ಸ್ವಯಂ ಸಿದ್ಧಿಪುರುಷರಾಗಿದ್ದರು.
ಶ್ರೀ ಗುರುಲಿಂಗ ಶಿವಾಚಾರ್ಯರು	:	ಇವರ ಗದ್ದುಗೆ ಶ್ರೀಮಠದಲ್ಲಿಯೇ ಇದೆ.
ಶ್ರೀ ಚನ್ನವೀರ ಶಿವಾಚಾರ್ಯರು	:	ನೂತನ ಮಠಾಧೀಶರು

ಹೀಗೆ ಗುರುಪರಂಪರೆ ಬೆಳೆದುಬಂದಿದೆ. 20ನೇ ಶತಮಾನದ ಮಧ್ಯಭಾಗದಲ್ಲಿ ಬಾಳಿ ಬೆಳಗಿದಂತಹ ಆರನೆಯ ಮಠಾಧೀಶರಾದ ಶ್ರೀ ಚನ್ನಬಸವ ಶಿವಯೋಗಿಗಳು ಬಾಲ ತಪಸ್ವಿಗಳಾಗಿ, ಪವಾಡ ಪುರುಷರಾಗಿ, ಗುರು ರೂಪದ ಹರನಾಗಿದ್ದರು. ತಮ್ಮ ಜೀವಿತವನ್ನು ಬಡವರ, ದಲಿತ ಹಾಗೂ ಹಿಂದುಳಿದವರ ಏಳ್ಗೆಗಾಗಿ ಮುಡುಪಾಗಿಟ್ಟು ಲೋಕಕಲ್ಯಾಣಕ್ಕಾಗಿ, ಜನಕಲ್ಲಯಾಣಕ್ಕಾಗಿ ಪೂಜಾ ತಪಸ್ಸಿನಿಂದ ಭಕ್ತರನ್ನು ಉದ್ಧರಿಸಿ, ಚರಿತ್ರನಾಯಕರಾಗಿ ಕಂಗೊಳಿಸಿದ್ದಾರೆ. "ತಮ್ಮ ನಿರಂತರ ಧರ್ಮ ಪ್ರಸಾರದ ಸಂದರ್ಭದಲ್ಲಿ ಅನೇಕ ಪವಾಡಗಳನ್ನು ಜನಕಲ್ಯಾಣವನ್ನು ಮಾಡಿದ್ದಾರೆ. ಅದಕ್ಕಾಗಿಯೇ ಜನತೆ ಇವರನ್ನು ಕಲ್ಯಾಣ ನಾಡಿನ ಕಾರಣಿಕ ಪುರುಷರೆಂದು ನೆನೆಯುತ್ತಾರೆ". ಶ್ರೀಗಳ ಸಿದ್ಧಿ ಪ್ರಸಿದ್ಧಿಯನ್ನು ಕಂಡು ಹಾರಕೂಡ ಗ್ರಾಮದ ಕೀರ್ತಿ ಸೂಕ್ಷೇತ್ರವಾಗಿ ಬಾನೆತ್ತರಕ್ಕೆ ಬೆಳಗಿತು.

ಹಾರಕೂಡ ಮಠದ ಶಾಖಾ ಮಠಗಳು :

ಊರುಗಳು	ತಾಲ್ಲೂಕು	ಜಿಲ್ಲೆ	ರಾಜ್ಯ
ಗದಲೆಗಾಂವ	ಬಸವಕಲ್ಯಾಣ	ಬೀದರ	ಕರ್ನಾಟಕ
ಸರಜೋಳಗಾ	ಬಸವಕಲ್ಯಾಣ	ಬೀದರ	ಕರ್ನಾಟಕ
ದುಬಲಗುಂಡಿ	ಹುಮನಾಬಾದ	ಬೀದರ	ಕರ್ನಾಟಕ
ಸೇಡೋಳಾ	ಹುಮನಾಬಾದ	ಬೀದರ	ಕರ್ನಾಟಕ
ಚಿಂಚೋಳಿ	ಚಿಂಚೋಳಿ	ಗಲಬರ್ಗಾ	ಕರ್ನಾಟಕ
ತುರೂರಿ	ಉಮರ್ಗಾ	ಉಸ್ಮಾನಬಾದ	ಮಹಾರಾಷ್ಟ್ರ
ಜೀವಣಗಿ	ತಾಂಡೂರು	ರಂಗಾರೆಡ್ಡಿ	ಆಂಧ್ರಪ್ರದೇಶ

ಹುಲುಸೂರು ವಿರಕ್ತಮಠ

ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಮಠವೆಂದರೆ ಹುಲುಸೂರು ವಿರಕ್ತಮಠ. ಈ ಮಠವು ಬೀದರ ಜಿಲ್ಲೆಯ ವಿರಕ್ತ ಮಠಗಳಲ್ಲಿಯೇ ಕೇಂದ್ರಬಿಂದುವಾಗಿದೆ. ಇದು ಬಸವಕಲ್ಯಾಣ ತಾಲ್ಲೂಕಿನ ಹೋಬಳಿ ಗ್ರಾಮ ಹುಲುಸೂರು. ಭಾಲ್ಕಿ ಮತ್ತು ಬಸವಕಲ್ಯಾಣ ರಸ್ತೆ ಮಧ್ಯಭಾಗದಲ್ಲಿ ಕೇಂದ್ರ ಹೋಬಳಿಯಾಗಿ ದೊರೆಯುತ್ತದೆ. ಹುಲುಸೂರು ಗ್ರಾಮದ ಬಸ್ ನಿಲ್ದಾಣದಲ್ಲಿ ನಿಂತರೆ ಮಠದ ಮೇಲೆ ರಾಜೆಸೂರು ಘಟಸ್ಥಳ ಧ್ವಜವು ಕಾಣುತ್ತದೆ.

ಈ ಮಠಕ್ಕೆ ತನ್ನದೆಯಾದ ಪ್ರಾಚೀನತೆಯ ಇತಿಹಾಸವಿದೆ. ಇದು ಹನ್ನೆರಡನೆಯ ಶತಮಾನದಲ್ಲಿ ಚೌಕಿ ಮಠವಾಗಿತ್ತು. ಈ ಮಠವು ಹನ್ನೆರಡನೆಯ ಶತಮಾನದಲ್ಲಿ ಅಲ್ಲಮಪ್ರಭು ದೇವರು ಸ್ಥಾಪಿಸಿದ್ದರೆಂದು ತಿಳಿದುಬರುತ್ತದೆ. ಇವರು ಸ್ಥಾಪಿಸಿದ ಚೌಕಿ ಮಠವು ವಿರಕ್ತ ಮಠವಾಗಿ ಪರಿವರ್ತನೆಗೊಂಡಿದೆ. ಜಾತಿ, ಧರ್ಮ, ಪಂಥ, ಕುಲ, ಗೋತ್ರಗಳನ್ನು ಮೀರಿ ಕೆಲಸ ಮಾಡುತ್ತಿರುವುದು ಈ ಮಠದ ಒಂದು ವಿಶೇಷತೆ. ಜಾತೀಯತೆ, ಮೂಢನಂಬಿಕೆಗಳ ಖಂಡನೆ ಮಾಡುವುದು ಲಿಂಗಧಾರಣೆಗಳು ಜನ ಸಮುದಾಯಕ್ಕೆ ಸಂಸ್ಕರಣೆಯನ್ನು ಮಾಡುತ್ತಿದ್ದಾರೆ. ಆ ಮಠವು ಇಂದು ಅನೇಕ ಮಕ್ಕಳನ್ನು ರಕ್ಷಿಸಿ ಶಿಕ್ಷಣ ದೊರಕಿಸಿಕೊಡುತ್ತಿರುವುದು ಸಾಕ್ಷಿಯಾಗಿದೆ. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿ ಜನರು ಸರಿಸಮಾನರು ಎಂಬುದನ್ನು ಸಾಬೀತುಪಡಿಸುತ್ತಿದ್ದಾರೆ. ಈ ಮಠಕ್ಕೆ ಸುಮಾರು 19 ಮಠಾಧೀಶರು ಸೇವೆ ಸಲ್ಲಿಸಿರುತ್ತಾರೆ. ಅವರುಗಳ ವಂಶಾವಳಿ ಈ ಕೆಳಗಿನಂತಿದೆ :

ವಂಶಾವಳಿ

ಪೂಜ್ಯ ಶ್ರೀ ಪ್ರಭುದೇವರು

ಲಿಂ. ಪೂಜ್ಯ ಶ್ರೀ ಚೆನ್ನಬಸವ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ತೋಂಟಾದಾರ್ಯ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಪಂಚಾಕ್ಷರಿ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಕಲ್ಯಾಣ ಮರಿ ಮಹಾಂತ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ನೀಲಕಂಠ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಪ್ರಭು ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ರೇವಣಸಿದ್ಧ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಚಿಂತಾಮಣಿ ಮಹಾಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಚನ್ನಮಲ್ಲ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಗುರುಬಸವ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಗುರುಪಾದ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಪಂಚಾಕ್ಷರಿ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಗುರುಲಿಂಗ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಚಂದ್ರಶೇಖರ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ದೊಡ್ಡ ಗುರುಬಸವ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಪಂಚಾಕ್ಷರಿ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಗುರುಬಸವ ಸ್ವಾಮಿಗಳು

ಲಿಂ. ಪೂಜ್ಯ ಶ್ರೀ ಬಸವಕುಮಾರ ಶಿವಯೋಗಿಗಳು

ಶ್ರೀ ಮ.ನಿ.ಪ್ರ. ಶಿವಾನಂದ ಮಹಾಸ್ವಾಮಿಗಳು

ಹನ್ನೆರಡನೇ ಶತಮಾನದ ಮೂಲ ತತ್ವಗಳನ್ನು ಅನುಷ್ಠಾನದಲ್ಲಿ ತರುವಲ್ಲಿ ಈ ಮಠವು ಶತಪ್ರಯತ್ನ ಮಾಡುತ್ತಿದೆ. 19ನೇ ಮಠಾಧೀಶರಾದ ಲಿಂಗೈಕ್ಯ ಬಸವಕುಮಾರ ಶಿವಯೋಗಿಗಳು ಸಿದ್ಧಿ ಪುರುಷರು-ಸಾಧನ ಪುರುಷರಾಗಿದ್ದರು. ಅಲ್ಲದೆ ಪವಾಡ ಪುರುಷರೂ ಆಗಿದ್ದರು. ಅವರು ಮಾಡಿರುವ ಅಮೋಘ ಕಾರ್ಯಗಳನ್ನು ಜನರು ಇಂದಿಗೂ ಹೇಳುತ್ತಿರುತ್ತಾರೆ. ತಾನರಿಯಬೇಕಾದರೆ ಮೊದಲು ಲಿಂಗವನರಿಯಬೇಕು ಎಂಬ ಉದ್ಧಾತ ತತ್ವವನ್ನು ಅಳವಡಿಸಿಕೊಂಡು ಬಂದವರು. ಯಾರಿಗೂ ಎಂದೂ ಕೇಡನ್ನು ಬಯಸಿದವರಲ್ಲ. ಮತ್ತೊಬ್ಬರ ಮನಸ್ಸು ಮುರಿದವರಲ್ಲ. ಸದಾ ಹಸನ್ಮುಖಿಯಾಗಿ ಜನರ ಜೊತೆ ಬೆರೆಯುತ್ತಿದ್ದರು. ಪಾಠ ಪ್ರವಚನಗಳು ಸದಾ ನಡೆಸಿಕೊಂಡು ಬರುತ್ತಿದ್ದರು.

ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿಗಳು ಹುಲುಸೂರು ಮಠದ ಅಧಿಕಾರ ವಹಿಸಿಕೊಂಡು 25 ವರ್ಷ ಸರಿದವು. ಅವರು ಅಧಿಕಾರಕ್ಕೆ ಬಂದ ಮೇಲೆ ಮಠವು ಪ್ರಗತಿಯ ದಾರಿಯಲ್ಲಿ ಸಾಗತೊಡಗಿದೆ. ಆಚಾರ ಪ್ರಚಾರವಿಲ್ಲದೆ ಬೂದಿ ಮುಚ್ಚಿದ ಕೆಂಡದಂತೆ ಶ್ರೀಗಳ ಜೀವನ ವ್ಯಕ್ತಿತ್ವವಾಗಿದೆ. ಸರಳ ಮನೋಭಾವ, ಪ್ರಬದ್ಧ ನಡತೆಯಲ್ಲಿ ವಿಶಾಲ ಹೃದಯದವರಾದ ಇಂತಹ ಮಠಾಧೀಶರು ಸಿಗುವುದು ತೀರಾ ವಿರಳ. ಇವರ ಆಧ್ಯಾತ್ಮಿಕತೆಯಲ್ಲಿ ಅಪಾರ ಜ್ಞಾನವನ್ನು ಹೊಂದಿದ್ದಾರೆ. ಜಿಲ್ಲೆಯಲ್ಲಿ ಇವರ ಪ್ರಭಾವ ಮೆಚ್ಚುವಂತಹದ್ದು. ಇವರ ಜೀವನ ಅರಿಯುವುದು ಅತಿ ಮುಖ್ಯವಾಗಿದೆ.

ಹುಲುಸೂರು ಮಠದ ಶಾಖಾ ಮಠಗಳು :

ಊರುಗಳು	ತಾಲ್ಲೂಕು	ಜಿಲ್ಲೆ	ರಾಜ್ಯ
ಬೇಲೂರು	ಬಸವ ಕಲ್ಯಾಣ	ಬೀದರ	ಕರ್ನಾಟಕ
ಪ್ರತಾಪೂರ	ಬಸವ ಕಲ್ಯಾಣ	ಬೀದರ	ಕರ್ನಾಟಕ
ಖಂಡಾಳ	ಬಸವ ಕಲ್ಯಾಣ	ಬೀದರ	ಕರ್ನಾಟಕ
ಗೌಡಗಾಂವ	ಬಸವ ಕಲ್ಯಾಣ	ಬೀದರ	ಕರ್ನಾಟಕ
ಬ್ಯಾಲಹಳ್ಳಿ	ಭಾಲ್ಕಿ	ಬೀದರ	ಕರ್ನಾಟಕ
ಸಾಯಗಾಂವ	ಭಾಲ್ಕಿ	ಬೀದರ	ಕರ್ನಾಟಕ
ಹುಣಜಿ	ಭಾಲ್ಕಿ	ಬೀದರ	ಕರ್ನಾಟಕ
ಕಣಜಿ	ಭಾಲ್ಕಿ	ಬೀದರ	ಕರ್ನಾಟಕ
ಜ್ಯಾಂತಿ	ಭಾಲ್ಕಿ	ಬೀದರ	ಕರ್ನಾಟಕ
ಧನ್ನೂರು	ಭಾಲ್ಕಿ	ಬೀದರ	ಕರ್ನಾಟಕ
ನಿರ್ಣಾಹುಮನಾಬಾದ	ಭಾಲ್ಕಿ	ಬೀದರ	ಕರ್ನಾಟಕ
ಕಡಂಬಲ	ಹುಮನಾಬಾದ	ಬೀದರ	ಕರ್ನಾಟಕ
ನಾಗರಾಳ	ಉದಗೀರ	ಬೀದರ	ಕರ್ನಾಟಕ
ಉದಗೀರ	ಉದಗೀರ	ಲಾತೂರ	ಮಹಾರಾಷ್ಟ್ರ
ಹೈದ್ರಾಬಾದ್	ಹೈದ್ರಾಬಾದ್	ಹೈದ್ರಾಬಾದ್	ಆಂಧ್ರಪ್ರದೇಶ

ಹೀಗೆ ಹುಲಸೂರು ಶ್ರೀಗುರು ಬಸವೇಶ್ವರ ಸಂಸ್ಥಾನ ಮಠದಿಂದ ವಿವಿಧ ಗ್ರಾಮಗಳಲ್ಲಿ ಶಾಖಾ ಮಠಗಳು ಸ್ಥಾಪನೆಗೊಂಡಿವೆ. ಈ ಮಠಗಳಿಂದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ಸೇವೆ ಸಲ್ಲಿಸುತ್ತಿರುವುದು ಅನುಪಮವಾಗಿದೆ. ವಿವಿಧ ರಚನಾತ್ಮಕ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡು ಸಮಾಜಮುಖಿಯಾಗಿ ಕಾರ್ಯಮಾಡುತ್ತಿವೆ. ಇಂತಹ ಮಠಗಳಿಂದ ಸಮಾಜ ಅಭಿವೃದ್ಧಿ ಹೊಂದುವುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ.

ಭಾತಂಬ್ರಾ ವಿರಕ್ತಮಠ

ಬೀದರ ಜಿಲ್ಲೆಯಲ್ಲಿ ಭಾತಂಬ್ರಾ ವಿರಕ್ತಮಠದ ಶಾಖಾ ಮಠವಾದ ಬಸವ ಮುಕ್ತಿಮಂದಿರವು ಪ್ರಮುಖ ಮಠಗಳಲ್ಲಿ ಒಂದಾಗಿದೆ. ನೂತನ ಶ್ರೀಗಳಾದ ಶಿವಯೋಗೀಶ್ವರ ಸ್ವಾಮಿಗಳು ಯಾವ ಸದ್ದುಗದ್ದಲವಿಲ್ಲದೆ, ಅಬ್ಬರ ಪ್ರಚಾರವಿಲ್ಲದೆ, ಸಾರ್ವಜನಿಕರ ಹಾಗೂ ಸರಕಾರಗಳ ಬೆಂಬಲಗಳಿಲ್ಲದೆ -ಮೌನವಾಗಿ ಕಳೆದ ಇಪ್ಪತ್ತೈದು ವರ್ಷಗಳಿಂದ ಅಖಂಡವಾದ ಜನಸೇವೆಯನ್ನು ಮಾಡುತ್ತಿದ್ದಾರೆ. ಅವರ ಪಾಲಿಗೆ ಜನಸೇವೆ ಬೇರೆಯಲ್ಲ, ಜನಾರ್ಧನ ಸೇವೆ ಬೇರೆಯಲ್ಲ.

ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಹುಟ್ಟಿದ್ದು - ಶಿವರಾತ್ರಿಯಂದು, ಶುಭ ಮುಹೂರ್ತದಲ್ಲಿ ಹುಟ್ಟಿದ ಅವರು ತಮ್ಮ ಬಾಲ್ಯ ಕಾಲದಲ್ಲಿಯೇ ಜೀವನೋದ್ಧೇಶವನ್ನು ಇರಿಸಿಕೊಂಡು ಬೆಳೆದವರು. ಇವರು ಆಂಧ್ರಪ್ರದೇಶದ ಮೇದಕ ಜಿಲ್ಲೆಗೆ ಸಂಬಂಧಿಸಿದ ಅಬ್ಬೆಂದಿ ಗ್ರಾಮದಲ್ಲಿ ಹುಟ್ಟಿದರು. ಇಂಥ ಕಾರಣಿಕ ಪುರುಷನ ತಂದೆ ಬಸವಯ್ಯನಾದರೆ - ತಾಯಿ ಗುಜ್ಜಮ್ಮರಾಗಿದ್ದರು.

ಶ್ರೀಗಳು ತಮ್ಮ ಜನ್ಮಸ್ಥಳವಾದ ಅಬ್ಬೆಂದಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸುತ್ತಲೇ ಭಾಲ್ಕಿಯ ಶ್ರೀ ಚನ್ನಬಸವ ಪಟ್ಟದ್ದೇವರು ಪ್ರಾರಂಭಿಸಿದ ಕಮಲನಗರದ ಶಾಂತಿವರ್ಧಕ ಶಾಲೆಯಲ್ಲಿಯೂ ತಮ್ಮ ಅಭ್ಯಾಸ ಮುಂದುವರೆಸಿದರು.

ಹುಟ್ಟಾ ಶಿವಯೋಗಿಯೆಂದು ಅಂಕಿತನಾಮವನ್ನಿರಿಸಿಕೊಂಡು ಬೆಳೆದ ಶ್ರೀಗಳವರು ಹನ್ನೆರಡು ವರ್ಷದ ತರುಣರಿದ್ದಾಗಲೇ ಭಾಲ್ಕಿಯ ಹಿರೇಮಠದ ಉತ್ತರಾಧಿಕಾರಿಗಳಾಗಿ 1957ರಲ್ಲಿ ಆರಿಸಲ್ಪಟ್ಟರು. ಮುಂದಿನ ವರ್ಷವೇ ಅಂದರೆ 1958ರಲ್ಲಿ ಅವರನ್ನು ಶಿವಯೋಗ ಮಂದಿರಕ್ಕೆ ಕಳಿಸಲಾಯಿತು. ಅಲ್ಲಿ ಅವರು ನಾಲ್ಕು ವರ್ಷಗಳವರೆಗೆ ಆಧ್ಯಾತ್ಮಿಕ ಹಾಗೂ ವಚನಶಾಸ್ತ್ರದ ಶಿಕ್ಷಣದಲ್ಲಿ ತರಬೇತಿ ಪಡೆದರು. ಯೋಗವನ್ನು ಶ್ರದ್ಧೆ, ನಿಷ್ಠೆಗಳಿಂದ ಕರತಲಾಮಲಕ ಮಾಡಿಕೊಂಡರು. ಪವಿತ್ರ ಆಚಾರ-ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು.

ಶಿವಯೋಗ ಮಂದಿರದಲ್ಲಿ ಹಾನಗಲ್ ಕುಮಾರಸ್ವಾಮಿಗಳ ಪರಿಸರದಡಿಯಲ್ಲಿ ಕುಳಿತು ಅವರು ಆಧ್ಯಾತ್ಮವಿದ್ಯೆಯನ್ನು ಪಡೆದಂತೆ ಸಮಾಜ ಸೇವೆಯನ್ನು ತಮ್ಮ ಜೀವನದ ಆದರ್ಶವನ್ನಾಗಿ ಸ್ವೀಕರಿಸಿದರು. ಆಗ ಅವರ ವಯಸ್ಸು ಕೇವಲ ಹದಿನೇಳು ಎಂದರೆ ಆಶ್ಚರ್ಯವಾಗುತ್ತದೆ. ಹದಿನೇಳು ವಯಸ್ಸಿಗೆ ಉಳಿದ

ಮಕ್ಕಳೆಲ್ಲಾ ಧ್ಯೇಯ ಹೀನರಾಗಿ ಅಲೆಯುತ್ತಿದ್ದಾಗ, ಬೆಳೆಯುತ್ತಿರುವ ಶ್ರೀಗಳವರು ತಮ್ಮ ಹೃದಯ ಮಂದಿರದಲ್ಲಿ ಆದರ್ಶದ ಕುಡಿಯೊಂದನ್ನು ಬೆಳೆಸಿಕೊಂಡರು.

ಮಠಗಳ ಅಧಿಪತಿಯಾಗಿ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಜಡವಸ್ತುವಾಗಿ ಒಂದೇ ಒಂದು ಸ್ಥಳದಲ್ಲಿ ಸ್ಥಾವರ ಲಿಂಗವಾಗಿ ಕೂಡಲಿಲ್ಲ. ಜಂಗಮನಾಗಿ - 101 ಹಳ್ಳಿಗಳವರೆಗೆ ಪಾದಯಾತ್ರೆ ಕೈಗೊಂಡರು. ಇದೊಂದು ಐತಿಹಾಸಿಕ ಪಾದಯಾತ್ರೆ. ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಸ್ವಯಂ ಸ್ಫೂರ್ತಿಯಿಂದ ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳ ಹಳ್ಳಿಗಳಿಗೆ - ಯಾರ ಆಮಂತ್ರಣವೂ ಇಲ್ಲದೆ ಹೋಗಿ ತಮ್ಮ ವಾಣಿಯಿಂದ ಬಸವ ವಚನಾಮೃತವನ್ನು ತಮ್ಮ ಸರಳ, ಸುಂದರ ಶೈಲಿಯಲ್ಲಿ ವರ್ಣಿಸಿದರು. ಅದೊಂದು ಪಾದಯಾತ್ರೆಯಲ್ಲಿ ಆಧ್ಯಾತ್ಮಿಕ ವಿಜಯಯಾತ್ರೆ. ಅವರು ಮಾಡಿದ್ದು ಕೇವಲ ಧರ್ಮಬೋಧನೆಯಲ್ಲ, ಸಾಮಾಜಿಕ ಸುಧಾರಣೆಯ ಪ್ರಚಾರ. ಹೀಗೆ 1980 ರಿಂದ 1992ರವರೆಗೆ ಹನ್ನೆರಡು ವರ್ಷಗಳಲ್ಲಿ 101 ಹಳ್ಳಿಗಳ ಪಾದಯಾತ್ರೆ ಮುಗಿಸಿದರು. ಈ ರೀತಿ ಪಾದಯಾತ್ರೆ ಮಾಡಿದ ಅವರು ಜನರಲ್ಲಿ ಒಳ್ಳೆಯ ನೀತಿ ಸಂಹಿತೆಯನ್ನೇ ಹೇಳಿಕೊಟ್ಟರು. ಮದ್ಯಪಾನ ಮಾಡದೆ ಇರಲು, ಬೀಡಿ-ಸಿಗರೇಟು ಸೇದದೆ ಇರಲು, ಮಕ್ಕಳ ಲಗ್ನಗಳಲ್ಲಿ ವರದಕ್ಷಿಣೆ ಕೊಡದೆ ಇರಲು, ಸ್ವೀಕರಿಸದೆ ಇರಲು, ಜನರಿಗೆ ನೀತಿ ಹೇಳಿದರು. ಜನರಲ್ಲಿರುವ ಮೂಢನಂಬಿಕೆ, ಅಂಧಶ್ರದ್ಧೆ ಬೇರು ಸಹಿತ ಕಿತ್ತುಹಾಕಲು ಪ್ರಯತ್ನಿಸಿದರು. ಇವೆಲ್ಲವುಗಳ ಜೊತೆಗೆ ಅವರು ಕೈಗೊಂಡ ಕಾರ್ಯವೆಂದರೆ - ಪರಿಸರ ನೈರ್ಮಲ್ಯದ ಅವಶ್ಯಕತೆ, ಧಾರ್ಮಿಕ ಸೌಹಾರ್ದತೆಯ ಅವಶ್ಯಕತೆ, ಗ್ರಾಮ ಸಂಘಟನೆಯ ಅವಶ್ಯಕತೆಯನ್ನು ಜನರಲ್ಲಿ ಬಿಂಬಿಸಿದರು.

ಬೀದರ ಸಿದ್ಧಾರೂಢ ಮಠ

ಕೆಂಪು ಮಣ್ಣಿನ ತಂಪು ಪರಿಸರದಲ್ಲಿ ಹುಟ್ಟಿಕೊಂಡ ಬೀದರ ಸಿದ್ಧಾರೂಢ ಮಠವು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಮೊದಲಾದ ಮಹತ್ಕಾರ್ಯಗಳಿಗೆ ಪ್ರಮುಖವೆನಿಸಿಕೊಂಡಿದೆ. ಸಿದ್ಧಾರೂಢರ ಜನ್ಮಸ್ಥಾನವಾದ ಚಳಕಾಪೂರದ ಶಾಖಾಮಠವೇ ಇಂದು ಬೀದರದಲ್ಲಿ ಹೆಮ್ಮರವಾಗಿ ಬೆಳೆದುನಿಂತಿದೆ. ಈ ಮಠದ ಮೂಲವು ಚಳಕಾಪುರದಲ್ಲಿ ಬೀದರಕ್ಕೆ ಶಾಖಾ ಮಠವನ್ನಾಗಿ ಮಾಡಿದ ಪೂಜ್ಯ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಕಾರಣಕರ್ತರು. ಚಿರಸ್ಮರಣೀಯವಾಗಿ ಹೊಳೆಯುವ ಪೂರ್ಣಚಂದ್ರನಂತೆ ಪೂರ್ಣ ವಿಕಸಿತವಾಗಿ, ಫಲಪ್ರದವಾಗಿ ಎಸಗಿರುವ ಕಾರ್ಯಗಳು ಅವರ್ಣನೀಯವಾಗಿದೆ.

ಶ್ರೀಗಳು ಜನಿಸಿದ್ದು ಬಸವಣ್ಣನವರಿಂದ ಹಸನುಗೊಂಡ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಪಡನೂರ ಎಂಬ ಗ್ರಾಮದಲ್ಲಿ. ಆಗರ್ಭ ಶ್ರೀಮಂತರೂ, ಸ್ವಾತಂತ್ರ್ಯ ಹೋರಾಟಗಾರರೂ, ಶಾಸ್ತ್ರೀ ನಿಪುಣರಾದ ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಕಲ್ಲಪ್ಪಾ ಎಂಬ ದಂಪತಿಗಳ ಪವಿತ್ರ ಚಿದ್ಗರ್ಭದಲ್ಲಿ ಕ್ರಿ.ಶ. 1945 ಶಾಲಿವಾಹನ ಶಕೆ 1867 ವ್ಯಯನಾಮ ಸಂವತ್ಸರ ಕಾರ್ತಿಕ ಮಧ್ಯ ಏಕಾದಶಿಯ ಭಾನುವಾರದಂದು ಭಾನುವಿನ ಕಾರ್ಯವೆಸಗಲು ಭುವಿಗೆ ಬಂದರು.

ಶ್ರೀಗಳು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ವಿಜಾಪುರದಲ್ಲಿಯೇ ಮುಗಿಸಿದರು. ಹಗಲಿರುಳು ಪರಮಾತ್ಮನ ಧ್ಯಾನದಲ್ಲಿಯೇ ಇರುತ್ತಿದ್ದು, ಪರಮಾತ್ಮನ ಸರ್ವಸ್ವವೆಂಬ ಭಾವ ಒಲಿದು ಮನೆಯನ್ನು ತ್ಯಜಿಸಿ ಶ್ರೀಗಳು ನೇರವಾಗಿ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಹಾಸ್ವಾಮಿಗಳ ಕರಕಮಲ ಸಂಜಾತರಾದ ಶ್ರೀ ಶಿವಪುತ್ರ ಮಹಾಸ್ವಾಮಿಗಳ ಆಶ್ರಮಕ್ಕೆ ಬಂದು ಕಠಿಣ ಪರಿಶ್ರಮದಿಂದ ಸಂಪೂರ್ಣ ಷಟ್‌ಶಾಸ್ತ್ರಗಳನ್ನು ಕರಗತ ಮಾಡಿಕೊಂಡರು. ಇನ್ನೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಹೋದರು. ಕ್ರಿ.ಶ. 1973ರಲ್ಲಿ ಬನಾರಸ ಹಿಂದೂ ವಿಶ್ವವಿದ್ಯಾಲಯದಿಂದ ಹಿಂದಿ ಬಿ.ಎ. ಮುಗಿಸಿದರು. ಅಲ್ಲಿಂದ ಪೂನಾ ವಿಶ್ವವಿದ್ಯಾಲಯದ ಸರ್ ಪರಶುರಾಮ ಬಾವೂ ಕಾಲೇಜಿನಲ್ಲಿ ಇಂಗ್ಲಿಷ್ ಮುಖ್ಯ ವಿಷಯವಾಗಿ ತೆಗೆದುಕೊಂಡು ಬಿ.ಎ. ಪದವಿ ಪಡೆದರು. ಅಲ್ಲಿಂದ ಮತ್ತೇ ಪುನಃ ಹರಿದ್ವಾರಕ್ಕೆ ಹೋಗಿ ಎರಡು ವರ್ಷಗಳವರೆಗೆ ಸಂಪೂರ್ಣ ಸಂಸ್ಕೃತ ವ್ಯಾಸಂಗ ಮಾಡಿದರು.

ಶಿಕ್ಷಣದ ಜೊತೆಗೆ ಶ್ರೀಗಳು ಆಧ್ಯಾತ್ಮ ತತ್ವದಲ್ಲಿ ಅಸಾಧಾರಣ ಪ್ರಗತಿಯನ್ನು ಸಾಧಿಸಿಕೊಂಡು ಕಾಶಿಯ ವಿದ್ಯಾಪೀಠದಿಂದ ಎಂ.ಎಂ. ತತ್ವಶಾಸ್ತ್ರದಲ್ಲಿ ಪದವಿ ಪಡೆದರು. ಶ್ರೀ ಮದ್‌ಭಗವದ್ಗೀತೆಯ ಮೇಲೆ ಪ್ರಭುತ್ವ ಪಡೆದವರಿಗೆ ಮಾತ್ರ ಪ್ರಧಾನ ಮಾಡುವ ಪದವಿಯಾದ "ವೇದಾಂತ ಆಚಾರ್ಯ" ವಾರಣಾಸಿಯ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನ ಶ್ರೀ ದಕ್ಷಿಣಮೂರ್ತಿ ಸಂಸ್ಕೃತ ಮಹಾವಿದ್ಯಾಲಯವು ಧೀರೋದಾತ ವ್ಯಕ್ತಿತ್ವದ ಧೀಮಂತ ಸನ್ಯಾಸಿಗಳಾದ ಶ್ರೀಗಳಿಗೆ ಲಭ್ಯವಾಯಿತು ಮತ್ತು ಕಾಶಿಯ ಹಿಂದೂ ವಿಶ್ವವಿದ್ಯಾಲಯವು "ಗೀಗೋತ್ತಮ" ಪದವಿಯನ್ನು ನೀಡಿ ಸತ್ಕರಿಸಿದರು.

"ಬೀದರದಲ್ಲಿ ಪೂಜ್ಯ ಶಿವಕುಮಾರ ಮಹಾಸ್ವಾಮಿಗಳು, ಅಣ್ಣ ಬಸವಣ್ಣರಂತೆ ಎಲ್ಲಾ ಧರ್ಮದವರನ್ನು ಜೊತೆಗೆ ತೆಗೆದುಕೊಂಡು ಹೋಗುತ್ತಿದ್ದಾರೆ. 12ನೇ ಶತಮಾನದ ನಂತರ ಬೀದರ ಜಿಲ್ಲೆಯಲ್ಲಿ ಎಲ್ಲರನ್ನೂ ಜೊತೆಗೆ ತೆಗೆದುಕೊಂಡು ಹೋಗುವ ಏಕಮೇವ ವೀರಶೈವ ಮಹಾಸ್ವಾಮೀಜಿಗಳು" ಎಂಬ ವಾಣಿಯನ್ನು

ಕೇಳಿದಾಗ ಶ್ರೀಗಳು ಸರ್ವಧರ್ಮದ ಬೆನ್ನೆಲುಬಾಗಿ ನಡೆಯುತ್ತಿದ್ದಾರೆಂದು ಹೇಳಲಾಗಿದೆ. ಧರ್ಮಗಳು ಬೇರೆ ಬೇರೆಯಿದ್ದರೂ ದೇವರೊಬ್ಬನೇ ಎಂದು ಹೇಳುವಲ್ಲಿ ಕೈಯೆತ್ತಿ ಸಾರುವಲ್ಲಿ ಶ್ರೀಗಳು ಅಗ್ರಗಣ್ಯರು. ಅಂತೆಯೇ ಮಠದಲ್ಲಿ ಸರ್ವಸ್ವವನ್ನು ನೀಡುವ 12 ಜ್ಯೋತಿರ್ಲಿಂಗಗಳು, ನವಗ್ರಹಗಳು, ನವಗ್ರಹಗಳ ಪೂಜಾ, ದೇವಿಪೂಜಾ, ಶ್ರೀ ಶಿರಡಿ ಸಾಯಿಬಾಬಾ ಪೂಜಾ, ಶ್ರೀ ಲಕ್ಷ್ಮೀನಾರಾಯಣ ಪೂಜಾ, ಗಣಪತಿ ಪೂಜಾ, ಸರಸ್ವತಿ ಪೂಜೆಗಳು ಹಾಗೂ ರುದ್ರಾಭಿಷೇಕಗಳು ದಿನನಿತ್ಯ ಜರುಗುತ್ತವೆ. ಇಂತಹ ವಿವಿಧ ದೇವತೆಗಳ ಪೂಜೆಗಳು ವೀರಶೈವ ಮಠಗಳಲ್ಲಿ ಮಾಡುವುದಿಲ್ಲ. ಆದ್ದರಿಂದ ಈ ಮಠದ ವೀರಶೈವ ಮಠಗಳಿಗೆ ಭಿನ್ನವಾಗಿದೆಯೆಂದು ಹೇಳಬಹುದು. ಅಲ್ಲದೇ, ಶ್ರೀಗಳ ಧವಳ ಕೀರ್ತಿಯನ್ನು ದಿಗಂತಕ್ಕೇರಿಸಲೆಂಬಂತೆ 49 ಅಡಿಗಳ ನಂದಿಸ್ತಂಭವನ್ನು ಈ ಕ್ಷೇತ್ರದಲ್ಲಿ ಕಾಣಬಹುದು.

"ಸರ್ವೆ ಜನಾಃ ಸುಖಿನೋ ಭವಂತು" ಎನ್ನುವ ಶ್ರೀಗಳು ಅಹರ್ನಿಶ ಎನ್ನದ ಅಲ್ಲಲ್ಲಿ ಭಕ್ತರ ಕರೆಗೆ ಓಗೊಟ್ಟು ಹಳ್ಳಿ ಪಟ್ಟಣಗಳೆನ್ನದೆ ಸಂಚಾರಗೈದು ಸಮಾಜದ ಹಿತಕಲ್ಯಾಣಕ್ಕಾಗಿ ದುಡಿಯುತ್ತಿದ್ದಾರೆ. ಅಲ್ಲದೆ ಸಾವಿರಾರು ಜ್ಞಾನ ದಾಸೋಹ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಇವರ ಶ್ರೀಮುಖದಿಂದ ಹೋರಾಡಿ ಜ್ಞಾನರಾಶಿಯೂ ನಾಡಿನ ನಾಲ್ದೆಸೆಯ ಜನಮನವನ್ನು ಸೂರೆಗೊಂಡಿದ್ದ ಫಲವಾಗಿಯೇ ಹತ್ತಾರು ಮಠಗಳು ಸ್ಥಾಪನೆಯಾದವು. ಇವುಗಳಾವುವೆಂದರೆ,

ಬ್ರಹ್ಮಾ ವಿದ್ಯಾಶ್ರಮ, ಚಳಕಾಪುರ (ಬೀದರ)

ಶ್ರೀ ಶಿವಯೋಗಾಶ್ರಮ, ಅಳೂರ (ವಿಜಾಪುರ)

ನಾಥಕಾಶ್ರಮ, ಭೀಮರಾಯನಗುಡಿ (ಗುಲಬರ್ಗಾ)

ಕೈವಲ್ಯ ಧಾಮ, ಮಿರಜ (ಸಾಂಗಲಿ)

ಶ್ರೀ ಸಿದ್ಧಾರೂಢ ಮಠ, ಯಳವಂತಗಿ (ಗುಲಬರ್ಗಾ)

ಪೂರ್ಣ ಪ್ರಜ್ಞಾಯೋಗಾಶ್ರಮ, (ಗುಲಬರ್ಗಾ)

ಶ್ರೀ ಸಿದ್ಧಾಶ್ರಮ, ಅಂಬರನಾಥ (ಮುಂಬಯಿ)

ಶ್ರೀ ಸಿದ್ಧಭಾರತಿ ಟ್ರಸ್ಟ್, ಮುಳಸಾವಳಗಿ (ವಿಜಾಪುರ)

ಶ್ರೀ ಸಿದ್ಧಾರೂಢ ಮಠ, ಸಿಂದಗಿರಾಂಪುರ (ವಿಜಾಪುರ)

ಶ್ರೀ ಸಿದ್ಧರೂಢ ಮಠ, ಹೊಸಳ್ಳಿ (ಧಾರವಾಡ)

ಶ್ರೀ ಸಿದ್ಧಾರೂಢ ಆಧ್ಯಾತ್ಮ ಸಮಿತಿ, ನಾಗಪುರ.

ಹುಲಕುಂತಿ ವಿರಕ್ತಮಠ :

ಭಾಲ್ಕಿ ತಾಲ್ಲೂಕಿನ ಖಟಕ ಚಿಂಚೋಳಿಯ ಹತ್ತಿರ ಹುಲಕುಂತಿ ಮಠವಿದೆ. ಇದು ಹುಮನಾಬಾದದಿಂದ ಉತ್ತರಕ್ಕೆ ಎಂಟು ಮೈಲಿ ದೂರ ಕಾಡಿನಲ್ಲಿದ್ದು ವಿವಿಧ ವೃಕ್ಷಗಳ ಬನವು, ಪ್ರಕೃತಿಯ ಪ್ರಶಾಂತ ವಾತಾವರಣದಲ್ಲಿ ಶ್ರೀಮಠದ ಭವ್ಯ ಕಟ್ಟಡವು ವೀರಶೈವ ಸಂಸ್ಕೃತಿಯ ಪ್ರಭಾವವನ್ನು ಪ್ರೇಕ್ಷಕರ ಮನಸ್ಸಿನ ಮೇಲೆ ಬೀರಿದೆ. ಹದಿನೈದನೆಯ ಶತಮಾನದ ಆದಿಯಿಂದಲೂ ಈ ಮಠವು ಬೆಳಕಿಗೆ ಬಂದಿರಬಹುದೆಂದು ಇಲ್ಲಿಯ ಕೆಲವು ಆಧಾರದಿಂದ ಊಹಿಸಲಾಗಿದೆ. ವಿಜಯನಗರ ಚಿಕ್ಕದೇವರಾಯನ ಕಾಲಕ್ಕೆ ಪ್ರಸಿದ್ಧರಾದ 101 ಮಂದಿ (ಜನರು) ವಿರಕ್ತರು ಕೆಲಸ ಸಂಪ್ರದಾಯದವರು ಇಲ್ಲಿ ನೆರೆದು ವಚನ ವಿಮರ್ಶೆ ತತ್ವ ಸಂಶೋಧನೆಯನ್ನು ಮಾಡಿರಬಹುದೆಂದು ಇಲ್ಲಿಯ ಕೆಲವು ಆಧಾರಗಳ ಮೇಲಿಂದ ತರ್ಕ ಉಂಟಾಗುತ್ತದೆ.

ಈ ಮಠದ ಮೂಲ ಸಂಸ್ಥಾಪಕರಾದ ಶ್ರೀ ಶಾಂತಲಿಂಗ ಮಹಾಶಿವಯೋಗಿಗಳು ಇವರು ಕಾಡಿನಲ್ಲಿಯೇ ಸಮಾಧಿಸ್ಥರಾಗಿದ್ದಾರೆ. ಇವರ ತರುವಾಯ ಮಠಾಧೀಶರ ವಂಶಾವಳಿ ಹೀಗಿದೆ :

ರುದ್ರಮುನಿ ಸ್ವಾಮಿಗಳು

ಚನ್ನವೀರ ಸ್ವಾಮಿಗಳು

ಜೋಳದ ಸ್ವಾಮಿಗಳು

ತೋಂಟದ ಸ್ವಾಮಿಗಳು

ಸಿದ್ಧಬಸವ ಸ್ವಾಮಿಗಳು

ಶಾಂತಲಿಂಗ ಸ್ವಾಮಿಗಳು

ಪ್ರಭು ಸ್ವಾಮಿಗಳು

ಶಾಂತಲಿಂಗ ಸ್ವಾಮಿಗಳು

ಕರಿಬಸವ ಸ್ವಾಮಿಗಳು

ಶ್ರೀ ಶಿವಾನಂದ ಮಹಾಸ್ವಾಮಿಗಳು

ಹೀಗೆ ಈ ಮಠದ ಮಠಾಧೀಶರಾಗಿ ಮಠದ ಚಟುವಟಿಕೆಗಳನ್ನು ನಡೆಸಿಕೊಳ್ಳುತ್ತಾ ಬಂದಿದ್ದಾರೆ. ಇತ್ತೀಚೆಗೆ ಅಂದರೆ ಶ್ರೀ ಶಿವಾನಂದ ಮಹಾಸ್ವಾಮಿಗಳವರಿಗೆ ಅಧಿಕಾರ ವಹಿಸಿದ ಕೆಲವೇ ದಿನಗಳಲ್ಲಿ ಊರ ಪ್ರಮುಖರಾದ

ಶ್ರೀ ಶಾಂತಪ್ಪ ಕಡಗಂಚಿ, ಶ್ರೀ ಶಿವಕುಮಾರ, ಕೊಟ್ರಯ್ಯ ಸ್ವಾಮಿ, ಶ್ರೀಮತಿ ಶಕುಂತಲಾ, ವೈಜನಾಥ ಸ್ವಾಮಿ, ಶ್ರೀ ಗಳಂಗಪ್ಪ ಕಡಗಂಚಿ, ಶ್ರೀ ಮಾಧವರಾವ ಗೌಡ್ರು ಹೀಗೆ ಊರ ಗಣ್ಯ ವ್ಯಕ್ತಿಗಳೇ ಮಠದ ಅಧಿಕಾರ ಜವಾಬ್ದಾರಿಯನ್ನು ವಹಿಸಿಕೊಂಡು ಮಠದ ಜೀರ್ಣೋದ್ಧಾರ ಮಾಡುತ್ತಿರುವುದು ಒಂದು ಪ್ರಮುಖ ಬದಲಾವಣೆಯ ಲಕ್ಷಣವೆಂದೇ ಹೇಳಬೇಕಾಗುತ್ತದೆ. ಏಕೆಂದರೆ ಒಬ್ಬರು ಸ್ವಾಮಿ ಮಠಾಧಿಪತಿಯಾಗಿ ಮಾಡುವ ಕೆಲಸ ಇಂದು ಸಾಮಾನ್ಯ ವ್ಯಕ್ತಿಗಳು ಮಾಡುತ್ತಿದ್ದಾರೆ. ಹೀಗೆ ಹುಲಕುಂಠಿ ಮಠವು ಶ್ರೀಗಳಿಲ್ಲದೆ ಉದಾರ ಹೃದಯದ ಗಣ್ಯವ್ಯಕ್ತಿಗಳು ಮಠದ ಜೀರ್ಣೋದ್ಧಾರ ಮಾಡುತ್ತಿರುವುದು ಕಾಣುತ್ತಿದ್ದೇವೆ.

ಬೇಮಳಖೇಡ ಹಿರೇಮಠ :

ಹುಮನಾಬಾದ ತಾಲ್ಲೂಕಿನಲ್ಲಿರುವ ಬೇಮಳಖೇಡ ಗ್ರಾಮವೊಂದು ವಿಮಲಖೇಡ ಎಂದು ಕರೆಯುತ್ತಾರೆ. ಗ್ರಾಮದ ಮಧ್ಯಭಾಗದಲ್ಲಿ ಹಿರೇಮಠ ಇದೆ. ಇದಕ್ಕೆ 'ಗುರುಸ್ಥಲಮಠ'ವೆಂದು ಕರೆಯುತ್ತಾರೆ. ಈ ಮಠಕ್ಕೆ ಪ್ರಾಚೀನತೆಯ ಇತಿಹಾಸ ಇದೆ. ಸುಮಾರು 15 ಮಠಾಧೀಶರು ಈ ಮಠದಲ್ಲಿ ಅಧಿಕಾರವನ್ನು ವಹಿಸಿಕೊಂಡು ಸೇವೆ ಸಲ್ಲಿಸಿರುವುದನ್ನು ಕಾಣುತ್ತೇವೆ. ಈ ಮಠದ ವಂಶಾವಳಿ ಈ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

ಲಿಂ. ಪೂಜ್ಯ ಶ್ರೀ ರುದ್ರದೇವರು

ಲಿಂ. ಪೂಜ್ಯ ಶ್ರೀ ಮಹಾಂತೇಶ್ವರ ದೇವರು

ಲಿಂ. ಪೂಜ್ಯ ಶ್ರೀ ಹಿರಿಶಾಂತ ದೇವರು

ಲಿಂ. ಪೂಜ್ಯ ಶ್ರೀ ರಾಚೋಟಿ ದೇವರು

ಲಿಂ. ಪೂಜ್ಯ ಶ್ರೀ ಗುರುಲಿಂಗದೇವರು

ಲಿಂ. ಪೂಜ್ಯ ಶ್ರೀ ಶಾಂತಪ್ಪಾ ದೇವರು

ಸಂಗನ ಬಸಪ್ಪದೇವರು

ರುದ್ರಾದೇವರು

ಅಯ್ಯಪ್ಪಾ ದೇವರು

ರಾಚೋಟೇಶ ದೇವರು

ಅಲ್ಲಮಪ್ರಭು ಶ್ರೀ ಗುರುಪಾದಪ್ಪಾ ದೇವರು

ಶಾಂತಪ್ಪಾದೇವರು

ಎರಡನೇ ಮಹಾಂತ ದೇವರು

ವೀರಭದ್ರಪ್ಪಾ ದೇವರು

ರಾಚೋಟೇಶ ದೇವರು

ಶ್ರೀ ಗುರುಪಾದಯ್ಯಾ ಶಿವಚಾರ್ಯರು

ಶ್ರೀ ಮಠದಲ್ಲಿ ಸುಮಾರು 15 ಮಠಾಧೀಶರು ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿ ಲಿಂಗೈಕ್ಯರಾಗಿದ್ದಾರೆ. 16ನೆಯ ಮಠಾಧೀಶರಾದ ನೂತನ ಶ್ರೀ ಗುರುಪಾದಯ್ಯ ಶಿವಾಚಾರ್ಯರು ಮಠದ ಅಧಿಕಾರವನ್ನು ಹಂಚಿಕೊಂಡು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬರುತ್ತಿರುವುದು ಕಾಣುತ್ತೇವೆ.

ಶ್ರೀಗಳು 1.1.1955ರಲ್ಲಿ ಪೀಠಾಧಿಕಾರ ಹೊಂದಿದ ನಂತರ ಮಠದ ಜೀರ್ಣೋದ್ಧಾರ, ಸಾರ್ವಜನಿಕ ಮಂಗಲ ಕಾರ್ಯಗಳು, ಸಮಾಜದ ಉದ್ಧಾರದ ಕೆಲಸಕಾರ್ಯಗಳು, ಜನ ಕಲ್ಯಾಣಕ್ಕಾಗಿ ಪಣತೊಟ್ಟು ನಿಂತಿದ್ದಾರೆ. ಜನರ ಏಳಿಗೆಗಾಗಿ ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ಹಲವೆಡೆಗಳಲ್ಲಿ ಅನುಷ್ಠಾನಗಳನ್ನು ಕೈಗೊಂಡಿದ್ದಾರೆ. ಅಲ್ಲದೇ ಧರ್ಮವನ್ನೇ ನೆಲೆಯಾಗಿಟ್ಟುಕೊಂಡು ಬಂದರೂ ಯಾವುದೇ ರೀತಿಯ ತಾರತಮ್ಯವಿಲ್ಲದೆ ಜಾತಿ ಭೇಧವಿಲ್ಲದೆ ಅನ್ನದಾಸೋಹ ನಡೆಸಿಕೊಂಡು ಬರುತ್ತಿದ್ದಾರೆ.

ಶ್ರೀಗಳ ಪರಿಚಯ :

ಬೀದರ ಜಿಲ್ಲೆಯ ಗೋರ್ಟಾ ಎಂಬ ಗ್ರಾಮದಲ್ಲಿ ಶ್ರೀ ರೇವಣಸಿದ್ಧಯ್ಯಸ್ವಾಮಿ ಮತ್ತು ತಂಗೆಮ್ಮ ಎಂಬ ದಂಪತಿಗಳು ಸುಮಾರು ಹನ್ನೆರಡು ವರ್ಷಗಳವರೆಗೆ ತಪಸ್ಸುಗೈದ ಕಾರಣ ಇವರ ಚಿದ್ಗರ್ಭದಲ್ಲಿ ಜನಿಸಿದರು. ಇವರು ಚಿಕ್ಕವರಿದ್ದಾಗಲೇ ತಂದೆ-ತಾಯಿ ಇಬ್ಬರನ್ನೂ ಕಳೆದುಕೊಂಡು ತಬ್ಬಲಿಯಾಗಿದ್ದ ಆರು ಹೊಳೆಯುವಾಗ ಸೋಲಾಪುರ ಜಿಲ್ಲೆಯ ರಾಮಲಿಂಗೇಶ್ವರ ಕ್ಷೇತ್ರದ ಅರಣ್ಯದಲ್ಲಿ ಹನ್ನೆರಡು ವರ್ಷಗಳ ಕಾಲ ತಪಸ್ಸುಗೈದರು. ನಂತರ 1950ರಲ್ಲಿ ಕಾಶೀ ಬನಾರಸ ತ್ರಿವೇಣಿ ಸಂಗಮದ ಪಾಠಶಾಲೆಯಲ್ಲಿ ಸಂಸ್ಕೃತವನ್ನು ಅಭ್ಯಾಸ ಮಾಡಿದರು.

ಹುಟ್ಟುಸಾವುಗಳ ಮಧ್ಯದಲ್ಲಿ ಸಾಧಿಸಿದ ಆಧ್ಯಾತ್ಮಿಕ ಸಾಧನೆ ಸಿದ್ಧಿಗಳು ಬಹುಮುಖ್ಯ. ಅಂತಹ ಸಾಲಿನಲ್ಲಿ ಶ್ರೀ ಗುರುಪಾದ ಶಿವಾಚಾರ್ಯರೊಬ್ಬರಾಗಿದ್ದಾರೆ. ಶ್ರೀಗಳು ಸಂಗೀತ ಪಾಠ ಪ್ರವಚನಗಳಲ್ಲಿ ಪ್ರವೀಣರಾಗಿದ್ದಾರೆ.

ಶ್ರೀಗಳು ಪೀಠಾಧಿಕಾರ ಹೊಂದಿದ ನಂತರ ಮಠದ ಜೀರ್ಣೋದ್ಧಾರ, ಸಾರ್ವಜನಿಕ ಮಂಗಲ ಕಾರ್ಯಗಳು ಮಾಡಲು ಪಣತೊಟ್ಟು ನಿಂತರು. ಜನರ ಏಳಿಗೆಗಾಗಿ ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ಹಲವೆಡೆಗಳಲ್ಲಿ ಅನುಷ್ಠಾನಗಳನ್ನು ಕೈಗೊಂಡರು. ಅಲ್ಲದೇ ಧರ್ಮವನ್ನೇ ನೆಲೆಯಾಗಿಟ್ಟುಕೊಂಡು ಬಂದರು. ಯಾವುದೇ ರೀತಿಯ ತಾರತಮ್ಯವಿಲ್ಲದೆ ಜಾತಿ ಭೇದವಿಲ್ಲದೆ ಅನ್ನದಾಸೋಹ ನಡೆಸಿಕೊಂಡು ಬರುತ್ತಿದ್ದರು.

ನಿಡವಂಚಾ ಮಠ

ಬೀದರ ಜಿಲ್ಲೆಯ ಬಸವ ಧರ್ಮದ ಪ್ರಚಾರ ಪಂಕ್ತಿಗೆ ಸೇರಿರುವ ಮಠಗಳಲ್ಲಿ ನಿಡವಂಚಾ ಮಠವು ಒಂದಾಗಿದೆ. ಇದು ಬೀದರ ತಾಲ್ಲೂಕಿನ ಮನ್ನಾಎಖೇಲಿಯಿಂದ ಒಂದು ಕಿಲೋಮೀಟರ್ ದೂರದಲ್ಲಿ ಈ ಪುಟ್ಟ ಗ್ರಾಮವಾಗಿದೆ. ಇಂತಹ ಪುಟ್ಟ ಗ್ರಾಮದಲ್ಲಿ ಮಠವು ಬೆಳೆದು ಧರ್ಮದ ಕಾರ್ಯದ ಜೊತೆಗೆ ಶೈಕ್ಷಣಿಕ ಸೇವೆಯಲ್ಲಿ ನಿರತವಾಗಿದೆ. ಇದಕ್ಕೆ ಚೌಕಿ ಮಠವೆಂದು ಕರೆಯುತ್ತಾರೆ.

ಶ್ರೀ ಮಠವು ನಡೆದುಬಂದ ದಾರಿಯಲ್ಲಿ ಹಲವಾರು ಮಠಾಧೀಶರ ಸೇವೆಯು ಅಪಾರವಾಗಿದೆ. ಇಲ್ಲಿಯವರೆಗೆ 10 ಮಠಾಧೀಶರು ಆಗಿ ಹೋಗಿದ್ದಾರೆ. ಶ್ರೀ ಭದ್ರೇಶ್ವರರು ಪ್ರಪ್ರಥಮವಾಗಿ ಮಠವನ್ನು ಸ್ಥಾಪನೆ ಮಾಡಿ ಅದರ ಅಧ್ಯಕ್ಷರಾದರು. ನಂತರ ಭೀಮರಾಯ, ಮಹಾರಾಯ, ಬುದ್ದಪ್ಪಯ್ಯ, ಸುಲ್ತಾನಸಬ ಕೋಸಮ, ಶ್ರೀ ಸಂಗಯ್ಯ, ಶ್ರೀ ಮಾತೆ ತುಕ್ಕಮ್ಮಾ, ಶ್ರೀ ಭಾಗಯ್ಯ, ಶ್ರೀ ನಾಗಪ್ಪ, ಶ್ರೀ ಸಿದ್ದಪ್ಪಾ, ಶ್ರೀ ಗುಂಡಾರಡ್ಡಿ, ಶ್ರೀ ಚನ್ನಮಲ್ಲಯ್ಯ ಹೀಗೆ ಹತ್ತು ವಂಶಾವಳಿಯು ನಡೆದುಬಂದು ಸದ್ಯಕ್ಕೆ ಶ್ರೀ ಮಾತೆ ಮೈತ್ರಾದೇವಿ ಹಾಗೂ ಶ್ರೀ ಮಡಿವಾಳೇಶ್ವರ ಎಂಬುವರಿಬ್ಬರು ಸಮನಾಗಿ 1984ರಿಂದ ಮಠಾಧಿಪತಿಯಾಗಿ ಮಠದ ಸೇವೆಯಲ್ಲಿ ನಿರತರಾಗಿದ್ದಾರೆ.

ಮಠದ ಸಂಸ್ಥಾಪಕರಾದ ಶ್ರೀ ಭದ್ರೇಶ್ವರರು ಕ್ರಿ.ಶ. 1832ರಲ್ಲಿ ಬೀದರ ಜಿಲ್ಲೆಯ ನಿಡವಂಚಾ ಗ್ರಾಮದಲ್ಲಿಯೇ ಸಿದ್ದಯ್ಯ ಮತ್ತು ಶ್ರೀಮತಿ ರುದ್ರಮ್ಮಾ ಎಂಬ ದಂಪತಿಗಳಿಗೆ ಪ್ರೀತಿಯ ಪುತ್ರರಾಗಿದ್ದರು. ಇವರು ಉದಗೀರ ಶಂಕರಲಿಂಗ ಮಠದ ರಾಚೋಟೇಶ್ವರರ ದರ್ಶನ ಪಡೆದು ದೊಡ್ಡ ತತ್ವಪದಕಾರರಾಗಿದ್ದರು. ಇವರ ತತ್ವ ಪದಗಳು ನಾಡಿನಾದ್ಯಂತ ಹರಡಿವೆ. ಅನೇಕಾನೇಕ ತತ್ವಪದಗಳಲ್ಲಿ ಒಂದೆರಡನ್ನು ನೆನೆಯಬಹುದು.

"ಗುರುಲಿಂಗ ಜಂಗಮ ತ್ರಿವೇಣಿ ಸಂಗಮ
ಮಹಾತೀರ್ಥದ ಮಹಾತ್ಮ ಶಂಕರ ಮಹಾತೀರ್ಥರ
ಆರು ಎನಳ ಮಧ್ಯ ಸ್ವಾಲಿಂಗದ ಮಹಾತ್ಮ ಗುರುತು
ಕೊಂಡಲಿಯ ಆಕೃತಿಯ ಶಂಕರ, ಕೊಡಲಿಯ ಆಕೃತಿ
ಗುರುವಿಗೆ ಗುಣವಿಲ್ಲ ಲಿಂಗಕ್ಕೆ ನೆಲೆಯಿಲ್ಲ
ಜಂಗಮ ಭಕ್ತರಿಗೆ ಜಾತಿ ಜ್ಯೋತಿ ನೀತಿಯಿಲ್ಲ"

ಎಂಬ ತತ್ವಪದವನ್ನು ಭದ್ರೇಶ್ವರರು ಗುರುಲಿಂಗ ಜಂಗಮ, ಭಕ್ತರ ನೆಲೆ ಹಿನ್ನೆಲೆಯನ್ನು ತಮ್ಮ ಅನುಭವಸಾರದಲ್ಲಿ ವ್ಯಕ್ತವಾಗಿ ವರ್ಣಿಸಿರುವುದನ್ನು ಕಾಣುತ್ತೇವೆ. ಅದೇ ರೀತಿ -

"ಜಂಗಮ ಜಗ ಕೃತಾ : ಲಿಂಗಲ್ಲಿ ಭರಿತಾ
ಸ್ವಾಲಿಂಗದ ಗುರುತಾ : ಚಿನ್ಮಯ ಚಿತ್ತದಲ್ಲಿ ಬೆರೆತಾ"

ಎಂದು ಹಾಡಿ "ನಾ" ಎಂಬ ಅಹಂಕಾರವನ್ನು ನಾಯಿಗೆ ಹೋಲಿಸಿ ಹಾಡಿರುವುದನ್ನು ಕಾಣುತ್ತೇವೆ.

ನಾಯಿ ಅಂದರೆ ನಾಯಿ ಅಲ್ಲಪ್ಪ
ನಾ ಅಂಬೋ ಅಹಂಕಾರ, ನಾಯಪ್ಪ
ಓಂ ಎಂಬೋ ಓಂಕಾರ ಬೀಜಪ್ಪಾ
ಬಿತ್ತಿ ನೋಡೋ ಚಿತ್ತಿನೊಳಗಪ್ಪಾ:

ಎಂಬುವಂತಹ ತತ್ವಪದಗಳನ್ನು "ಓಂ" ಕಾರದ ಬೀಜದ ಮಹಿಮೆಯನ್ನು ತೋರಿಸಿ ವರ್ಣಿಸಿ ರಚಿಸಿರುವುದನ್ನು ನೋಡಿದ್ದೇವೆ. "ಏನಾರ ಮಾಡಯ್ಯ ನೀನು : ಬಲ್ಲವರ ಪಾದರಕ್ಷೆ ಆಗುವೇ ನಾನು' ಎಂಬ ಪದಗಳನ್ನು ರಚಿಸಿದ ಗುರು ಭದ್ರೇಶ್ವರರು ಕೇವಲ ಕನ್ನಡಿಗರಿಲ್ಲದೆ ಹಿಂದಿ, ಮರಾಠಿ, ಉರ್ದುಗಳಲ್ಲಿ ಇವರು ಬಲ್ಲವರಾಗಿದ್ದರು. ಶ್ರೀಗುರು ಮನದ ಯಾವುದೇ ಆಸೆಗಳಿಗೆ ಮೊರೆ ಹೋದವರಲ್ಲ. ಸತ್ಯಕ್ಕೆ ಪ್ರಾಮಾಣಿಕತನಕ್ಕೆ ಮಾನ್ಯತೆ ಕೊಡುತ್ತಿದ್ದರು. ಅಲ್ಲದೆ ಜಾತಿ-ಭೇಧ, ವರ್ಗಭೇದಗಳನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಉಳಿದವರ ಮಾಹಿತಿ ಸಿಗಲಿಲ್ಲ.

ಶ್ರೀಮಾತೆ ಮೈತ್ರಾದೇವಿ, ಶ್ರೀ ಮಡಿವಾಳೇಶ್ವರ ಇವರಿಬ್ಬರು 1984ರಿಂದ ಮಠಾಧಿಪತಿಯಾಗಿ, ಮಠದ ಜೀರ್ಣೋದ್ಧಾರ ಮಾಡುತ್ತಿದ್ದಾರೆ. ಬಸವ ಧರ್ಮದ ವೀರಶೈವ ಈ ಮಠದ ಮುಖ್ಯ ಲಕ್ಷಣವಾಗಿದೆ. ಮಠದಲ್ಲಿ ನಿತ್ಯ ದಾಸೋಹಂಭಾವ ನಡೆಸಿ ಜೊತೆಗೆ "ಶ್ರೀ ಗುರು ಭದ್ರೇಶ್ವರ ಶಿಕ್ಷಣ ಸಂಸ್ಥೆ"ಯನ್ನು ತೆರೆದು ಅದರ ಅಡಿಯಲ್ಲಿ (ಪ್ರಾಪ್ತಿ) ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ನವೋದಯ ಕೋಚಿಂಗ್ ಕ್ಲಾಸ್‌ಗಳನ್ನು ತೆರೆದಿದ್ದಾರೆ. ಇವರು ಸ್ವಂತ ಕಾಯಕಯೋಗಿಗಳಾಗಿದ್ದರು.

ಹಿರೇನಾಗಾಂವ ಮಠ

ಬಸವಕಲ್ಯಾಣ ತಾಲ್ಲೂಕಿನ ಹಿರೇನಾಗಾಂವ ಗ್ರಾಮದಲ್ಲಿ ಶಾಂತಲಿಂಗೇಶ್ವರ ಮಠವಿದೆ. ಈ ಮಠದ ಸಂಸ್ಥಾಪಕರು ಶ್ರೀ ಶಾಂತಲಿಂಗೇಶ್ವರರು ಎಂದು ಹೇಳಲಾಗಿದೆ. ಇವರು ಶ್ರೀ ಮಠದ ಅಧಿಪತಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರ ತರುವಾಯ ಹಲವಾರು ಮಠೀಧೀಶರು ನೇಮಕವಾಗಿದ್ದಾರೆ. ಆದರೆ ಅವರೆಲ್ಲರ ನಾಮಗಳು ನಶಿಶಿಹೋಗಿವೆ. ಜಯ ಶಾಂತಲಿಂಗೇಶ್ವರರು ಮಠದ ನೂತನ ಅಧಿಪತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಜಯಶಾಂತಲಿಂಗೇಶ್ವರರು ಅರಸೀಕೆರೆಯ ತಾಲ್ಲೂಕಿನ ಹಾಸನ ಜಿಲ್ಲೆಯ ಶಶಿನಾಳ ಗ್ರಾಮದಲ್ಲಿ ಶ್ರೀ ಬಸವಲಿಂಗಯ್ಯ ಮತ್ತು ನೀಲಮ್ಮಾ ಎಂಬ ದಂಪತಿಗಳ ಗರ್ಭದಲ್ಲಿ 1953ರಲ್ಲಿ ಜನಿಸಿದರು. ಇವರು ಪ್ರಾಥಮಿಕ, ಪ್ರೌಢಶಿಕ್ಷಣ ತಮ್ಮೂರಿನಲ್ಲಿಯೇ ಮುಗಿಸಿ ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜಿನಿಂದ ಬಿ.ಎ. ಪದವಿ ಪಡೆದುಕೊಂಡರು. ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಎಂ.ಎ.ಯನ್ನು ಮಾಡಿದರು. ಅಲ್ಲದೆ ಹೆಚ್ಚಿನ ಅಭ್ಯಾಸಕ್ಕಾಗಿ, ಶಿವಯೋಗಮಂದಿರದಲ್ಲಿ ಯೋಗ ಸಂಸ್ಕೃತವನ್ನು ಕಲಿತರು. 1991ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡರು. ಮಠದ ಜೀರ್ಣೋದ್ಧಾರ ಮಾಡುತ್ತಾ ಧರ್ಮ ಪ್ರಚಾರದ ಜೊತೆಗೆ ಶೈಕ್ಷಣಿಕ ಸೇವೆಯಲ್ಲಿ ದುಡಿಯುತ್ತಿದ್ದಾರೆ.

ಶ್ರೀಮಠದ ಕೆಳಗೆ 22 ಎಕರೆ ಭೂಮಿಯು ಇದೆ. ಇದರ ಆಶ್ರಮದಲ್ಲಿಯೇ ಜಯಶಾಂತಲಿಂಗೇಶ್ವರರು ಶಿಕ್ಷಣವನ್ನು ತೆರೆದು ಪ್ರಾಥಮಿಕ ಶಾಲೆಯನ್ನು ನಡೆಸುತ್ತಿದ್ದಾರೆ. ಅಲ್ಲದೆ ಬಾಲಕರ ಅನಾಥಾಶ್ರಮವನ್ನು ನಡೆಸಿ ಜೊತೆಗೆ ಬೀದಿ ಮಕ್ಕಳ ತಂಗುದಾಣವನ್ನು ಮಠದಲ್ಲಿಯೇ ಶ್ರೀಗಳ ಅಧ್ಯಕ್ಷತೆಯಲ್ಲಿಯೇ ನಡೆಸುತ್ತಿದ್ದಾರೆ. ಶ್ರೀಗಳ ಘನತೆಯೆಂದರೆ ಪವಾಡಪುರುಷರೆಂದು ಹೇಳುತ್ತಾರೆ. ರಾಜನಾಳ ಕಮಾಲಪುರ ಸಂಗನಗೌಡನ ಸೊಸೆಯ ಎರಡು ಕಣ್ಣುಗಳು ಕಾಣಲಿಲ್ಲ(ಹೋಗಿದ್ದವು). ಅವರು ಎಲ್ಲೆಲ್ಲಿಯೂ ಹೋದರೂ ಕಣ್ಣು ಬರಲಿಲ್ಲ. ಒಂದು ಸಲ ಶ್ರೀಗಳ

ಹತ್ತಿರ ಬಂದು ಹೇಳಿದ್ದಾಗ ಶ್ರೀಗಳು ಅಂತು ತಮ್ಮ ಪವಿತ್ರ ಹಸ್ತದಿಂದ ಪ್ರಸಾದವೆಂದು ಬೂದಿಯನ್ನೇ ಕೊಟ್ಟು ಇದು ಹೊಟ್ಟೆಯಲ್ಲಿ ಹಾಕಬೇಕೆಂದು ಹೇಳಿದ ಮೂರು ದಿವಸಗಳಲ್ಲಿ ಮರಳಿ ಕಣ್ಣುಗಳು ಬಂದವು. ಇದು ಸೋಜಿಗದ ವಿಷಯವಿದ್ದರೂ ಸತ್ಯವಾಗಿದೆ.

ಶ್ರೀಗಳ ಇನ್ನೊಂದು ಪವಾಡವೆಂದರೆ ಮಹಾರಾಷ್ಟ್ರದ ಪುಣಾದಲ್ಲಿ 'ವಸಂತ ಜನ್ನ' ಎಂಬುವಂತರು ನಿತ್ಯದಿಂದ ಖಾದಿ ಭಂಡಾರ ಘಲಿಪರಿಯಲ್ಲಿದ್ದರು. ಅವರ ಕುಟುಂಬದ ಜನರಿಗೆ ಆರಾಮವಿರಲಿಲ್ಲ. ಎಲ್ಲಾ ಕಡೆ ದವಾಖಾನೆ ಮುಗಿಸಿ ಕೊನೆಗೆ ಶ್ರೀಗಳ ಹತ್ತಿರ ಬಂದರು. ಇದನ್ನು ಭಯಪಡುವ ಕಾರಣವಿರಲಿಲ್ಲ. ಎಲ್ಲಾ ಸರಿ ಹೋಗುತ್ತದೆ ಎಂದು ಪ್ರಸಾದ ವಿತರಣೆ ಮಾಡಿ ಮರಳಿ ಕಳಿಸಿದ್ದರು. ಮೂರನೆಯ ದಿವಸವೇ ಮನೆಯ ಎಲ್ಲಾ ಜನರಿಗೆ ಗುಣವಾಯಿತು. ಇದೊಂದು ಚಮತ್ಕಾರದ ಪವಾಡವೆಂದು 'ವಸಂತ ಜನ್ನ' ಶ್ರೀಗಳ ಭೆಟ್ಟಿಗೆ ಬರುವಾಗ ಒಂದು ಹೊಸ ಅಂಬಾಸಿಡರ್ ಕಾರನ್ನು ತೆಗೆದುಕೊಂಡು ಬಂದಿದ್ದು ಶ್ರೀಗಳಿಗೆ ದಾನದ ರೂಪದಲ್ಲಿ ಕೊಟ್ಟು ಮರಳಿಹೋದರು. ಅದೇ ಕಾರು ಇನ್ನೂ ಶ್ರೀಗಳ ಹತ್ತಿರ ಇರುವುದೇ ಸಾಕ್ಷಿಯಾಗಿದೆ. ಹೀಗೆ ಹಲವಾರು ಪವಾಡಗಳಲ್ಲಿ ಎರಡೇ ಮಾತ್ರ ಇಲ್ಲಿ ಉಲ್ಲೇಖ ಮಾಡಲಾಗಿದೆ.

ಶ್ರೀಮಠದಲ್ಲಿ ನಿತ್ಯ ದಾಸೋಹಂಭಾವ ನಡೆಯುತ್ತಿರುತ್ತದೆ. ಪ್ರತಿ ವರ್ಷ ಶ್ರಾವಣಮಾಸದ ಕೊನೆಯ ವಾರದ ಸೋಮವಾರ ಜಾತ್ರೆ ಜರುಗುತ್ತದೆ ಮತ್ತು ಅಂಬಬಾಯಿ ಜಾತ್ರೆ ಕೂಡ ಶ್ರೀಮಠದ ಆ ದಿನದಿಂದಲೇ ಬಹಳ ವಿಜ್ರುಂಭಣೆಯಿಂದ ಜರುಗಿಸುತ್ತಾರೆ.

ಚಾಂಬೋಳ ಹಿರೇಮಠ

ಬೀದರದಿಂದ ಔರಾದಕ್ಕೆ ಹೋಗುವ ಮಾರ್ಗದಲ್ಲಿ ಜನವಾಡದಿಂದ ಪೂರ್ವಕ್ಕೆ ನಾಲ್ಕು ಕಿಲೋಮೀಟರ್ ದೂರದಲ್ಲಿರುವ ಚಾಂಬೋಳದ ಹಿರೇಮಠವು ಅತ್ಯಂತ ಪ್ರಾಚೀನವಾಗಿದೆ. ಆದರೆ ಈ ಮಠಕ್ಕೆ ಮಠಾಧಿಪತಿಯಾದವರ ಹೆಸರುಗಳು ನಾಪತ್ತೆಯಾಗಿವೆ. ಮೊದಲು ರುದ್ರಾಮುನಿ ಪಟ್ಟಾದೇವರು ಅಧಿಪತಿಯಾಗಿದ್ದಾರೆಂದು ತಿಳಿದುಬಂದಿದೆ. ಅವರ ತರುವಾಯ ಎರಡನೇ ರುದ್ರಾಮುನಿ ಮಠಾದೇವರು ನೂತನ ಶ್ರೀಗಳಾಗಿ ಮಠದಲ್ಲಿ ಧಾರ್ಮಿಕ ಶೈಕ್ಷಣಿಕ ಸೇವೆಯನ್ನು ಮಾಡುತ್ತಿದ್ದಾರೆ. ಶ್ರೀಗಳು ಬಿಜಾಪುರ ಜಿಲ್ಲೆಯ ಇಂಗಳೇಶ್ವರ ಗ್ರಾಮದ ಶ್ರೀ ಸಿದ್ದರಾಮಯ್ಯ ಮತ್ತು ಸಿದ್ಧವ್ವ ಎಂಬ ದಂಪತಿಗಳ ಗರ್ಭದಲ್ಲಿ ಜನಿಸಿ ಈ ಮಠದ ಮಠಾಧಿಪತಿಯಾದರು. ಗೇಣು ಹೊಟ್ಟೆಗಾಗಿ ಚೋಟು ಬಟ್ಟೆಗಾಗಿ ಎಂಬುದನ್ನು ಮನವರಿಕೆ ಮಾಡಿಕೊಂಡು ಶ್ರೀಗಳು

ಯಾವುದೇ ಬಗೆಯ ಆಸೆ ಆಕಾಂಕ್ಷೆಗಳಿಲ್ಲದೆ ನಾಲ್ಕು ಮನೆ ಕಾಂತಿ ಭಿಕ್ಷೆಯನ್ನು ಬೇಡಿ, ಊಟ ಮಾಡಿ ಮಠದಲ್ಲಿಯೇ ಮಲಗುತ್ತಿದ್ದರು. ಇತ್ತೀಚೆಗೆ ಶೈಕ್ಷಣಿಕ ಸೇವೆಯಲ್ಲಿ ಆಸಕ್ತಿ ಹುಟ್ಟಿ ಶಾಲೆಯನ್ನು ಪ್ರಾರಂಭಿಸಿದ್ದಾರೆ. ನೀಲಮ್ಮ ತಾಯಿ ಕಿರಿಯ ಪ್ರಾಥಮಿಕ ಶಾಲೆ ಚಾಂಬೋಳ, ರುದ್ರಾಮುನಿ ಪಟ್ಟದೇವರು ಪ್ರೌಢಶಾಲೆ ಚಾಂಬೋಳ, ಶ್ರೀ ವೀರಭದ್ರೇಶ್ವರ ವಸತಿ ನಿಲಯ ಚಾಂಬೋಳ ಹೀಗೆ ಸಾಮಾಜಿಕ ಕಾರ್ಯದ ಜೊತೆಗೆ ಶೈಕ್ಷಣಿಕ ಸೇವೆಯಲ್ಲಿ ನಿರತರಾಗಿದ್ದಾರೆ.

ಹುಡಗಿ ಹಿರೇಮಠ

ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಹುಡಗಿ ಗ್ರಾಮದಲ್ಲಿ ಕಲ್ಯಾಣಕಟ್ಟಿ ಹಿರೇತನದ ಮಠ ಇದೆ. ಈ ಮಠ ಬಹಳ ಪ್ರಾಚೀನವಾದುದು. ಈ ಮಠದ ವಂಶಾವಳಿ ಈ ಕೆಳಗಿನಂತಿದೆ.

ಲಿಂ. ಶ್ರೀ ಸೋಮಶೇಖರ ಶಿವಾಚಾರ್ಯರು

ಶ್ರೀ ಬಸವಲಿಂಗ ಪಟ್ಟದೇವರು

ಶ್ರೀ ಚನ್ನಮಲ್ಲಪ್ಪಾ ಪಟ್ಟದೇವರು

ಶ್ರೀ ಸಂಗನಬಸವ ಪಟ್ಟದೇವರು

ಶ್ರೀ ಮಹಾಲಿಂಗಪ್ಪಾ ಪಟ್ಟದೇವರು

ಶ್ರೀ ಚನ್ನಮಲ್ಲಪ್ಪಾ ಪಟ್ಟದೇವರು

ಶ್ರೀ ಕರಬಸಪ್ಪಾ ಪಟ್ಟದೇವರು

ಶ್ರೀ ವಿರೂಪಾಕ್ಷಪ್ಪಾ ಶಿವಾಚಾರ್ಯರು

ಶ್ರೀ ಗುರುಲಿಂಗಯ್ಯ ಶಿವಾಚಾರ್ಯರು

ಶ್ರೀ ಸೋಮಶೇಖರ ಶಿವಾಚಾರ್ಯರು

ಶ್ರೀ ವಿರೂಪಾಕ್ಷಪ್ಪಾ ಶಿವಾಚಾರ್ಯರು (ನೂತನ ಮಠಾಧೀಶರು)

ಮೇಲಿನ ಶ್ರೀಗಳಲ್ಲಿ ಏಳನೇ ಮಠಾಧಿಪತಿಯಾದ ಶ್ರೀ ಕರಬಸಪ್ಪನವರು 18ನೇ ಶತಮಾನದವರು. ಇವರನ್ನು ಕರಿಬಸವೇಶ್ವರರು ಎಂದು ಕೂಟ ಕರೆಯಲಾಗುತ್ತದೆ. ಇವರು ಭಾಲ್ಕಿ ತಾಲ್ಲೂಕಿನ ಚಳಕಾಪುರ ಗ್ರಾಮದ

ಜಂಗಮವಂಶದವರು. ಇವರ ತಂದೆ ಶ್ರೀ ಚನ್ನಬಸವ ಶಿವಾಚಾರ್ಯರು, ತಾಯಿ ಜ್ಯೋತ್ಯಮ್ಮ. ಶ್ರೀ ಕರಿಬಸವೇಶ್ವರರ ಬೆಳವಣಿಗೆಯು ದೇವರಲ್ಲಿ ಅಪಾರ ಭಕ್ತಿ, ಶ್ರದ್ಧೆ, ಧ್ಯಾನ, ಭಜನೆ, ಕೀರ್ತನೆಗಳಲ್ಲಿ ಹಬ್ಬಿತ್ತು. ಸದಾ ಒಂಟಿಯಾಗಿ ಮೈಮೇಲಿನ ಬಟ್ಟೆಯನ್ನು ಹರಿದೊಗೆಯುತ್ತ ಅಲೆಯುತ್ತಿದ್ದರು. ಇವರ ತಂದೆ ತಾಯಿಯವರು ಎಷ್ಟು ಹೇಳಿದರೂ ಒಂದು ಸಲ ಯಾರಿಗೂ ಹೇಳದೆ, ಕೇಳದೆ ಮೈಮೇಲಿರುವ ಬಟ್ಟೆಯನ್ನು ಹರಿದೊಗೆದು ದಿಗಂಬರರಾಗಿ ಗೊಟಂಗೊಟ್ಟಿಗೆ ಹೋದರು. ಇಲ್ಲಿಯೇ ಘೋರ ತಪಸ್ಸು ಮಾಡಿ ಶಿವ ಸಾಕ್ಷಾತ್ಕಾರ ಪಡೆದರು.

ದಿಗಂಬರ ಕರಿಬಸವೇಶ್ವರರು ಹಂಪಿಯಲ್ಲಿ ಗುರು ಗಜವಿರಟ ಮಹಾಸ್ವಾಮಿಯವರ ದರ್ಶನ ಪಡೆಯಲು ಹೋದರು. ಹಂಪಿಯಿಂದ ಒಂಟೆಯ ಮೇಲೆ ಕುಳಿತು ಕಲಬುರ್ಗಿಯ ಮಾರ್ಗವಾಗಿ ಹುಮನಾಬಾದ ತಾಲ್ಲೂಕಿನ ಹುಡುಗಿ ಗ್ರಾಮದಲ್ಲಿ ಊರ ಮಧ್ಯದಲ್ಲಿ ಶಾಂತಿಧಾಮವಾದ ರಾಮಲಿಂಗೇಶ್ವರ ದೇವಾಲಯದಲ್ಲಿ ತಂಗಿದ್ದರು. ಅಂದಿನಿಂದ ಈ ಮಠದ ಅಧಿಪತಿಯಾಗಿ ಮಠದ ಜೀರ್ಣೋದ್ಧಾರ ಮಾಡಿ 70ನೇ ವಯಸ್ಸಿನಲ್ಲಿ 1807ರಲ್ಲಿ ಲಿಂಗೈಕ್ಯರಾದರು.

ಶ್ರೀ ಕರಿಬಸವೇಶ್ವರರು ಪವಾಡಪುರುಷರು. ಇವರ ಘಟನೆಯನ್ನು "ಲಘು ಭಕ್ತಿವಿಜಯ" ಎಂಬ ಹಿಂದಿ ಕೃತಿಯ 18ನೇ ಅಧ್ಯಾಯಯದ ದೇವತಾ ಸ್ತುತಿಯಲ್ಲಿ ಬಂದಿರುತ್ತವೆ.

ಮಹಾಯೋಗಿಗಳಾದ, ಶಿವಯೋಗಿಗಳಾದ, ದಿಗಂಬರ ಯೋಗಿಯಾದ ಶ್ರೀ ಕರಿಬಸಪ್ಪನವರು ದೇಹವನ್ನು ಧರಿಸಿದ್ದರೂ, ವಿದೇಹಿಗಳಾಗಿದ್ದರೂ, ಜೊತೆಗೆ ತ್ರಿಕಾಲ ಜ್ಞಾನಿಗಳಾಗಿದ್ದರೂ, ಬ್ರಹ್ಮಜ್ಞಾನಿಗಳಾಗಿರುವುದಲ್ಲದೇ ಪವಾಡ ಪುರುಷರಾಗಿದ್ದರು. ಇವರ ಹಲವಾರು ಪವಾಡ ಘಟನೆಗಳಲ್ಲಿ ಒಂದನ್ನು ಇಲ್ಲಿ ನೆನೆಯಬಹುದು.

ಒಂದು ಸಲ ಕರಿಬಸವೇಶ್ವರರು ಬೀದರಿನಲ್ಲಿ ಕೆರೆ, ಕೋಟೆಗಳನ್ನು ನೋಡುತ್ತಾ ಹೋಗುತ್ತಿದ್ದಾಗ ಅಲ್ಲಿ ಕುಳಿತಿದ್ದ ಜಾಬಶೆಟ್ಟಿಬಸವಣ್ಣ ಎಂಬುವವನನ್ನು ನೋಡಿ ಎಲೋ ಗೌಡನಂತೆ ಕುಳಿತಿದ್ದೀಯಲ್ಲ ಎಂದು ಪರಿಹಾಸ್ಯ ಮಾಡಿದರು. ಮುಂದೆ ಆರು ತಿಂಗಳಿನಲ್ಲಿಯೇ ಅವರು ವಾಕ್ಯವು ಸತ್ಯವಾಯಿತು. ಬಸಣ್ಣ ಗುಮಾಸ್ತ ಇದ್ದವನು ಗೌಡನೇ ಆದನು. ಇದು ಕಪೋಲಕಲ್ಪಿತ ಕಥೆ, ಕಾದಂಬರಿಯಾಗದೆ ಇದು ನಿಜವೃತ್ತಾಂತವೇ ಆಗಿದೆ.

ಗಡಿಗೌಡಗಾಂವ ಹಿರೇಮಠ

ರಂಭಾಪುರಿ ಶಾಖೆಯ ಡೋಣಗಾಂವ ಹಿರೇಮಠದ ಮುನ್ನೂರ ಎಂಟು ಶಾಖಾ ಮಟಗಳಲ್ಲಿ ಗಡಿಗೌಡಗಾಂವದಲ್ಲಿರುವ ಹಾವಗಿ ಲಿಂಗೇಶ್ವರ ಹಿರೇಮಠವು ಒಂದು. ಇದು 600 ವರ್ಷಗಳ ಪ್ರಾಚೀನತೆಯನ್ನು

ಹೊಂದಿದ ಮಠವಾಗಿದೆ. ಈ ಗ್ರಾಮವು ಬಸವ ಕಲ್ಯಾಣ ತಾಲ್ಲೂಕಿನಲ್ಲಿದೆ. ಮಠದ ಮಹಾದ್ವಾರದ ಮೇಲೆ ರೇಣುಕಾಚಾರ್ಯರ ಹಾಗೂ ಹಾವಗಿ ಲಿಂಗೇಶ್ವರರ ಭವ್ಯವಾದ ಮೂರ್ತಿಗಳ ಮಧ್ಯ ಬಸವೇಶ್ವರ ಮೂರ್ತಿಯನ್ನು ಕೆತ್ತಿಸಿದ್ದಾರೆ. ಇದು ದೂರದಿಂದ ಮಠದ ಶೋಭೆಯನ್ನು ತರುತ್ತದೆ.

ಹಾವಗಿ ಲಿಂಗೇಶ್ವರರು ಈ ಮಠದ ಮೂಲ ಮಠಾಧೀಶರು. ಇವರು ಪವಾಡ ಪುರುಷರೆಂದು ತಿಳಿದುಬಂದಿದೆ. ಅಲ್ಲದೆ ಜೀವಂತ ಸಮಾಧಿಸ್ಥರಾಗಿದ್ದಾರೆ. ಇವರ ಪವಾಡಗಳನ್ನು ಒಂದರೆಡು ಮಾತ್ರ ಇಲ್ಲಿ ಉಲ್ಲೇಖ ಮಾಡಲಾಗಿದೆ.

1. ಈ ಮಠದ ಅಧೀನದಲ್ಲಿರುವ ಯಾವುದೇ ವಸ್ತುವನ್ನು ಕಳ್ಳತನದಿಂದ ಹಾರಿಸಿಕೊಂಡು ಹೋಗುವಂತಿಲ್ಲ. ಒಂದು ವೇಳೆ ಯಾವುದೇ ವ್ಯಕ್ತಿ ಯಾವುದಾದರೊಂದು ಸಾಮಾನುಗಳನ್ನು ತೆಗೆದುಕೊಂಡು ಹೋದರೆ ಅಂದಿನ ದಿವಸ ಅವರ ಮನೆಯಲ್ಲಿ "ಹಾವು"ಗಳು ಓಡಾಡುತ್ತಿರುತ್ತವೆ. ಆದ್ದರಿಂದ ಅಲ್ಲಿಯ ಸಾಮಾನುಗಳನ್ನು ಕದಿಯಲು ಜನರು ಅಂಜುತ್ತಾರೆಂದು ತಿಳಿದುಬಂದಿದೆ.

2. ಒಮ್ಮೆ ರೇಣುಕಾಚಾರ್ಯರ ಚರಿತಾಮೃತದ ಪುರಾಣದ ಮುಕ್ತಾಯದ ಸಮಯದಲ್ಲಿ ಸಾವಿರಾರು ಸ್ವಾಮಿಗಳು, ಪಂಡಿತರು, ಸಾಹಿತಿಗಳು, ಕವಿಗಳು ಬಂದು ಪ್ರಸಾದ ಮಾಡುವ ಸಮಯದಲ್ಲಿ ಎಲ್ಲಾ ಕಡೆಯಿಂದ ಮೋಡ ತುಂಬಿ ಮಳೆಯು ಬರಲು ಪ್ರಾರಂಭಿಸಿತು. ಆಗ ಶ್ರೀಗಳು ಎದ್ದು ತಮ್ಮ ಕೈಯಲ್ಲಿರುವ ಕೋಲನ್ನು ಆಕಾಶಕ್ಕೆ ತೋರಿಸುತ್ತ ಮಳೆರಾಯ ನಮ್ಮಕ್ಕಳ ಮೇಲೆ ನೀರು ಬೀಳಿಸಬೇಡ, ಅವರು ಪ್ರಸಾದ ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿದಾಗ ಪ್ರಸಾದ ಮಾಡುವ ವ್ಯಕ್ತಿಗಳ ಮೇಲೆ ಒಂದು ಹನಿ ನೀರು ಸಹ ಬೀಳಲಿಲ್ಲ. ಉಳಿದ ಕಡೆ ಜೋರಾಗಿ ಮಳೆಯಾಯಿತು. ಆದ್ದರಿಂದ ಇದು ಪವಾಡವೆಂದೇ ಹೇಳಬೇಕಾಗುತ್ತದೆ.

ನಾಗಮರೆಪ್ಪ ಸ್ವಾಮಿಗಳು ಈ ಮಠಕ್ಕೆ ಸೇವೆಯನ್ನು ಸಲ್ಲಿಸಿದ ನಂತರ ಇಂದಿನ ಶ್ರೀಗಳಾದ ಮ.ಘ.ಚ. ಶಾಂತವೀರ ಶಿವಾಚಾರ್ಯರು ನೂತನ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ನೂತನ ಶ್ರೀಗಳ ಪರಿಚಯ :

ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ "ಕನ್ನೊಳ್ಳಿ" ಎಂಬ ಗ್ರಾಮದ ಶರಣ ದಂಪತಿಗಳಾದ ಗಿರಿಮಲ್ಲಯ್ಯ ಮತ್ತು ಶಾರದಾಬಾಯಿಯ ಮೂರನೆಯ ಮಗನಾಗಿ ಜನಿಸಿದರು. ಜನ್ಮ ಸ್ಥಳವಾದ ಕನ್ನೋಳ್ಳಿಯಲ್ಲಿ 3ನೇ

ತರಗತಿಯವರೆಗೆ ಕಲಿತು ಮುಂದೆ ಶಿವಯೋಗಮಂದಿರದಲ್ಲಿ ಹಾನಗಲ್ ಕುಮಾರೇಶ್ವರ ಆಶ್ರಯದೊಳಗೆ ಎಸ್.ಎಸ್.ಎಲ್.ಸಿ. ಮುಗಿಸಿ ಶಹಾಪೂರ ಚರ ಬಸವೇಶ್ವರ ಕಾಲೇಜಿನಲ್ಲಿ ಪಿ.ಯು.ಸಿ. ಮುಗಿಸಿದರು. ದಿನಾಂಕ: 9-4-1996ರಂದು ಗಡಿಗೌಡಗಾಂವ ಹಿರೇಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಶ್ರೀಗಳು ಅಭ್ಯಾಸಕ್ಕಿಂತ ಶಾಸ್ತ್ರ ಪುರಾಣಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಸುಮಾರು ಹನ್ನೆರಡನೇ ವಯಸ್ಸಿನಲ್ಲಿಯೇ ಪುರಾಣವನ್ನು ಹೇಳಲು ಪ್ರಾರಂಭಿಸಿದರು. ಪುರಾಣದಲ್ಲಿ ಪ್ರಖ್ಯಾತರಾಗಿ ಜನ ಮನಗಳಲ್ಲಿ ಕಂಗೊಳಿಸುತ್ತಿದ್ದಾರೆ.

ಠಾಣಾಕುಶನೂರ ವಿರಕ್ತಮಠ

ಔರಾದ ತಾಲ್ಲೂಕಿನ ಠಾಣಾ ಕುಶನೂರ ಗ್ರಾಮದಲ್ಲಿ ವಿರಕ್ತಮಠವು ಇದೆ. ಇದು 14ನೇ ಶತಮಾನದಲ್ಲಿ ಯಡೆಯೂರ ಸಿದ್ಧಲಿಂಗೇಶ್ವರ ಸ್ವಾಮಿಗಳು ಸ್ಥಾಪಿಸಿದ್ದಾರೆಂದು ಈಗಿನ ಮಠಾಧೀಶರಿಂದ ತಿಳಿದುಬರುತ್ತದೆ. ಈ ಮಠಕ್ಕೆ ಅನೇಕ ಮಠಾಧೀಶರು ಆಗಿ ಹೋಗಿದ್ದಾರೆ. ಅವರಲ್ಲಿ ಕೆಲವರ ಹೆಸರುಗಳು ಮಾತ್ರ ತಿಳಿದುಬಂದಿದೆ.

1) ಶ್ರೀ ಮ.ನಿ.ಪ್ರ.ನಿರಂಜನ ಸ್ವಾಮಿಗಳು

2) ಶ್ರೀ ಗುರುಪಾದ ಸ್ವಾಮಿಗಳು

3) ಶ್ರೀ ಕರಬಸಪ್ಪ ಸ್ವಾಮಿಗಳು

4) ಶ್ರೀ ಮಹಾದಯ್ಯ ಸ್ವಾಮಿಗಳು

5) ಶ್ರೀ ಸಿದ್ಧಲಿಂಗ ಸ್ವಾಮಿಗಳು, ಸದ್ಯದ ಶ್ರೀಗಳು.

ಬೆಳಗಾವಿ ಜಿಲ್ಲೆಯ ಕೆ.ಕೆ. ಕೊಪ್ಪಳ ಗ್ರಾಮದಲ್ಲಿ ಶ್ರೀ ಬಸವಂತಯ್ಯಾ ಮತ್ತು ಈರಮ್ಮ ಎಂಬ ದಂಪತಿಗಳ ಗರ್ಭದಲ್ಲಿ ತೃತೀಯ ಪುತ್ರರಾಗಿ 1964ರಲ್ಲಿ (ಶ್ರಾವಣ ಮಾಸದಲ್ಲಿ) ಜನಿಸಿದ ಮಗುವೇ ಕುಶನೂರ ವಿರಕ್ತಮಠದ ಮಠಾಧೀಶರು.

7 ಎಕರೆ ಭೂಮಿಯನ್ನು ಹೋಮದಿಂದ ಈ ಮಠವು ಪೂಜ್ಯರ ಸತತ ಪ್ರಯತ್ನದಿಂದ ಪ್ರತಿ ತಿಂಗಳು ಚತುರ್ದಶಿ ಶಿವಾನುಭವ ಗೋಷ್ಠಿ ಮತ್ತು ಪ್ರತಿವರ್ಷ ಏಪ್ರಿಲ್ ಕೊನೆಯ ವಾರದಲ್ಲಿ ಅಕ್ಕಮಹಾದೇವಿಯ ಮತ್ತು ಎಡೆಯೂರ ಸಿದ್ಧಲಿಂಗೇಶ್ವರ ಜಯಂತಿಗಳೆರಡು ಬಹಳ ವಿಜೃಂಭಣೆಯಿಂದ 4 ದಿವಸಗಳವರೆಗೆ ಜಾತ್ರೆಯನ್ನು ಜರುಗಿಸುತ್ತಾರೆ. ಗ್ರಾಮೀಣ ಪ್ರದೇಶದ ಜನಪದ ಗೀಗೀ ಹಾಡುಗಳ ಸಂಗ್ರಹಣೆ ಮಾಡಿದ ಪುಟ್ಟ ಗ್ರಂಥಗಳನ್ನು ಬಯಲಿಗೆ ತಂದಿದ್ದಾರೆ. ಅಲ್ಲದೆ ಸಿದ್ಧಲಿಂಗೇಶ್ವರ ಸಾಹಿತ್ಯ ವಚನ ನಿವೇದಿತ ಕೆಲವು ಪುಸ್ತಕಗಳ ಪ್ರಕಟಣೆ ಕಾರ್ಯದಲ್ಲಿ ತೊಡಗಿದ್ದಾರೆ.

ಅಲಿಯಂಬರ ಹಿರೇಮಠ :

ಬೀದರ ತಾಲ್ಲೂಕಿನ ಅಲಿಯಂಬರವು ಗ್ರಾಮವು ಬೀದರದಿಂದ ಔರಾದಕ್ಕೆ ಹೋಗುವ ಮಧ್ಯ ಜನವಾಡದಿಂದ ಪಶ್ಚಿಮಕ್ಕೆ ನಾಲ್ಕು ಕಿಲೋಮೀಟರ್ ದೂರದಲ್ಲಿದೆ. ಈ ಮಠವು ಪುರಾತನವಾಗಿದ್ದರೂ ಪ್ರಚಾರದಲ್ಲಿ ಇಲ್ಲ. ಈ ಹಿರೇಮಠದಲ್ಲಿಯೇ ಒಂದಾದ ಪುತ್ರವರ್ಗದ ಮಠಕ್ಕೆ ಈ ಮಠವು ಮೀಸಲಾಗಿದೆ. ನಮಗೆ ದೊರೆತ ಆಧಾರದಂತೆ ಈ ಮಠದ ವಂಶಾವಳಿ ಹೀಗಿದೆ :

1) ಶ್ರೀ ಗವೀಶ್ವರ ಸ್ವಾಮಿಗಳು

2) ಶ್ರೀ ಕೊಬರಿ ಮಹಾಂತಪ್ಪಾ ಸ್ವಾಮಿಗಳು

3) ಶ್ರೀ ಗಂಗಾಧರಪ್ಪಾ ಸ್ವಾಮಿಗಳು

4) ಶ್ರೀ ಬಸವಲಿಂಗಪ್ಪಾ ಸ್ವಾಮಿಗಳು

5) ಶ್ರೀ ರಾಚೋಟೆಪ್ಪಾ ಸ್ವಾಮಿಗಳು

6) ಶ್ರೀ ಮಹಾಂತಲಿಂಗ ಶಿವಾಚಾರ್ಯರು

7) ಶ್ರೀ ವಿಶ್ವನಾಥ ಶಿವಾಚಾರ್ಯರರು

8) ಶ್ರೀ ಷ.ಬ್ರ.ನಾಗಭೂಷಣ ಶಿವಾಚಾರ್ಯರು ಸದ್ಯದ ಶ್ರೀಗಳು

ಸದ್ಯದ ಶ್ರೀಗಳು ಕನ್ನಡ, ಹಿಂದಿ, ಇಂಗ್ಲಿಷ್, ಸಂಸ್ಕೃತ್, ನೇಪಾಲಿ ಹೀಗೆ ಹಲವಾರು ಭಾಷೆಗಳಲ್ಲಿ ಬರೆಯಲು, ಓದಲು ಬಲ್ಲವರಾಗಿದ್ದಾರೆ. ಇವರ ಬುದ್ಧಿ ಅತೀ ಸೂಕ್ಷ್ಮವೆನ್ನಲಾಗಿದೆ.

ಶ್ರೀಗಳು ಶ್ರೀಕಂಠ ಚರಿತ್ರೆ ಸಾಹಿತ್ಯಿಕ ಅಧ್ಯಯನವನ್ನು ಬನಾರಸದಲ್ಲಿ ಮಾಡಿದ್ದಾರೆ. ಇವರು ಸಂಗೀತದ ಪ್ರೇಮಿಗಳಾಗಿದ್ದಾರೆ. ಸಂಗೀತವೆಂದು ಇವರ ಮೈಕೂದಲುಗಳು ಎದ್ದು ಕುಣಿಯುತ್ತವೆ. ಭಜನೆ ಕೀರ್ತನೆಗಳಲ್ಲಿ ಅತೀ ಆಸಕ್ತಿ. ಇವರಿಗೆ 'ಸಾಹಿತ್ಯ ರತ್ನ' ಎಂಬ ಬಿರುದು ದೊರಕಿದೆ.

ಪರಾಮರ್ಶನ ಗ್ರಂಥಗಳು :

1) ಎಂ. ಜಿ. ನಂಜುಂಡರಾಧ್ಯ : ಸ್ಮರಣ ಸಂಚಿಕೆ (ಸಂಪುಟ) ಸಂ. ಡಾ. ಹೆಚ್.ಪಿ. ಮಲ್ಲದೇವರು (1983).

2) ಎರಿಸಿಮೆ ಚೆನ್ನಪ್ಪ - ಟಿ.ಆರ್. ಮಹಾದೇವಯ್ಯ : ದಾಸೋಹ ಸಿರಿ (1981).

3) ಯರಿಸಿಮೆ ಚೆನ್ನಪ್ಪ - ಕೊಟ್ರೇಶ ಆರಾಧ್ಯ : ದಾಸೋಹ ಸಿರಿ (1981).

4) ವಿ. ಶಿವಾನಂದ : ಹೈ.ಕ. ಭಾಗದ ಕನ್ನಡ ಶಿಲಾಶಾಸನಗಳು (1992).

5) ಯರಿಸಿಮೆ ಚನ್ನಪ್ಪ -ಷಣ್ಮುಕಯ ಅಂಕುರಮಠ : ದಾಸೋಹ ಸಿರಿ (1981).

6) ಎಚ್. ತಿಪ್ಪೇರುದ್ರಸ್ವಾಮಿ : ಕನ್ನಡ ವಿಶ್ವಕೋಶ - ಸಂಪುಟ 12.

7. ಮಲ್ಲೇದೇವರು : (ಸ್ಮರಣ ಸಂ.) ಡಾ. ಜಿ ಶಿವರುದ್ರಪ್ಪ - ಅರ್ಚನ (1984).

8. ಎಚ್. ಎಂ. ಸದಾಶಿವಯ್ಯ : ಸಿದ್ದಗಂಗಾ ಶ್ರೀ

9. ಎ.ಕೆ. vii, ಶಿಕಾರಿಪೂರ

10. ಎಚ್. ಎಂ. ಸದಾಶಿವಯ್ಯಾ : ಸಿದ್ಧಗಂಗಾ ಶ್ರೀ

11. ಎಂ.ಎಂ. ಕಲ್ಬುರ್ಗಿ - ಎನ್. ವಿದ್ಯಾಶಂಕರ : ಸಮಗ್ರ ವಚನ ಸಂಪುಟ.

12. ಎಂ.ಎಂ. ಕಲ್ಬುರ್ಗಿ : ಕರ್ನಾಟಕದ ಕೈಫಿಯತ್ತುಗಳು (ಸಂಪಾದಕರು)

13. ಎ.ಕೆ. ix, ದೊಡ್ಡಬಳ್ಳಾಪುರ.

14. ವೈ.ಎಚ್. ನಾಯಕವಾಡಿ, ಬೀದರ ಜಿಲ್ಲೆಯ ಮಠಗಳು (ಅಪ್ರಕಟಿತ ಲೇಖನ) 2008.

15. ಸ. ಸ. ಮಾಳವಾಡ : ಬಸವಣ್ಣನವರ ವಚನ ಸಂಗ್ರಹ

16. ಜಿ.ಬಿ. ವಿಶಾಜಿ : ಕಾಯಕ ಪರಿಣಾಮಿ (1991)

17. ಸಂಗಮೇಶ ಸೌದತ್ತಿಮಠ : ಚನ್ನವೀರ (1996)

18. ರಮೇಶ ಮೂಲಗೆ : ಬೀದರ ಜಿಲ್ಲೆಯ ವೀರಶೈವ ಮಠಗಳು (1998)

19. ಎಸ್.ಜಿ. ಸ್ವಾಮಿ : ಕಾಯಕ ಪರಿಣಾಮಿ (1991)

20. ಎಂ.ಜಿ. ದೇಶಪಾಂಡೆ : ಕಾಯಕ ಪರಿಣಾಮಿ (1991)

21. ಲಕ್ಷ್ಮೇಶ್ವರಿ ತಾಯಿ ಮೂಗಿ : ಕಾಯಕ ಪರಿಣಾಮಿ (1991)

22. ಸಿದ್ಧರಾಮೇಶ್ವರ ಬೆಲ್ದಾಳೆ : ಕಾಯಕ ಪರಿಣಾಮಿ (1991)

23. ಗುರುಬಸಯ್ಯ ಅಮ್ಮಾಪುರ : ಕಾಯಕ ಪರಿಣಾಮಿ (1991)

24. ಸುಬ್ಬಣ್ಣ ಅಂಬೆಸಂಗೆ : ಕಾಯಕ ಪರಿಣಾಮಿ (1991)

25. ಕೆ.ಜಿ. ಮಾಶೆಟ್ಟಿ ಹುಡಗಿ : ಕಾಯಕ ಪರಿಣಾಮಿ (1991)

26. ವಿಕ್ರಮ ವಿಸಾಜಿ, ಭಾಲ್ಕಿ : ಕಾಯಕ ಪರಿಣಾಮಿ (1991)

27. ಸೋಮನಾಥಾ ನುಚ್ಚಾ, ಭಾಲ್ಕಿ : ಕಾಯಕ ಪರಿಣಾಮಿ (1991)

28. ಬಸವರಾಜ ಸಂಗಮದ : ಕಾಯಕ ಪರಿಣಾಮಿ (1991)

29. ಎಂ.ಜಿ. ದೇಶಪಾಂಡೆ, ಮೋರಗಿ : ಕಾಯಕ ಪರಿಣಾಮಿ (1991)

30. ಶ್ರೀದೇವಿ ಸೋಲಾಪೂರೆ, ಕಮಾಲನಗರ: ಕಾಯಕ ಪರಿಣಾಮಿ (1991)

31. ದೇಶಾಂಶ ಹುಡಗಿ : ಕಾಯಕ ಪರಿಣಾಮಿ (1991)

32. ಶಾಂತರಸ ಕಾಯಕ ಪರಿಣಾಮಿ (1991)

33. ಜಯದೇವಿ ತಾಯಿ ಕಾಯಕ ಪರಿಣಾಮಿ (1991)

34. ದೇವೇಂದ್ರ ಕುಮಾರ ಹಕಾರಿ ಕಾಯಕ ಪರಿಣಾಮಿ (1991)

35. ಜಿ.ಬಿ. ವಿಸಾಜಿ, ಭಾಲ್ಕಿ ಕಾಯಕ ಪರಿಣಾಮಿ (1991)

36. ವಿ. ಸಿದ್ಧರಾಮಣ್ಣ ಕಾಯಕ ಪರಿಣಾಮಿ (1991)

37. ಶರಣಯ್ಯ ಮಠಪತಿ, ಯಲದಗುಂಡಿ ಕಾಯಕ ಪರಿಣಾಮಿ (1991)

38. ಮಹಾದೇವಮ್ಮ ಸಂಗಮ ಕಾಯಕ ಪರಿಣಾಮಿ (1991)

39. ಎಂ.ಜಿ. ಗಂಗನಪಳ್ಳಿ ಕಾಯಕ ಪರಿಣಾಮಿ (1991)

40. ವೈಜಿನಾಥ ಬಿರಾದಾರ, ಮುಚಳಂಬಿ ಕಾಯಕ ಪರಿಣಾಮಿ (1991)

41. ಗುರುಲಿಂಗಪ್ಪಾ ಧಬಾಲೆ : ಬಸವಯೋಗಿ (2006)

42. ಶ್ರೀ ಶಿವಾನಂದ ಸ್ವಾಮಿಗಳು : ಶ್ರೀ ಶಿವಾನಂದ ಸ್ವಾಮಿಗಳ ವಚನಗಳು (1998)

ಅಧ್ಯಾಯ - 4

ಸಾಮಾಜಿಕ ಬದಲಾವಣೆಯಲ್ಲಿ ಮಠಗಳು

ಮಠಗಳು ಸಮಾಜದ ಅವಿಭಾಜ್ಯ ಅಂಗಗಳಾಗಿವೆ. ಅಲ್ಲದೆ ಮಠಗಳು ಸಮಾಜದೊಡನೆ ನಿಕಟ ಸಂಬಂಧ ಹಾಗೂ ಸಂಪರ್ಕ ಹೊಂದಿವೆ. ಅಂಧಕಾರದ ಜನತೆಗೆ ಹೊಸ ಬೆಳಕನ್ನು ಕೊಡುವಲ್ಲಿ ಮಠಾಧೀಶರು ಇಂದು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಬಸವಾದಿ ಶರಣರ ಆದರ್ಶ ತತ್ವವನ್ನೇ ಜನಮನಗಳಲ್ಲಿ ಮೂಡಿಸಬೇಕೆಂಬ ಉದ್ದೇಶದಿಂದ ವೀರಶೈವ ಮಠಗಳು ಸಮಾಜಕ್ಕಾಗಿ ಅವಿರತವಾಗಿ ಶ್ರಮಿಸುತ್ತಿವೆ. ಧರ್ಮ ಮತ್ತು ಸಮಾಜ ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಏಕಕಾಲಕ್ಕೆ ಪ್ರಚಾರ ಸೇವೆಗೈಯುತ್ತಿರುವ ಬೀದರ ಜಿಲ್ಲೆಯ ಮಠಗಳು ಅನುಪಮವಾಗಿವೆ.

ಮಠಗಳು ಸಮಾಜದಲ್ಲಿ ಸಮಾನತೆಯ ಕೇಂದ್ರಬಿಂದುವಾಗಿದ್ದವು. "ಜಾತಿ ಹೀನನೆಂಬುವವನ ಮನೆಯಲ್ಲಿ ಜ್ಯೋತಿಯೂ ಹೀನವೇ? ಜಾತಿ ಪರಜಾತಿಯೆಂದು ಭೇದವನ್ನಿಡಬೇಡ ದೇವರನ್ನೊಲಿಸಿಕೊಂಡವನೇ ಉತ್ತಮ ಜಾತಿಯವನು" ಎಂಬ ಸರ್ವಜ್ಞನ ವಚನದಂತೆ ಸಮಾಜದಲ್ಲಿ ತಾರತಮ್ಯ ಭಾವನೆ, ಮೇಲು ಕೀಳೆಂಬ ಅಂತಸ್ತುಗಳಿಲ್ಲದೆ ಎಲ್ಲಾ ಮಾನವರು ಸರಿ ಸಮಾನರು, ಎಲ್ಲರೂ ಪರಮಾತ್ಮನ ಮಕ್ಕಳೆ ಇದರಲ್ಲಿ ಯಾವುದೇ ಆಸ್ಪದವಿಲ್ಲವೆಂಬ ಯದಾತತ್ವ ಮೈಗೂಡಿಸಿಕೊಂಡು ದಿಟ್ಟ ಹೆಜ್ಜೆಯನ್ನಿಟ್ಟವರೇ ಮಠಗಳ ಮಠಾಧೀಶರು.

ಬಸವಾದಿ ಶರಣರು ಬಿಟ್ಟುಹೋದ ವಚನ ಸಾಹಿತ್ಯ ಜನಮನ ಅರಿತುಕೊಳ್ಳಬೇಕೆಂಬ ಊರೂರಿಗೆ, ಮನೆ-ಮನೆಗೂ, ಮನ-ಮನಕ್ಕೂ ಹೋಗಿ ಪಾಠ ಪ್ರವಚನಗಳ ಮೂಲಕ "ಎದೆಯ ಮೇಲೆ ಲಿಂಗ ಧರಿಸಿದವನ ಸಂಗಮನಾಥನೆಂಬೆ" ಎಂಬ ಶರಣರ ವಾಣಿಯ ಬೀಜವನ್ನು ಬಿತ್ತುತ್ತ ಹರಿಜನರನ್ನು ಇಂಬಿಟ್ಟುಕೊಂಡು ಲಿಂಗ ಧರಿಸಿದವರಿಗೆ ಜಾತಿ-ಭೇದವಿಲ್ಲ, ಜಾತಕ-ಸೂತಕವಿಲ್ಲ ಎಂದು ಸಾರಿ ಸಮಾಜದಲ್ಲಿ ಜನರ ಕಲ್ಯಾಣ ಮಾಡುವುದೇ ಮಠಗಳ ಮುಖ್ಯ ಉದ್ದೇಶ ಎಂದು ಹೇಳುವಲ್ಲಿ ಭಾಲ್ಕಿ ಹಿರೇಮಠದ ಪೂಜ್ಯ ಶ್ರೀ ಚನ್ನಬಸವ ಪಟ್ಟದ್ದೇವರು ಅಗ್ರಗಣ್ಯರು. "ಅಪ್ಪಗಳು ತಮ್ಮ ಜೀವಿತ ಕಾಲದಲ್ಲಿಯೇ ಬಸವಾದಿ ಪ್ರಮಥರ ಉದಾತ್ತ ತತ್ವಗಳು ಸಮಾಜದ ಆಚರಮೆಯಲ್ಲಿ ಬಂದು ಶೋಷಣೆಯ ರಹಿತ ಜಾತ್ಯಾತೀತ ಕಲ್ಯಾಣ ರಾಜ್ಯವು ನಿರ್ಮಾಣವಾಗಲೆಂದು ಹಂಬಲವುಳ್ಳವರಾಗಿದ್ದಾರೆ" ಎಂದು ನಿರ್ಭಯವಾಗಿ ಹೇಳಬೇಕೆನ್ನಿಸುತ್ತದೆ. ಏಕೆಂದರೆ ಅವರ ಅಮೋಘ ಸಾಮಾಜಿಕ ಸೇವೆಯೇ ಸಾಕ್ಷಿ.

ಹೀಗೆ 20ನೇ ಶತಮಾನದ ಸಾಮಾಜಿಕ ಬದಲಾವಣೆಯಲ್ಲಿ ಬೀದರ ಜಿಲ್ಲೆ ವೀರಶೈವ ಮಠಗಳ ಸಾಮಾಜಿಕ ಪಾತ್ರ ಏನೆಂಬುದನ್ನು ಈ ಮುಂದಿನಂತೆ ವಿವರಿಸಲಾಗಿದೆ.

ಜಾತೀಯತೆ ನಿರ್ಮೂಲನೆ :

"ಮನುಷ್ಯ ಜಾತಿ ತಾನೊಂದು ಕುಲಂ" - ಎಂದು ಶರಣರ ವಾಣಿಯಾಗಿದೆ. ಅಲ್ಲದೆ ಮಾನವರಲ್ಲಿ ಜಾತಿಭೇದ,ಕುಲಭೇದ, ಲಿಂಗಭೇದ ಮಾಡಬಾರದು ಎಂದು ಅನೇಕ ಶರಣರು ಖಂಡಿಸಿದ್ದಾರೆ. ಜಾತಿ ಪಡಿದು ಸೂತಕವನರಸುವೆ. ಜ್ಯೋತಿವಿಡಿದು ಕತ್ತಲೆಯನರಿಸುವೆ. ಇದಕ್ಕೂ ಮರಳು ಮಾನವ!? .... ಎಂಬುವುದು ಶೃಂಗಾರ ತುಂಬಾ ಸರಳದ ಮಾತುಗಳಿಂದ ಹೇಳಿದ್ದಾರೆ. ದಲಿತರನ್ನು ಬಡವರನ್ನು ಅಸ್ಪೃಶ್ಯರನ್ನು ನೋಡಿ ಕಳವಳಗೊಂಡವರು ಶರಣರು ಇದನ್ನು ಕಂಡು ಅರ್ಥವಾಗುವಂತೆ ಸರಳ ಸುಲಭವಾದ ಕನ್ನಡದಲ್ಲಿ ಮಾತುಗಳನ್ನು ರಚಿಸಿದ್ದಾರೆ.

> "ಆವ ಕುಲವಾದರೇನು? ಶಿವಲಿಂಗವಿದ್ದವನೆ ಕುಲಜನು.
> ಕುಲವನೆರಸುವರೆ ಶರಣರಲ್ಲಿ ಜಾತಿಸಂಕರವಾದ ಬಳಿಕ?
> ಶಿವೇ ಜಾತ ಕುಲೆಧರ್ಮ! ಪೂರ್ವಜನ್ಮ ವಿವರ್ಜಿತ!
> ಉಮಾ ಮಾತಾ ಪಿತಾ ರುದ್ರಃ! ಈಶ್ವರ ಕುಲಮೇವ ಚ
> ಎಂಬುದಾಗಿ ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ
> ಕೂಡಲ ಸಂಗಮದೇವಾ, ನಂಬುವೆ ನಿಮ್ಮ ಶರಣರನು".

ಶಿವಲಿಂಗ ಧರಿಸಿದವರೆ ಉತ್ತಮ ಕುಲದವರು, ಅವರಲ್ಲಿ ಯಾವುದೇ ಜಾತಿ ಸೂಕ್ತವಿರಲಿಲ್ಲ ಎಂದು ಬಸವಣ್ಣನೆ ಹೇಳಿದ್ದಾರೆ. ಶಿವಲಿಂಗ ಧರಿಸಿದವರು ಯಾವ ಜಾತಿಯವರಿದ್ದರೂ ಅದನ್ನು ಗಮನಿಸಿದ ಅವರೊಡನೆ ಸರಿಬಂದ ಸಂಪರ್ಕ ಮಾಡಬೇಕು. ಅವರ ಜೊತೆಗೂಡಿ ಸಹ ಭೋಜನ ಮಾಡಬೇಕು. ಹೆಣ್ಣು ಗಂಡಿನ ಸಂಬಂಧವನ್ನು ಮಾಡಬೇಕು ಎಂದು ಈ ಮಾತಿನಲಿ ಹೇಳಲಾಗಿದೆ. ಉತ್ತಮ ಕುಲದಲ್ಲಿ ಜನಿಸಿ ಕನಿಷ್ಠ ಕಾರ್ಯ ಮಾಡುತ್ತಿದ್ದಾರೆ. ಆತ ಉತ್ತಮಯೆನಿಸಿಕೊಳ್ಳುವ ಯಾವುದೇ ಜಾತಿಯಲ್ಲಿ ಹುಟ್ಟಿದರೂ ಆತನ ನಡವಳಿಕೆ ಉತ್ತಮವಾಗಿದೆ. ಆತನೇ ಶ್ರೇಷ್ಠ ಜಾತಿಯವನು ಎಂಬುವುದು ಶರಣರ ನಿಲುವಾಗಿದೆ.

ಅದೇ ರೀತಿ ಬೀದರ ಜಿಲ್ಲೆಯ ಮಠಾಧೀಶರು ಹರಿಜನರಿಗೆ ಪ್ರೋತ್ಸಾಹವನ್ನು ನೀಡಿದಲ್ಲದೆ ಅವರ ಓಣಿಯಲ್ಲಿ ಸಂಚರಿಸಿ ಅವರಿಗೆ ಸಂಸ್ಕಾರ ನೀಡಿದ್ದಾರೆ. ಕೆಳವರ್ಗದವರಿಗೆ ಲಿಂಗದೀಕ್ಷೆಯನ್ನು ಕೊಟ್ಟು ಅವರಲ್ಲಿ ಅರುವಿನ ಬೀಜವನ್ನು ಬಿತ್ತುತ್ತಿದ್ದಾರೆ. ಭಾಲ್ಕಿಯ ಹಿರೇಮಠದ ಪೂಜ್ಯ ಶ್ರೀ ಲಿ. ಚನ್ನಬಸವ ಪಟ್ಟದ್ದೇವರು ನಾಡಿನಾದ್ಯಂತ ಸಂಚರಿಸಿ ಜಾತಿಯನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದ್ದಾರೆ.

ಭಾಲ್ಕಿ ಶ್ರೀ ದೃಷ್ಟಿಯಲ್ಲಿ "ಅಪ್ಪನು ನಮ್ಮ ಮಾದಾರ ಚನ್ನಯ್ಯ ಬೊಪ್ಪನು ನಮ್ಮ ಡೊಹಾರ ಕಕ್ಕಯ್ಯ" - ಎಂದು ತಿಳಿದುಕೊಂಡಿದ್ದಾರೆ. "80 ವಯಸ್ಸಿನ ಶ್ರೀಗಳು 20 ವಯಸ್ಸಿನ ಯುವಕರಂತೆ ಜಿಗಿಯುತ್ತಾ" ಜಾತಿಯ ಭೂತ ಹೋಗಲಿ ಎಂದು ಬಸವ ಧರ್ಮದ ಜ್ಯೋತಿಯನ್ನು ಮನೆ-ಮನೆಗೂ, ಮನ-ಮನಕ್ಕೂ ಮುಟ್ಟಿಸಿದರು. ಎರಡು ದಿನದ ಶಿವಾನಾತ್ಮಕ ಗೋಷ್ಠಿಯ ಆಶೀರ್ವಾದದಲ್ಲಿ ಪೂಜ್ಯರು ಬಸವಣ್ಣನವರ ಸಮತಾವದ ತತ್ವವನ್ನೇ ಬೋಧಿಸಿದರು". ಹೀಗೆ ಶ್ರೀಗಳು ಕಲ್ಯಾಣ ನಾಡಿನಲ್ಲಿ ಹಳ್ಳಿ-ಪಟ್ಟಣಗಳಲ್ಲಿ ಸಂಚರಿಸಿ ಜಾತೀಯತೆಯನ್ನು ನಿರ್ಮೂಲನ ಮಾಡಲು ಹಗಲಿರುಳು ಶ್ರಮಿಸಿದರು.

ಅಂತರ ಜಾತಿ ವಿವಾಹ :

ಭಾಲ್ಕಿ ಹಿರೇಮಠದ ಪೂಜ್ಯರು ಹಲವಾರು ಅಂತರಜಾತಿ ವಿವಾಹ ಮಾಡಿದ್ದಾರೆ. ಕ್ರಿ.ಶ. 1973ರಲ್ಲಿ ಬೀದರ ಓರ್ವ ಲಿಂಗಾಯಿತ ಶಿಕ್ಷಕ ಸಮಾಗಾರ ಹೆಣ್ಣು ಮಗಳನ್ನು ವಿವಾಹವಾಗಬೇಕೆಂದು ಇಚ್ಛಿಸಿದಾಗ ಅವರ ಮನೆಯಲ್ಲಿ ಸಮಸ್ಯೆ ಎದುರಾಯಿತು. ಶ್ರೀಗಳ ಹತ್ತಿರ ಬಂದಾಗ ಶ್ರೀಗಳು ಆ ಸಮಾಗಾರ ಹುಡುಗಿಗೆ ಲಿಂಗಾಧೀಕ್ಷೆಕೊಟ್ಟು ಲಿಂಗಾಯಿತರನ್ನಾಗಿ ಮಾಡಿ ವಿವಾಹ ಮಾಡಿದ್ದರು. ಇದಕ್ಕೆ ಅವರಿಬ್ಬರ ಕುಟುಂಬವು ಒಪ್ಪಿಕೊಂಡಿತ್ತು.

ಹುಮನಾಬಾದ ನಗರದ ಜಂಗಮ ಹುಡುಗನೊಬ್ಬ ಮುಸ್ಲಿಂ ಹುಡುಗಿಯೊಂದಿಗೆ ಪ್ರೇಮ ಬೆಳೆಸಿ ವಿವಾಹವಾಗಬಯಸಿದರು. ಅದಕ್ಕೆ ಅವರ ಕುಟುಂಬದವರು ಒಪ್ಪಲಿಲ್ಲ. ಪ್ರೇಮಿಗಳಿಬ್ಬರೂ ಭಾಲ್ಕಿ ಶ್ರೀಗಳ ಹತ್ತಿರ ಬಂದು ತಮ್ಮ ವಿವಾಹ ಮಾಡಿಸಿಕೊಡಲು ವಿನಮ್ರತೆಯಿಂದ ಕೇಳಿದರು. ಆಗ ಶ್ರೀಗಳ ಆ ಇಬ್ಬರು ಕುಟುಂಬದವರನ್ನು ಕರೆಯಿಸಿ ಕುಲ-ಕುಲವೆಂದು ಏಕೆ ಹೊಡೆದಾಡುತ್ತೀರಿ ಯಾವ ಕುಲ, ಎಲ್ಲಿ ಕುಲ! ಹೊಲಗೇರಿಯೊಂದು ಶಿವಾಲಯಕ್ಕೆ ಅಲ್ಲವೆ ಎಂದು ಹೇಳುತ್ತಾ ನಾವು ಕುಡಿಯುವ ನೀರು, ತಿನ್ನುವ ಆಹಾರ ಒಂದೇ. ಅವರು ಕುಡಿಯುವ ನೀರು, ತಿನ್ನುವ ಆಹಾರ ಒಂದೇ ಇದರಲ್ಲಿ ವ್ಯತ್ಯಾಸ ಹೇಳಿರಿ. ಇಲ್ಲವಾದರೆ

ಇವರ ವಿವಾಹಕ್ಕೆ ಒಪ್ಪಿಗೆ ನೀಡಿರಿ ಎಂದು ಅವರು ಮನಃ ಒಲಿಸಿದರು. ಆಗ ಆ ಕುಟುಂಬದವರು ಶ್ರೀಗಳ ವಾಣಿಯನ್ನು ಒಪ್ಪಿ ವಿವಾಹಕ್ಕೆ ಒಪ್ಪಿಗೆ ನೀಡಿದ್ದರು. ಆಗ ಶ್ರೀಗಳು ಮುಸ್ಲಿಂ ಹುಡುಗಿಗೆ ಲಿಂಗಾಧೀಕ್ಷೆ ನೀಡಿ ತಮ್ಮ ಸಮ್ಮುಖದಲ್ಲಿಯೇ ವಿವಾಹ ಮಾಡಿಸಿದ್ದರು.

ಹರಳಯ್ಯ ಸಮಾಜದ ಸಂಬಂಧವಿಟ್ಟ ಹೆಡ್ಗಾಪೂರ ಡಾ|| ಸಚ್ಚಿದಾನಂದ ವಾಗ್ಮಾರೆ ಇವರ ವಿವಾಹವನ್ನು ವೀರಶೈವ ಧರ್ಮದ ಧೀಕ್ಷೆಯನ್ನು ಪಡೆದು ಕ್ರಿಶ್ಚಿಯನ್ ಹುಡುಗಿಯೊಡನೆ ಸಂಭ್ರಮದಿಂದ ಶ್ರೀಗಳ ಮಾರ್ಗದರ್ಶನದಲ್ಲಿ ಮದುವೆ ನೆರವೇರಿಸಿದ ಉದಾಹರಣೆಗಳಿವೆ.

ಅಂತೆಯೇ ಭಾಲ್ಕಿ ಹಿರೇಮಠದಲ್ಲಿ ಹಲವಾರು ಜನಾಂಗದವರಿಗೆ ಲಿಂಗಾಧೀಕ್ಷೆ ನೀಡಿ ವಿವಾಹ ಮಾಡಿದ್ದು ಕಾಣುತ್ತೇವೆ. ಇಂತಹ ವಿವಾಹಗಳಿಂದ ಜಾತೀಯತೆಯನ್ನು ನಿರ್ಮೂಲನೆ ಮಾಡಲು ತಾವೆಲ್ಲರೂ ಒಂದೇ ಎಂಬ ಭಾವನೆ ಅವರಲ್ಲಿ ಮೂಡಲು ಪ್ರೇರಕರಾಗಿದ್ದರು. ಜನರಲ್ಲಿ ಮೂಡಿರುವ ಒಳ ಪಂಗಡ ಜಾತಿಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದು, ಅಂತರ ಜಾತಿಯ ವಿವಾಹಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಭಾಲ್ಕಿ ಹಿರೇಮಠದ ಸಾಮಾಜಿಕ ಕಾರ್ಯ ಶ್ಲಾಘನೀಯ.

ದಾಸೋಹ ಕೇಂದ್ರ :

ವೀರಶೈವ ಮಠಗಳು ದಾಸೋಹ ಕೇಂದ್ರಗಳಾಗಿವೆ. ಮಠಗಳಲ್ಲಿ ಸದಾ ದಾಸೋಹ ನಡೆಯುತ್ತಿದೆ. ದಾಸೋಹವು ಬಹುದೊಡ್ಡ ಸಮಾಜ ಸೇವೆಯಾಗಿದೆ. ಯಾರು ಅನ್ನಕ್ಕಾಗಿ ಹಂಬಲಿಸುತ್ತಾರೋ ಅಂತಹ ದಿನ ಬಡವ ವ್ಯಕ್ತಿಗಳಿಗೆ ಅನ್ನ ಬಡಿಸುವುದು ದಾಸೋಹವು ದಾನವಲ್ಲ, ಅದೊಂದು ಸೇವೆಯೆಂದೇ ಪರಿಗಣಿಸಿದರು. ಹನ್ನೆರಡನೇ ಶತಮಾನದಲ್ಲಿ ಶರಣರು ಗುರು-ಲಿಂಗ-ಜಂಗಮರಿಗೆ ಸೇವೆ ಮಾಡುತ್ತಿದ್ದರು. ಇದಕ್ಕೆ 'ತ್ರಿವಿಧ ದಾಸೋಹ'ವೆಂದು ಕರೆದರು. ಮಠಾಧೀಶರು ತ್ರಿವಿಧ ದಾಸೋಹದಲ್ಲಿ ಪುಳಕಿರುವುದು ಕಾಣುತ್ತೇವೆ.

ದಾನಕ್ಕೂ -ದಾಸೋಹಕ್ಕೂ ವ್ಯತ್ಯಾಸವಿದೆ. ವ್ಯಕ್ತಿ ತಾನು ಗಳಿಸಿದ್ದು ಅನ್ಯರಿಗೆ ನೀಡುವುದು ದಾನ, ದಾಸೋಹವೆಂಬುವುದು ವ್ಯಕ್ತಿಯನ್ನು ತಾನು ಗಳಿಸಿದ್ದನ್ನು ಎಲ್ಲರೊಡನೆ ಸಮಭಾವದಿಂದ ಹಂಚಿಕೊಳ್ಳುವುದು ಎಂದರ್ಥ. "ದಾನವು ಯಜಮಾನ ಸಂಸ್ಕೃತಿಯ ಪ್ರತೀಕವಾಗಿದ್ದರೆ, ದಾಸೋಹವು ಸಮಾನತೆಯ ಸಂಸ್ಕೃತಿಯ ಪ್ರತೀಕವಾಗಿದೆ". ಆದುದರಿಂದ ಮಠಗಳಿಗೂ ದಾಸೋಹಕ್ಕೂ ನಿಕಟವಾದ ಸಂಬಂಧವಿದೆ. ಹಿಂದೆ ಮಠಗಳು ಸಾಧು-ಸಂತರಿಗೆ ಯಾತ್ರಾರ್ಥಿಗಳಿಗೆ ನಿರಂತರವಾಗಿ ಅನ್ನದಾನ ಮಾಡುವ ಕೇಂದ್ರವಾಗಿರುವುದರಿಂದ ಅಲ್ಲಿ

ಭೋಜನ ಶಾಲೆ ಅಥವಾ ಅನ್ನ ಛೇತ್ರಗಳು ಮಠದ ಅವಿಭಾಜ್ಯ ಅಂಗಗಳಾಗಿದ್ದವು. ಎಷ್ಟೋ ವೇಳೆ ಅಯ್ಯನವರ ಮಠಗಳು ಅನ್ನಛೇತ್ರವೆಂದೇ ಪರಿಭಾವಿಸಲ್ಪಟ್ಟಿದ್ದವು. ಮಠಗಳಲ್ಲಿ ಸದಾ ದಾಸೋಹ ನಡೆಯುತ್ತಿರುವುದು ಕಾಣುತ್ತೇವೆ.

12ನೇ ಶತಮಾನದಲ್ಲಿ ಶಿವಶರಣರು ಸಮಾನತೆಯನ್ನು ಸಾರಲು ದಾಸೋಹ ಮಂತ್ರವನ್ನು ಮೂಲವಾಗಿಟ್ಟುಕೊಂಡಿದ್ದರು. ದಾಸೋಹದಲ್ಲಿ ಉಚ್ಛ-ನೀಚ, ಬಡವ ಬಲ್ಲಿದ, ಜಾತಿ-ಮತ, ಪಂಥ-ಭೇದ, ಸ್ತ್ರೀ ಪುರುಷರೆಂಬ ಭೇದ-ಭಾವನೆ ಮರೆತು ಎಲ್ಲರೂ ಸಹ ಪಂಕ್ತಿ ಭೋಜನ ಮಾಡಬೇಕೆಂಬ ಸದುದ್ದೇಶದಿಂದ ದಾಸೋಹವನ್ನು ಸ್ಥಾಪಿಸಿದ್ದರು. ಆದ್ದರಿಂದ ಜನರಲ್ಲಿ ಮೂಡಿರುವ ಜಾತೀಯತೆಯನ್ನು ಹೋಗಲಾಡಿಸಲು ಸರಳ ದಾರಿಯಾಗಿತ್ತು. ಸಮಾಜದಲ್ಲಿ ಸಮಾನತೆ ಸಾರುವ ಮುಖ್ಯ ಉದ್ದೇಶವಾಗಿತ್ತು.

ದಾಸೋಹ ಎನ್ನುವ ಪದವು ಮೂಲತಃ ಸಂಸ್ಕೃತದಲ್ಲಿ ದೊರೆಯುತ್ತದೆ. ಸಮಾಜದ ಹಿತ ರಕ್ಷಣೆಗೆಂದು ನೀಡುವುದೇ ದಾಸೋಹವಾಗಿದೆ. ಕಾಯಕದ ಫಲವೇ ದಾಸೋಹ ನಿರಹಂಕಾರದ ದುಡಿದು ಮಾಡುವುದೇ ದಾಸೋಹವಾಗಿದೆ. ಭಕ್ತಿ ನಿಷ್ಠೆಯಿಂದ ಕಾಯಕ ಮಾಡಿ ಅದರ ಸಂಪಾದನೆಯಿಂದ ಕಾಯಕ ಮಾಡಿದರೆ ಮಾತ್ರ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ಇಲ್ಲದೆ ಪಾಡಿಯಿಂದ ಗಳಿಸಿದ ಹಣದಲ್ಲಿ ದಾಸೋಹ ಮಾಡಿದ್ದರೆ ಅದು ದಾಸೋಹ ಮಾಡಿದ ವ್ಯಕ್ತಿಗೆ ಸ್ಥಾನ ದೊರೆಯುತ್ತದೆ.

ದಾಸೋಹಕ್ಕಾಗಿ ಮಾಡುವ ಕೆಲಸವೇ ಕಾಯಕ. ತಾನಿಲ್ಲದೆ ಮನದಿಂದ ದೇವರನ್ನು ಧ್ಯಾನಿಸುವುದೇ ಮಂತ್ರ - ಎಂದು ತಮ್ಮ ವಚನವೊಂದರಲ್ಲಿ ಶರಣರು ಹೇಳಿದ್ದಾರೆ. ನಿಸ್ವಾರ್ಥ ಕಾಯಕದಿಂದ ಗಳಿಸಿದ ಹಣದಿಂದ ದಾಸೋಹ ಮಾಡಬೇಕು. ಇದರಿಂದ ಜಾತೀಯತೆಯನ್ನು ನಿರ್ಮೂಲನೆಯಾಗುತ್ತದೆ ಎಂಬುವುದು ಶರಣರ ನಿಲುವಾಗಿದೆ.

ಶಿವಶರಣರ ಕಾಲದಲ್ಲಿ ಅಸಂಖ್ಯಾತ ಮಠಗಳೆಲ್ಲ ದಾಸೋಹ ನಡೆಸುತ್ತಿರುವುದು. "ಒಂದು ಸಾವಿರ ಜಂಗಮಕ್ಕೆ ಆರೋಹಣೆಯ ಮಾಡಿಸುವ ದಾಸೋಹ ಮಠಗಳು 32 ಸಾವಿರ ನಿತ್ಯ ಐದುನೂರು ಜಂಗಮಕ್ಕೆ ದಾಸೋಹ ಮಾಡುವ ಸತ್ಯ ಸದಾಚಾರಿ ಮಠಗಳು ಮೂವತ್ತೆಂಟು ಸಾವಿರ (38,000) ನಿತ್ಯ ಸಾವಿರದ ನೂರು ಜಂಗಮಕ್ಕೆ ದಾಸೋಹ ಮಾಡುವ ದಾಸೋಹ ಮಠಗಳು ಹನ್ನೊಂದು ಮಠಗಳು ಹನ್ನೊಂದು ಸಾವಿರ, ಎಂದು ಹೇಳಿದರು. ಈ ದಾಸೋಹಕ್ಕೆ ಪ್ರಸಾದ ಎಂಬ ಪದದಿಂದ ಕರೆಯುತ್ತಿದ್ದರು. "ನಿತ್ಯ ಎರಡು ಲಕ್ಷ ಜನರು

ಪ್ರಸಾದ ಸ್ವೀಕರಿಸುತ್ತಿದ್ದರು. ಡಿಂಡಿಮನ ಮಠಕ್ಕಿಂತ ಶತಮಾನದ ಮಠದ ದಾಸೋಹ ಇನ್ನೂ ಅತ್ಯಧಿಕವಾಗಿತ್ತು. ನಿತ್ಯ ಅನಂತ ಲಕ್ಷ ಜನರು ಪ್ರಸಾದ ಸ್ವೀಕರಿಸುತ್ತಿದ್ದರು. ಮಠಗಳಲ್ಲಿ ನಡೆಯುವ ದಾಸೋಹಕ್ಕೆ ಪ್ರಸಾದವೆಂದು ಕರೆಯುತ್ತಿದ್ದರು. ದಾಸೋಹ ನಡೆಯುವುದೇ ಮಠಗಳ ಮೂಲ ಉದ್ದೇಶವೂ ಆಗಿತ್ತು.

ಸ್ತ್ರೀಯರಿಗೆ ಸಮಾನ ಅವಕಾಶ :

ಹನ್ನೆರಡನೆ ಶತಮಾನದಲ್ಲಿ ಸ್ತ್ರೀಯರಿಗೆ ಸಮಾನ ಹಕ್ಕು ಬಾಧ್ಯತೆಗಳನ್ನು ಕಲ್ಪಿಸಿಕೊಟ್ಟರು. ಸ್ತ್ರೀಯರು ಪುರುಷರಿಗಿಂತ ಯಾವ ರೀತಿಯಲ್ಲಿ ಕಡಿಮೆ ಇಲ್ಲ ಅವಳು ಪುರುಷರಿಗೆ ಸಮಾನಳು ಎಂದು ಶಿವಶರಣರು ನುಡಿದರು. ಅಷ್ಟೇ ಸ್ತ್ರೀಯರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟರು. ಅದರಂತೆ ಮಠಗಳ ಮಠಾಧೀಶರು ಸ್ತ್ರೀಯರಿಗೆ ಸಮಾನ ಅವಕಾಶ ಕೊಡುತ್ತಿರುವುದು ನಾವು ಕಾಣುತ್ತಿದ್ದೇವೆ. 'ಹೆಣ್ಣು ಹೆಣ್ಣಲ್ಲಿ ಹೆಣ್ಮು ರಕ್ಕಸಿಯಲ್ಲಿ ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂದು ಹೇಳಿರುವುದು ಸತ್ಯವಾಗಿದೆ. ಸ್ತ್ರೀ ದೇವರಿಗೆ ಸಮಾನವಾದವಳು ಅವಳಲ್ಲಿ ನಾನಾ ರೂಪಗಳನ್ನು ಕಾಣುತ್ತೇವೆ. ಸ್ತ್ರೀ ತಾಯಿಯಾಗಿ, ತಂಗಿಯಾಗಿ, ಅಕ್ಕನಾಗಿ, ಗೆಳತಿಯಾಗಿ ವಿವಿಧ ಮುಖಗಳಿಂದ ಕಾಣಬೇಕು ಎಂದು ಮಠಾಧೀಶರ ಉದ್ದೇಶವಾಗಿದೆ. ಭಾಲ್ಕಿ ಹಿರೇಮಠ ಹಾಗೂ ಹುಲುಸೂರು ಗುರುಬಸವೇಶ್ವರ ಸಂಸ್ಥಾನ ಮಠಗಳಲ್ಲದೆ ಬೀದರ ಜಿಲ್ಲೆಯ ವಿವಿಧ ಮಠಗಳಲ್ಲಿ ಸ್ತ್ರೀಯರ ಜೀವನ ಮೌಲ್ಯಗಳ ಬಗ್ಗೆ ವಿಚಾರ ಸಂಕೀರ್ಣ ನಡೆಸುತ್ತಾರೆ.

'ಸ್ತ್ರೀಯರಿಗೆ ಸಮಾನವಾದ ಅವಕಾಶಗಳು ಕೊಡುವುದರಿಂದ ಸಮಾಜವು ಬದಲಾವಣೆಯಾಗುವುದರಲ್ಲಿ ಯಾವುದೇ ಸಂದೇಶವಿಲ್ಲ. ಪ್ರತಿಯೊಬ್ಬರು ಮಹಿಳೆಗೆ ಸಮಾನವಾಗಿಯೇ ಕಾಣಬೇಕು. ಅವರು ಯಾವುದೇ ರೀತಿಯಲ್ಲಿ ಕನಿಷ್ಠವಲ್ಲ, ಅವಳಿಲ್ಲದೆ ಹೋದರೆ ನಮ್ಮ ಸಮಾಜ ಇರುತ್ತಿರಲಿಲ್ಲ' ಎಂದು ಹುಲುಸೂರು ಶ್ರೀಗಳು ನುಡಿದರು.

ಅನಾಥರ ರಕ್ಷಣೆ :

ಮಠಗಳಿಂದ ಸಮಾಜ ವಿವಿಧ ಮುಖಗಳಲ್ಲಿ ಬದಲಾವಣೆ ಹೊಂದುತ್ತಿರುವುದು ಕಾಣುತ್ತಿದ್ದೇವೆ. ತಂದೆ-ತಾಯಿ, ಬಂಧು-ಬಳಗ, ಯಾರೂ ಗತಿಯಿಲ್ಲದ ಅನಾಥರನ್ನು ರಕ್ಷಿಸುವ ಹೊಣೆ ಮಠಗಳಿಗಿದೆ. ಅನಾಥ ಮಕ್ಕಳನ್ನು ಮಠಾಧೀಶರನ್ನು ಪಾಲನೆ ಪೋಷಣೆ ಮಾಡುವುದರಿಂದ ಸಮಾಜದಲ್ಲಿ ಬದಲಾವಣೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಭಾಲ್ಕಿ ಹಿರೇಮಠದಲ್ಲಿ ಅನಾಥಾಶ್ರಮವನ್ನು ಪ್ರಾರಂಭಿಸಿದ್ದಾರೆ. ಅದರಲ್ಲಿ 35 ಅನಾಥ ಮಕ್ಕಳಿಗೂ ರಕ್ಷಣೆ ನೀಡುತ್ತಿದ್ದಾರೆ. ಅವರಿಗೆ ಶಿಕ್ಷಣ, ಊಟ, ವಸತಿ ಮತ್ತು ಬಟ್ಟೆ ಮುಂತಾದವುಗಳನ್ನು ಕೊಟ್ಟು ತಮ್ಮ ಕುಟುಂಬದ ಸದಸ್ಯರಂತೆ ರಕ್ಷಿಸಿಕೊಂಡು ಬರುತ್ತಿರುವುದು ಕಾಣುತ್ತೇವೆ. ಹುಲುಸೂರು ಶ್ರೀಗುರು ಬಸವೇಶ್ವರ ಸಂಸ್ಥಾನ ಮಠದಲ್ಲಿ ಪೂಜ್ಯರು ಅನಾಥಾಶ್ರಮವನ್ನು ಪ್ರಾರಂಭಿಸಿದ್ದಾರೆ. ಅಲ್ಲಿ ಅನಾಥರೆಂದು ಬಂದ ಮಕ್ಕಳಿಗೆ ಹಾಗೂ ಅನಾಥರಿರುವ ಮಕ್ಕಳ ಸ್ಥಳಕ್ಕೆ ಸ್ವತಃ ಸ್ವಾಮೀಜಿಯಾಗಿ ಹೋಗಿ ಅವರನ್ನು ಕರೆದುಕೊಂಡು ಬರುತ್ತಾರೆ. ಅವರಿಗೆ ಯಾವುದೇ ರೀತಿಯ ಕುಂದು ಕೊರತೆಯಾಗದಂತೆ ನೋಡಿಕೊಳ್ಳುತ್ತಾರೆ. ಹೀಗೆ ಶ್ರೀ ಮಠದಲ್ಲಿ 40ಕ್ಕೂ ಹೆಚ್ಚು ಮಕ್ಕಳು ಇರುವುದು ನಾವು ಕಾಣುತ್ತೇವೆ. ಅವರಿಗೆ ಒಳ್ಳೆಯ ಶಿಕ್ಷಣ, ಊಟ, ಬಟ್ಟೆ, ವಸತಿ ಹಾಗೂ ವೈದ್ಯಕೀಯ ಸೇವೆಗಳು ಉಚಿತವಾಗಿ ದೊರಕುತ್ತಿವೆ.

ಭಾತಂಬ್ರಾ ವಿರಕ್ತ ಮಠದ ಪೂಜ್ಯರು ಆಶ್ರಮದಲ್ಲಿ ಸಿದ್ಧರಾಮೇಶ್ವರ ಅನಾಥಾಶ್ರಮ ಪ್ರಾರಂಭಿಸಿದ್ದಾರೆ. ಅದರಲ್ಲಿ ಹಲವಾರು ಅನಾಥ ಶಿಶು ಮಕ್ಕಳನ್ನು ಪಾಲನೆ ಪೋಷಣೆ ಮಾಡುತ್ತಿದ್ದಾರೆ. ಮಹಾರಾಷ್ಟ್ರದ ಖಿಲಾರಿ ಗ್ರಾಮದಲ್ಲಿ ಸಂಭವಿಸಿದ ಭೂಕಂಪನದಲ್ಲಿ ಸಾವಿರಾರು ಜನರು ಮೃತಪಟ್ಟಿದ್ದರು. "ಶ್ರೀಗಳು 4-10-93 ರಂದು ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಕಂಡು ಮಮ್ಮರ ಮರುಗಿದರು. ಇಂತಹ ಪರಿಸ್ಥಿತಿ ಯಾರಿಗೂ ಬರಬಾರದೆಂದು ಮನದಲ್ಲಿಯೇ ಆಶಿಸಿದರು. ಆ ರುದ್ರ ಭೀಕರ ಸನ್ನಿವೇಶವನ್ನು ರಣ ಗೂಡುವ ಪರಿಸರವನ್ನು ಅವಲೋಕಿಸುವಾಗ ಎರುಡ ಅನಾಥ ಹೆಣ್ಣು ಕೂಸುಗಳು ಅಳುತ್ತಾ ರಸ್ತೆಯ ಬೀದಿಯಲ್ಲಿ ನಿಂತಿದ್ದವು. ಆ ಕೂಸುಗಳ ಸಮೀಪಕ್ಕೆ ಶ್ರೀಗಳು ಧಾವಿಸಿ ಅವುಗಳನ್ನು ಎತ್ತಿಕೊಂಡು ಮುದ್ದಾಡಿದ್ದರು. ಅನಾಥ ಮಕ್ಕಳ ಪೂರ್ವ ಪರವನ್ನು ವಿಚಾರಿಸಿ "ಮಲ್ಲಿಕಾರ್ಜುನನ ಪ್ರತಿರೂಪ" ಎಂದು ಬಗೆ ದತ್ತು ಸ್ವೀಕರಿಸಿದರು. ಅನಾಥ ಮಕ್ಕಳ ಬಾಳಿಗೆ ನವಜೀವನ ನೀಡುವ ಸದುದ್ದೇಶದಿಂದ ಗಂಗಾಂಬಿಕೆ - ನೀಲಾಂಬಿಕೆ ಎಂದು ನಾಮಕರಣ ಮಾಡಿದ್ದರು. ಶ್ರೀಗಳಿಗೆ ಅನಾಥ ಮಕ್ಕಳೆಂದರೆ ಬಹಳ ಪ್ರೀತಿಯಿಂದ ಕಾಣುವರು.

ಆ ಅನಾಥ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡುತ್ತಿದ್ದಾರೆ. ತಮ್ಮ ಸ್ವಂತ ಕುಟುಂಬದವರಂತೆ ಅವರನ್ನು ಪಾಲನೆ ಮಾಡಿಕೊಂಡು ಬರುತ್ತಿದ್ದಾರೆ. ನಿಡವಂಚಾ ಚೌಕಿ ಮಠದಲ್ಲಿ ಅನಾಥಾಶ್ರಮ ಪ್ರಾರಂಭಿಸಿದ್ದಾರೆ. ಅಲ್ಲಿಯ ಪೂಜ್ಯರಾದ ಗುರುಮಾತೆ ಮೈತ್ರಿದೇವಿಯವರು ಅನಾಥರ ರಕ್ಷಣೆ ಮಾಡುತ್ತಿರುವುದನ್ನು ನಾವು ಕಾಣುತ್ತೇವೆ. ಹೀಗೆ ಬೀದರ ಜಿಲ್ಲೆಯ ವಿವಿಧ ಮಠಗಳಲ್ಲಿ ಅನಾಥಾಶ್ರಮ ತೆರೆದು ಅದರಡಿಯಲ್ಲಿ ಅನಾಥರ ರಕ್ಷಣೆ ಮಾಡುವ ಹೊಣೆ ಮಠಾಧೀಶರದ್ದಾಗಿದೆ.

ಹೀಗೆ ಬೀದರ ಜಿಲ್ಲೆಯ ವೀರಶೈವ ಮಠಾಧೀಶರು ಅನಾಥರ ರಕ್ಷಣೆಯ ಜೊತೆಗೆ ಹತ್ತು ಹಲವಾರು ರಚನಾತ್ಮಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಸಾಮೂಹಿಕ ವಿವಾಹ ಹಾಗೂ ಉಚಿತ ನೇತ್ರ ಶಿಬಿರಗಳಂತಹ ಹಾಗೂ ವೈದ್ಯರಿಗೆ ಸನ್ಮಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

ಶೈಕ್ಷಣಿಕ ಬೆಳವಣಿಗೆ :

ಬೀದರ ಜಿಲ್ಲೆಯ ವೀರಶೈವ ಮಠಗಳು ಸಾಮಾಜಿಕ, ಧಾರ್ಮಿಕವಾಗಿ ಸೇವೆ ಸಲ್ಲಿಸುತ್ತಾ ಶೈಕ್ಷಣಿಕ ಕ್ಷೇತ್ರದಲ್ಲಿಯೂ ತಮ್ಮ ಪಾತ್ರ ಮುಂದುವರೆಸಿವೆ. ಸಾಮಾಜಿಕ ಬದಲಾವಣೆಯಲ್ಲಿ ಶೈಕ್ಷಣಿಕ ಕ್ಷೇತ್ರದ ಪಾತ್ರವು ಬಹುಮುಖ್ಯವಾಗಿರುತ್ತವೆ. ಇಲ್ಲಿ ಇರುವ ಗುರು-ವಿರಕ್ತ ವರ್ಗದ ಮಠಗಳು ಶೈಕ್ಷಣಿಕ ಮುಖಾಂತರ ಸಮಾಜವನ್ನು ಬದಲಾವಣೆ ಮಾಡಿರುವುದು ಸೂಕ್ತವಾಗಿದೆ. ಶಿಕ್ಷಣದಿಂದ ಸಮಾಜದ ಬೆಳಕನ್ನು ಕಂಡಂತಾಗಿದೆ. ಆ ನಿಟ್ಟಿನಲ್ಲಿ ಬೀದರ ಜಿಲ್ಲೆಯ ವೀರಶೈವ ಮಠಗಳು ಶೈಕ್ಷಣಿಕವಾಗಿ ಪಾತ್ರ ಸಲ್ಲಿಸುತ್ತಿರುವುದು ಕಾಣುತ್ತೇವೆ. ಮೂಲತಃ ಮಠಗಳಲ್ಲಿ ವಿದ್ಯೆ ಕಲಿಸುತ್ತಿದ್ದರು. ಅದಕ್ಕೆ ಮಠಗಳಿಗೆ 'ವಿದ್ಯೆಯ ಕುಠೀರ'ವೆಂದು ಕರೆಯುತ್ತಾರೆ.

ಮಠಗಳಿಗೂ ಶಿಕ್ಷಣಕ್ಕೂ ನಿಕಟವಾದ ಸಂಬಂಧವಿದೆ. ಅಲ್ಲಿ ಸದಾಕಾಲ ವಿದ್ಯೆ ಕಲಿಸುತ್ತಿದ್ದರು. "ಮಠಗಳಿಂದ ನಡೆಯುವ ಇಂದಿನ ಶಿಕ್ಷಣ ಕಣ್ಣು ಕುಕ್ಕಿಸುವಂತಿದೆ" ಎಂಬ ವಾಕ್ಯವನ್ನು ಗಮನಿಸಿದಾಗ ಮಠಗಳು ಶಿಕ್ಷಣ ಕೇಂದ್ರಗಳಾಗಿ ಸಮಾಜಕ್ಕೆ ಅನುಪಮ ಸೇವೆ ಸಲ್ಲಿಸುತ್ತಿರುವುದು ಉಚಿತ ಪ್ರಸಾದ ನಿಲಯದೊಂದಿಗೆ ಉಚಿತ ಶಿಕ್ಷಣವನ್ನು ಕೊಟ್ಟು ಬಡ ಜನತೆಗೆ ಬೆಳೆಸುತ್ತಿರುವುದು ಕಾಣುತ್ತಿದ್ದೇವೆ.

ಮಠಗಳಲ್ಲಿ ಸಂಗೀತ, ಪಂಚಾಂಗ, ಆಯುರ್ವೇದ ಮುಂತಾದ ಕಲೆಗಳನ್ನು ಕಲಿಸುತ್ತಿದ್ದರು. ಇಂದಿಗೂ ಹಲವಾರು ಮಠಗಳು ಓದಿಸುವ ಮಠಗಳಾಗಿಯೇ ಪ್ರಖ್ಯಾತಿ ಪಡೆದುಕೊಂಡಿವೆ.

ಪ್ರಾಚೀನ ಕಾಲದಲ್ಲಿ ಸಾಲಿ ಮಠಗಳು, ಓದಿಸುವ ಮಠಗಳು ಹಾಗೂ ವಿರಕ್ತ ಮಠಗಳು ಎಂಬ ಮೂರು ಪ್ರಕಾರದ ವೀರಶೈವ ಮಠಗಳು ಆಸಕ್ತಿ ವಹಿಸಿ ಶಿಕ್ಷಣ ಪ್ರಸಾರ ಮಾಡಿದ್ದವು. ಈ ಮಠಗಳ ಮೂಲ ಉದ್ದೇಶ ಶಾಲೆಯನ್ನು ತೆರೆದ ಶಿಕ್ಷಣ ಕೊಡಿಸುವಂತದ್ದಾಗಿತ್ತು. "ಆ ಕಾಲದಲ್ಲಿ ಮಠಗಳೇ ಶಾಲೆಗಳಾಗಿದ್ದವು ಅಥವಾ ಶಾಳೆಗಳೆಲ ಮಠದೊಳಗೆ ನಡೆಯುತ್ತಿದ್ದವು. ಇಂದಿಗೂ ಎಷ್ಟೋ ಮಠಗಳಿಗೆ ಸಾಲಿಮಠ, ಓದಿಸೋ ಮಠ ಎಂದು ಹೆಸರಿಸುವುದು ಗಮನಾರ್ಹವಾದವು. ಡಾ. ಮ.ಘು.ಚನ್ನಬಸವನವರ ಪ್ರಾಥಮಿಕ ಶಿಕ್ಷಣ ಧಾರವಾಡ ಸಾಲಿ ಮಠ ಶಿವರುದ್ರಯ್ಯನವರ ಹತ್ತಿರ ಆಯಿತೆಂದು ನೆನಪಿಸಿಕೊಳ್ಳಬಹುದು.

ಭಾಲ್ಕಿ ಹಿರೇಮಠ :

ಶಿವಯೋಗ ಮಂದಿರದ ಶಿಸುವಾದ ಶತಾಯುಷಿ ಡಾ. ಶ್ರೀ ಚನ್ನಬಸವ ಪಟ್ಟದ್ದೇವರು. ಅನ್ನದಾಸೋಹದ ಜೊತೆಗೆ ಜ್ಞಾನದಾಸೋಹದ ದೀವಿಟಿಗೆಯನ್ನು ಹಿಡಿದು ಶೈಕ್ಷಣಿಕ ಸೇವೆಯಲ್ಲಿ ನಿರತರಾಗಿದ್ದರು. ಕನ್ನಡ ಭಾಷೆಯ ಮೇಲೆ ತುಂಬಾ ಅಭಿಮಾನ ಆಸಕ್ತಿಯನ್ನು ಹೊಂದಿದ ಶ್ರೀ "ಕನ್ನಡ ಎನೆ ಕುಣಿದಾಡುವುದೆನ್ನೆ ಕನ್ನ ಎನೆ ಕವಿ ನಿಮಿರುವುದು" ಎಂಬ ಕುವೆಂಪುರವರ ವಾಣಿಯನ್ನು ಇವರಿಗೆ ಅಕ್ಷರಶಃ ಸಲ್ಲುತ್ತದೆ. ಆದರೂ ಹೈದ್ರಬಾದ್ ಕರ್ನಾಟಕ ನಿಜಾಮರ ಕಾಲದಲ್ಲಿ ಕೇವಲ ಉರ್ದು ಮತ್ತು ಇಂಗ್ಲಿಷ್ ಭಾಷೆಗಳ ಹೊರತು ಮತ್ತಾವ ಭಾಷೆಯ ಶಿಕ್ಷಣ ಇದ್ದಿರಲಿಲ್ಲ. ಹಾಗೆಯೇ ಶಿಕ್ಷಣಕ್ಕೆ ಅವಕಾಶವು ಕೂಡ ಇದ್ದಿರಲಿಲ್ಲ. ಇದನ್ನು ಕಣ್ಣಾರೆ ಕಂಡು ನೊಂದು ಈ ಭಾಗದಲ್ಲಿ ಕನ್ನಡ ಬೇಕು, ಜನರು ಕನ್ನಡ ಕಲಿಯಬೇಕು ಎಂದು ಪಣತೊಟ್ಟು ಕೋಣೆಯ ಹೊರಗಡೆ ಉರ್ದು ಬೋರ್ಡು ಹಾಕಿ ಒಳಗಡೆ ಕನ್ನಡವನ್ನು ಕಲಿಸಲು ಪ್ರಾರಂಭಿಸುವಾಗ ಅನೇಕ ಕಷ್ಟ ನಷ್ಟಗಳು ಬಂದರೂ, ಮಾನ-ಅಪಮಾನಗಳು ಬಂದರೂ, "ಎನ್ನವಾಮಾ ಕ್ಷೇಮ ನಿಮ್ಮದಯ್ಯ ಎನ್ನ ಮಾನ ಅಪಮಾನ ನಿಮ್ಮದಯ್ಯ" ಎಂದು ಮನದಲ್ಲಿ ಸ್ಮರಿಸಿಕೊಂಡು ಕನ್ನಡವನ್ನು ಪ್ರಗತಿ ಪರವಾಗಿ ಸಾಧಿಸಿದರು". ಇಂತಹ ಅತ್ಯಂತ ನಿಕೃಷ್ಟ ಸ್ಥಿತಿಯಿಂದ ಸಿಡಿದೆದ್ದು ಇಂದು ಬೀದರದಲ್ಲಿ ತಕ್ಕ ಮಟ್ಟಿಗಾದರೂ ಕನ್ನಡ ತಲೆಯೆತ್ತಿ ನಿಲ್ಲುವಂತೆ ಮಾಡಿದ ಪ್ರಾತಃ ಸ್ಮರಣೀಯರು ಯಾರಾದರೂ ಇದ್ದರೆ ಅವರೇ ಭಾಲ್ಕಿ ಮಠದ ಪೂಜ್ಯ ಚನ್ನಬಸವ ಪಟ್ಟದ್ದೇವರು ಎಂಬ ಮಾತನ್ನು ಮನಗಾಣಬೇಕು".

ಬೀದರ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ 1919-20 ರಲ್ಲಿ ಉದಗೀರದ ಶರಣಪ್ಪ ಅಪ್ಪ ಮಾಕಾರವರು ಕನ್ನಡ ಶೈಕ್ಷಣಿಕ ಬೀಜವನ್ನು ಬಿತ್ತಿದ್ದರು. ನಂತರ 1928ರಲ್ಲಿ ಗುರುಮಟಕಲ್ ಶಾಂತವೀರ ಸ್ವಾಮಿಗಳು ಬೀದರ ತಾಲ್ಲೂಕಿನ ರಂಜೆರಿ ಗ್ರಾಮದಲ್ಲೊಂದು ಶಾಲೆಯನ್ನು ಆರಂಭಿಸಿದ್ದರು. ಇದು 4-5 ವರ್ಷಗಳ ನಂತರ ಅನಿವಾರ್ಯ ಕಾರಣದಿಂದ ಸ್ಥಗಿತಗೊಂಡಿತು. ತರುವಾಗ 1931ರಲ್ಲಿ ನಾರಾಯಣಖೇಡ ತಾಲ್ಲೂಕಿನ ಮೋರ್ಗಿ ಗ್ರಾಮದಲ್ಲಿ ಕನ್ನಡ ಶಾಲೆಯನ್ನು ಭಾಲ್ಕಿ ಶ್ರೀಗಳು ಸ್ಥಾಪಿಸಿ ಅಲ್ಲಿಯ ಜನರ ಮನೆ ಮನೆಯ ಬಾಗಿಲಿಗೆ ಹೋಗಿ ತಮ್ಮ ಮಕ್ಕಳನ್ನು ಕನ್ನಡ ಶಿಕ್ಷಣಕ್ಕಾಗಿ ಕಳಿಸಿರಿ ಎಂದು ಕಿಂಕರವಾಗಿ ಬೇಡಿಕೊಂಡರು. ವಿದ್ಯಾರ್ಥಿ ಹಾಗೂ ಶಿಕ್ಷಕರ ವೃಂದದವರಿಗೆ ಉಚಿತ ಪ್ರಾಸಾದ ವಸತಿಗಳ ಸೌಕರ್ಯ ಮಾಡಿಕೊಟ್ಟು ನಡೆಸಿದರು. ಕ್ರಿ.ಶ.1940ರಲ್ಲಿ ದೇವಣಿ ಮತ್ತು ಮಾಂಜರಾ ನದಿಗಳ ಸಂಗಮವಾದ ಕೂಡಲ ಸಂಗಮದಲ್ಲಿ ಮತ್ತೊಂದು ಪಾಠಶಾಲೆಯನ್ನು ಪ್ರಾರಂಭಿಸಿದ್ದರು. ಈ ಶಾಲೆಗಳಿಗೆ "ಶಾಂತಿವರ್ಧಕ ಶಿಕ್ಷಣ ಸಂಸ್ಥೆ" ಎಂಬ ಹೆಸರಿಟ್ಟರು. ಈ ಸಂಸ್ಥೆಯೂ ದಿನೇ

ದಿನೇ ಪ್ರಗತಿಯನ್ನು ಸಾಧಿಸುತ್ತ ಇಂದು ಹಲವಾರು ಕಡೆ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿ ಹೆಮ್ಮರವಾಗಿ ಬೆಳೆದು ಪ್ರಜ್ವಲಿಸುತ್ತಿದೆ.

ಈ ಸಂಸ್ಥೆಯು ನಡೆಸಿಕೊಂಡು ಬರುವ ಶಾಲಾ-ಕಾಲೇಜುಗಳು ಇಂತಿವೆ :

ಅಕ್ಕಮಹಾದೇವಿ ಕನ್ಯಾ ಪ್ರೌಢಶಾಲೆ, ಬೀದರ್.

ಅಕ್ಕಮಹಾದೇವಿ ಮಹಿಳಾ ಪದವಿ ಮಹಾವಿದ್ಯಾಲಯ, ಬೀದರ್.

ಚನ್ನಬಸವೇಶ್ವರ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಮಹಾವಿದ್ಯಾಲಯ, ಭಾಲ್ಕಿ.

ಅಕ್ಕಮಹಾದೇವಿ ಕಿರಿಯ ಮಹಾವಿದ್ಯಾಲಯ, ಭಾಲ್ಕಿ.

ಅಕ್ಕಮಹಾದೇವಿ ಕನ್ಯಾ ಪ್ರೌಢಶಾಲೆ, ಭಾಲ್ಕಿ.

ಹರಳಯ್ಯ ಪಾಲಿಟೆಕ್ನಿಕ್ ಕಾಲೇಜು, ಭಾಲ್ಕಿ.

ಶಾಂತವರ್ಧಕ ಐ.ಟಿ.ಐ. ಕಾಲೇಜು, ಭಾಲ್ಕಿ.

ಗ್ರಾಮೀಣ ಇಂಜಿನಿಯರಿಂಗ್ ಕಾಲೇಜು, ಭಾಲ್ಕಿ.

ಸಿದ್ಧರಾಮೇಶ್ವರ ಸಂಯುಕ್ತ ಪದವಿ ಮಹಾವಿದ್ಯಾಲಯ, ಕಮಲನಗರ.

ಶಾಂತಿವರ್ಧಕ ಪ್ರೌಢಶಾಲೆ, ಕಮಲನಗರ.

ಶಾಂತಿವರ್ಧಕ ಶಿಕ್ಷಣ ಸಂಸ್ಥೆ, ಹಣೆಗಾಂವ.

ಹಾರಕೂಡ ಹಿರೇಮಠ :

ಹಾರಕೂಡ ಬೃನ್ಮಠವಾದ ಶ್ರೀಗಳ ಶ್ರೀ ಚನ್ನವೀರ ಶಿವಾಚಾರ್ಯರು ಚನ್ನಬಸವೇಶ್ವರ ಶಿಕ್ಷಣ ಸಂಸ್ಥೆಯನ್ನು ತೆರೆದು ಶೈಕ್ಷಣಿಕ ಸೇವೆಯನ್ನು ಮಾಡುತ್ತಿದ್ದಾರೆ.

ಶ್ರೀ ಜಗಜ್ಯೋತಿ ಬಸವೇಶ್ವರ ಪ್ರಾಥಮಿಕ ಶಾಲೆ, ಭಾಲ್ಕಿ.

ಶ್ರೀ ಬಸವೇಶ್ವರ ಪ್ರೌಢಶಾಲೆ, ಭಾಲ್ಕಿ.

ಶ್ರೀ ಚನ್ನಬಸವ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆ, ಚಿಂಚೋಳಿ.

ಶ್ರೀ ಅನುಭವ ಪ್ರಾಚಾರ್ಯ ಉಪನ್ಯಾಸ, ಹಾರಕೂಡ.

ಹುಲಸೂರ ವಿರಕ್ತ ಮಠ :

ಶ್ರೀ ಶಿವಾನಂದ ಮಹಾಸ್ವಾಮಿಗಳು "ಶ್ರೀ ಗುರು ಬಸವೇಶ್ವರ ಶಿಕ್ಷಣ ಸಂಸ್ಥೆ"ಯನ್ನು ತೆರೆದು ಅದರ ಅಡಿಯಲ್ಲಿ ಕೆಳಗಿನ ಶಾಲೆ-ಕಾಲೇಜುಗಳನ್ನು ನಡೆಸುತ್ತಿದ್ದಾರೆ.

ಶ್ರೀಗುರು ಬಸವೇಶ್ವರ ಪ್ರೌಢಶಾಲೆ, ಹುಲುಸೂರ.

ಶ್ರೀ ಜ. ಬ. ಕು. ಪ್ರಾಥಮಿಕ ಶಾಲೆ, ಹುಲುಸೂರು.

ಶ್ರೀ ಶಾಂತಲಿಂಗೇಶ್ವರ ಪ್ರಾಥಮಿಕ ಶಾಲೆ, ಹುಲುಕುಂಟಿ.

ಶ್ರೀಗುರು ಬಸವೇಶ್ವರ ಪ್ರಾಥಮಿಕ ಶಾಲೆ, ಮುಕರಂಬಿ.

ಶ್ರೀ ಜಗದ್ಗುರು ಬಸವಕುಮಾರೇಶ್ವರ ಪ್ರೌಢಶಾಲೆ, ಬಸವಕಲ್ಯಾಣ.

ಶ್ರೀ ಶಿವಾನಂದೇಶ್ವರ ಪ್ರಾಥಮಿಕ ಶಾಲೆ, ಬಸವಕಲ್ಯಾಣ.

ಮಂಠಾಳದಲ್ಲಿ ಶ್ರೀ ಮ. ನಿ. ಪ್ರ. ಗುಹೇಶ್ವರ ಸ್ವಾಮಿಗಳು ಗುಹೇಶ್ವರ ಶಿಕ್ಷಣ ಸಂಸ್ಥೆಯನ್ನು ತೆರೆದು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ನಡೆಸುತ್ತಿದ್ದಾರೆ. ಹಿರೆನಾಗಾಂವದಲ್ಲಿ ಶ್ರೀ ಜೈ ಶಾಂತಲಿಂಗೇಶ್ವರ ಸ್ವಾಮಿಗಳು ಶ್ರೀ ಶಾಂತಲಿಂಗೇಶ್ವರ ಶಿಕ್ಷಣ ಸಂಸ್ಥೆಯನ್ನು ತೆರೆದು ಅದರ ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆ, ಬಾಲಕರ ಅನಾಥ ಆಶ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ನಿಡವಂಚಾ ಮಠ :

ಶ್ರೀ ಮಠದಲ್ಲಿ ಶ್ರೀಗುರು ಭದ್ರೇಶ್ವರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಇದರಡಿಯಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ.

ಶ್ರೀಗುರು ಭದ್ರೇಶ್ವರ ಪ್ರಾಥಮಿಕ ಶಾಲೆ, ನಿಡವಂಚಾ.

ಶ್ರೀಗುರು ಭದ್ರೇಶ್ವರ ಪ್ರೌಢಶಾಲೆ, ನಿಡವಂಚಾ.

ಶ್ರೀಗುರು ಭದ್ರೇಶ್ವರ ನವೋದಯ ಕೋಚಿನ್ ಕ್ಲಾಸ್, ನಿಡವಂಚಾ.

ಚಾಂಬೋಳ ಹಿರೇಮಠ :

ಶ್ರೀ ಮಠವು "ರುದ್ರಮುನಿ ಶಿಕ್ಷಣ ಸಂಸ್ಥೆ" ಎಂಬ ಹೆಸರನ್ನಿಟ್ಟು ಶ್ರೀಗಳು ಶೈಕ್ಷಣಿಕ ಸೇವೆಯನ್ನು ಮಾಡುತ್ತಿದ್ದಾರೆ.

ಶ್ರೀಮತಿ ನೀಲಮ್ಮಾತಾಯಿ ಪ್ರಾಥಮಿಕ ಶಾಲೆ, ಚಾಂಬೋಳ.

ಶ್ರೀ ರುದ್ರಮುನಿಪಟ್ಟದ್ದೇವರು ಪ್ರೌಢಶಾಲೆ, ಚಾಂಬೋಳ.

ಶ್ರೀವೀರಭದ್ರೇಶ್ವರ ವಸತಿ ನಿಲಯ, ಚಾಂಬೋಳ.

ಭಾತಂಬ್ರಾ ವಿರಕ್ತ ಮಠ :

ಶ್ರೀ ಸಿದ್ದರಾಮೇಶ್ವರ ಅನಾಥಾಶ್ರಮ, ಬಸವ ಮುಕ್ತಿ ಮಂದಿರ, ಬೀದರ್ 1984.

ಶ್ರೀ ಬಸವಗುರುಕುಲ ಶಾಲೆ, 1992.

ಶ್ರೀ ಹಾನಗಲ್ ಕುಮಾರೇಶ್ವರ ಪ್ರಾಥಮಿಕ ಶಾಲೆ, ಭಾತಂಬ್ರಾ, 1992.

ಶ್ರೀ ಹಾನಗಲ್ ಕುಮಾರೇಶ್ವರ ಪ್ರೌಢಶಾಲೆ, ಭಾತಂಬ್ರಾ, 1995.

ಶ್ರೀ ಶಿವಯೋಗೀಶ್ವರ ಪ್ರಾಥಮಿಕ ಶಾಲೆ, ಭಾಲ್ಕಿ, 1996.

ಹೀಗೆ ಬೀದರ್ ಜಿಲ್ಲೆಯ ವೀರಶೈವ ಮಠಗಳ ಮಠಾಧೀಶರು ಶೈಕ್ಷಣಿಕ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ.

ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆ :

ವೀರಶೈವ ಮಠಗಳು ಸಾಹಿತ್ಯ ಭಂಡಾರವನ್ನು ಸೃಷ್ಟಿಸುತ್ತಾ ಬಂದಿವೆ. ಹನ್ನೆರಡನೆ ಶತಮಾನದಲ್ಲಿ ಸಾಹಿತ್ಯ ತಾಡೋಲ್ಕ ಹಾಗೂ ಶಾಸನಗಳನ್ನು ಸಂರಕ್ಷಿಸಿದ ಕೀರ್ತಿ ಶ್ರೀಮಠಗಳಿಗೆ ಸಲ್ಲುತ್ತದೆ. ಕನ್ನ ಸಾಹಿತ್ಯದ

ಹಿರಮೆಯನ್ನು ಹೆಚ್ಚಿಸಿದ ವಚನ ಸಾಹಿತ್ಯ ಸೃಷ್ಟಿಯಾದದ್ದು ವೀರಶೈವ ಮಠಗಳಲ್ಲಿಯೇ. ಮಠಾಧೀಶರು, ಕವಿಗಳು, ಸಾಹಿತಿಗಳು, ಕಲಾವಿದರು ಮತ್ತು ವೈದ್ಯರೂ ಆಗಿದ್ದಾರೆ.

ಇಂದಿಗೂ ಕೂಡ ಹಲವಾರು ಮಠಗಳಲ್ಲಿ ಮಠಾಧೀಶರು ಸಾಹಿತ್ಯ ರಚಿಸಿ ಪ್ರಕಟಿಸುತ್ತಿರುವುದು ಕಾಣುತ್ತೇವೆ. ಮಠಾಧೀಶರು ರಚಿಸಿದ ಸಾಹಿತ್ಯ ಯಾವುದೇ ಜಾತಿ-ಮತ-ಪಂಥ-ಕುಲ ಗೋತ್ರಗಳಿಗೆ ಸೀಮಿತವಾಗಿರುವುದಿಲ್ಲ. ಇಡೀ ಮಾನವ ಕುಲಕ್ಕೆ ಸಂಬಂಧಪಟ್ಟಂತೆ ರಚಿಸುತ್ತಿದ್ದರು. ಅಂತಹ ಸಾಹಿತ್ಯವನ್ನು ರಚಿಸಿದ ಸಮಾಜವು ಸಮಾಜದ ಸರ್ವತೋಮುಖವಾಗಿ ಬದಲಾವಣೆಯನ್ನು ಹೊಂದಲು ಸಹಾಯಕವಾಗಿದೆ. ಬಹುಪಾಲು ಸಾಹಿತ್ಯ ಮಠ-ಮಾನ್ಯಗಳ ಪರಿಸರದಲ್ಲಿಯೇ ಸೃಷ್ಟಿಗೊಂಡಿದೆ. ತೋಂಟದ ಸಿದ್ಧಲಿಂಗಯತಿಗಳು ವಚನಗಳು ರಚನೆ ಮಾಡಿದ್ದು ಕಾಣುತ್ತೇವೆ. ಅಲ್ಲದೆ ಷಣ್ಮುಖ ಶಿವಾಯೋಗಿಗಳು ವಚನಗಳನ್ನು ರಚಿಸಿ ಶ್ರೇಷ್ಠ ಸಾಹಿತಿಯೆನಿಸಿಕೊಂಡಿದ್ದರು. ಶೂನ್ಯ ಸಂಪಾದನೆಯೆಂಬ ಅದ್ಭುತವಾದ ಕೃತಿಯನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯ ಮಾಡಿಸಿದವರು ಮಠಾಧೀಶರು.

ಹುಬ್ಬಳ್ಳಿಯ ಮೂರು ಸಾವಿರ ಮಠದ ಪೂಜ್ಯರಾದ ಡಾ|| ಜ.ಚ.ನಿ. ಹಾಗೂ ಮಂಡರಗಿಯ ಅನ್ನದಾನೇಶ್ವರ ಮಹಾಸ್ವಾಮಿಗಳು ಅಲ್ಲದೆ ನಾಡಿನಾದ್ಯಂತ ಹಲವಾರು ಮಠಾಧೀಶರು ಸ್ವತಃ ಸಾಹಿತ್ಯ ಅಭಿವೃದ್ಧಿಯಲ್ಲಿ ತೊಡಗಿದ್ದರು. "ಮಠದ ದೇವಾಲಯ ಬಸದಿ ಮುಂತಾದ ನೆಲೆಗಳಲ್ಲಿ ವಾಸಿಸುತ್ತಿದ್ದ ಯತಿಗಳು, ಸನ್ಯಾಸಿಗಳು, ಮಠದೊಡೆಯರು ಹಸ್ತ ಪ್ರತಿಗಳು ಲೇಖನ ಕಾರ್ಯವನ್ನು ಕೈಗೊಳ್ಳುತ್ತಾ ಬಂದಿರುವುದು ಸರ್ವೇ ಸಾಮಾನ್ಯವಾಗಿದೆ.

ಆ ಒಂದು ನಿಟ್ಟಿನಿಂದ ನಾವು ಸಂಶೋಧನಾತ್ಮಕವಾಗಿ ಅಧ್ಯಯನ ಮಾಡಿದಾಗ ಮಠಗಳಲ್ಲಿ ಇಂದಿಗೂ ಸಾಹಿತ್ಯ ಭಂಡಾರ ದೊರೆಯುತ್ತದೆ. ಹಸ್ತಪ್ರತಿಗಳ ಭಂಡಾರ ವೀರಶೈವ ಮಠಗಳಲ್ಲಿ ಉದ್ದಕ್ಕೂ ಬೆಳೆದುಬಂದಿದೆ. ಅದೇ ರೀತಿ ಬೀದರ ಜಿಲ್ಲೆಯ ಹಲವಾರು ಮಠಗಳಲ್ಲಿ ಉದ್ದಕ್ಕೂ ಬೆಳೆದುಬಂದಿದೆ. ಅದೇ ರೀತಿ ಬೀದರ ಜಿಲ್ಲೆಯ ಹಲವಾರು ಮಠಗಳಲ್ಲಿ ಸಾಹಿತ್ಯ ರಚನೆ ಆಗಿದ್ದು ಕಾಣುತ್ತೇವೆ. ಅನೇಕ ಮಠಾಧೀಶರು ಸ್ವತಃ ಕವಿಗಳು, ಸಾಹಿತಿಗಳಾಗಿದ್ದರಲ್ಲದೆ ಹಿರಿಯ-ಕಿರಿಯ ಕವಿಗಳು ಹಾಗೂ ಸಾಹಿತಿಗಳಿಗೆ ಸಾಹಿತ್ಯ ರಚನೆ ಮಾಡಲು ಪ್ರೋತ್ಸಾಹ ನೀಡುತ್ತಿದ್ದಾರೆ. ಅವರು ರಚಿಸಿದ ಸಾಹಿತ್ಯ ಮಠಾಧೀಶರು ಪ್ರಕಟಿಸಿ ಓದುಗರ ಕೈಮುಟ್ಟುವಂತೆ ಮಾಡುತ್ತಿದ್ದಾರೆ. ವಚನ ಸಾಹಿತ್ಯದ ತತ್ವಗಳು, ಜಾತೀಯತೆ ನಿರ್ಮೂಲನೆ, ವರದಕ್ಷಿಣೆ ನಿಷೇಧ, ಮೂಢನಂಬಿಕೆಗಳ ವಿರೋಧ, ಅಂತರಜಾತಿ ವಿವಾಹಕ್ಕೆ ಪ್ರೋತ್ಸಾಹ, ಸ್ತ್ರೀಯರಿಗೆ ಸಮಾನ ಅವಕಾಶ ಹೀಗೆ ಮುಂತಾದ ಪ್ರಕಾರದ ಸಾಹಿತ್ಯ ಮಠಗಳ ಪ್ರೋತ್ಸಾಹದಿಂದ ರಚನೆಯಾಗುತ್ತಿದೆ.

ಬೀದರ ಜಿಲ್ಲೆಯ ವೀರಶೈವ ಮಠಗಳ ಸಾಹಿತ್ಯ ರಚನೆ ಮಾಡುತ್ತಿರುವುದರಿಂದ ಸಮಾಜಕ್ಕೆ ಅನುಕೂಲವಾಗುತ್ತಿದೆ. ಇದರಿಂದ ಜನತೆಯ ಹೃದಯದಲ್ಲಿ ಸದ್ಭಾವನೆ ಮೂಡುತ್ತಲಿದೆ. ಮೂಢ ನಂಬಿಕೆಗಳು ಹೋಗಿ ಜನರಲ್ಲಿ ನೈಜ ಪ್ರವೃತ್ತಿ ಬೆಳೆಯಲು ಕಾರಣವಾಗುತ್ತಿದೆ. ಸಾಹಿತ್ಯ ದೃಷ್ಟಿಯಿಂದ ಆತ್ಮತುಷ್ಟಿಗೆ ಆಹಾರವಾಗಿದೆ. ಆದ್ದರಿಂದ ಮನಸ್ಸಿಗೆ ನೆಮ್ಮದಿಯಾಗುತ್ತಿದೆ.

ಮಠಾಧೀಶರು ಸದಾ ಸಕಲರಿಗೆ ಲೇಸನ್ನೇ ಬಯಸುವರಾಗಿದ್ದರು. ಸಾಹಿತ್ಯದ ಮೂಲಕ ಸಮಾಜಕ್ಕೆ ಒಳ್ಳೆಯದನ್ನು ಮಾಡಲು ಬಯಸಿದರು. ಬೀದರ ಜಿಲ್ಲೆಯ ಹಲವಾರು ಮಠಗಳಿಂದ ಪ್ರಕಟಗೊಂಡ ಸಾಹಿತ್ಯ ಭಂಡಾರದ ಒಂದು ನೋಟ ಈ ಕೆಳಗಿನಂತಿ ಪ್ರಸ್ತಾಪಿಸಲಾಗಿದೆ.

ಭಾಲ್ಕಿ ಹಿರೇಮಠ

ಭಾಲ್ಕಿ ಹಿರೇಮಠದಲ್ಲಿ 1ನೇ ಡಿಸೆಂಬರ್ 1971ರಂದು "ಶಾಂತಿ ಕಿರಣ" ಎಂಬ ವಾರ ಪತ್ರಿಕೆಯ ರೂಪದಲ್ಲಿ ಪ್ರಪ್ರಥಮವಾಗಿ ಪ್ರಕಟಣೆಗೊಂಡಿತು. ಈ ಪತ್ರಿಕೆಯಲ್ಲಿ ಡಿಸೆಂಬರ್ 4, 1972ರ ಸಂಪಾದಕರಾದ ಶ್ರೀ ಜಿ.ಬಿ. ವಿಸಾಜಿಯವರು ಹೀಗೆ ಬರೆದಿರುವುದನ್ನು ನೆನೆಯಬಹುದು. "ಕರ್ನಾಟಕದ ಗಡಿನಾಡಿನಲ್ಲಿ ಕನ್ನಡ ಬಾವುಟವನ್ನು ಹೆಮ್ಮೆಯಿಂದ ಎತ್ತಿ ಹಿಡಿದ ಪತ್ರಿಕೆ". 'ಶಾಂತಿಕಿರಣ' ನಾಲ್ಕು ಪುಟದ ಪುಟ್ಟ ಹೃದಯದಲ್ಲಿ ಎಷ್ಟೊಂದು ವೈವಿಧ್ಯ. ಕವನ, ಕಥೆ, ಪ್ರಬಂಧ, ವಿಮರ್ಶೆ, ಸಾಹಿತ್ಯಿಕ ವ್ಯಕ್ತಿ ಪರಿಚಯ, ಚುಟುಕು, ಲೋಕಮತ ಹೇಳಿದ್ದು-ಕೇಳಿದ್ದು, ಪುಸ್ತಕಾವಲೋಕನ, ಜಿಲ್ಲೆಯ ಸುದ್ದಿಗಳ ವರದಿ ಮತ್ತು ವಿವಿಧ ಜಾಹೀರಾತುಗಳಿಂದ ಜನರ ಮನಸ್ಸನ್ನು ಸೂರೆಗೊಂಡಿದೆ ಎಂಬ ಮಾತು ಸತ್ಯವಾಗಿದೆ.

ದಿನಾಂಕ: 21.02.1974ರಂದು ಪೂಜ್ಯ ಗುರುಗಳ ಸನ್ನಿಧಿಯಲ್ಲಿ ಭಾಲ್ಕಿ ಹಿರೇಮಠದಲ್ಲಿ ಕವಿ ಸಮ್ಮೇಳನ ನೆರವೇರಿತು. ಈ ಸಂದರ್ಭದಲ್ಲಿ "ಚಂಬೆಳಕು" ಕವನ ಸಂಕಲನವನ್ನು ಬಿಡುಗಡೆ ಮಾಡಿದ್ದಾರೆ. ಇದನ್ನು ಶ್ರೀ ಬಸವರಾಜ ಸಂಗವದ ಸಂಪಾದಿಸಿದ ಕವನಗಳು. ಇದನ್ನು ಶ್ರೀ ಚನ್ನಬಸವ ಪಟ್ಟದ್ದೇವರ ಕುರಿತು ಹೃದಯ ತುಂಬಿ ಸಂಪಾದಿಸಿದ ಕವನಗಳು ಇದನ್ನು ಶ್ರೀ ಚನ್ನಬಸವ ಪಟ್ಟದ್ದೇವರ ಕುರಿತು ಹೃದಯ ತುಂಬಿ ಹಾಡಿದ ಮೂವತ್ತೈದು ಕವಿಗಳ ನಲವತ್ತೆರಡು ಕವನಗಳಿವೆ. ಇದರಲ್ಲಿ ಎಲ್ಲರೂ ತಮ್ಮ ತಮ್ಮ ಭಕ್ತಿಗೀತೆಗಳಿಂದ ಹೂಗೊಂಚಲುಗಳ ಸರಮಾಲೆ ಮಾಡಿ ಪೂಜ್ಯಶ್ರೀ ಗುರುಗಳ ಪಾದಕ್ಕೆ ಅರ್ಪಿಸಿದರು. ಈ ಕವನ ಸಂಕಲನಕ್ಕೆ ಹೈದ್ರಾಬಾದ್ ಕರ್ನಾಟಕ ಖ್ಯಾತ ಸಾಹಿತಿ ಶ್ರೀ ಶಾಂತರಸರು ಮುನ್ನುಡಿ ಬರೆದಿರುವುದನ್ನು ನೋಡುತ್ತೇವೆ.

"ವಿನಯ ಭಂಡಾರಿ" ಸಂಪಾದಿತ ಗ್ರಂಥವಾಗಿದೆ. ಇದು ಪೂಜ್ಯ ಚನ್ನಬಸವ ಪಟ್ಟದ್ದೇವರ ಬಗ್ಗೆ ಪ್ರಕಟವಾದ ಪ್ರಥಮ ಗದ್ಯ ಸಂಕಲನವಾಗಿದೆ. ಇದರಲ್ಲಿ ಭಾಲ್ಕಿ ಶ್ರೀಗಳ ಬಗ್ಗೆ ಅಪಾರ ಭಕ್ತಿ ಭಾವ ತುಂಬಿದ ಹದಿನೆಂಟು ಲೇಖಕರ ಹದಿನೆಂಟು ಬಿಡಿ-ಬಿಡಿ ಲೇಖನಗಳಿವೆ.

"ಬಸವ ಚೇತನ" ಮತ್ತು 1990ರಲ್ಲಿ "ಚನ್ನಬಸವ" ಹಾಗೂ "ಶ್ರೀ ಚನ್ನಬಸವ ಪಟ್ಟದ್ದೇವರು"ಗಳೆಂಬ ಕೃತಿಗಳನ್ನು ಶ್ರೀ ಮ.ಘ.ಚ. ಚನ್ನಬಸವ ಪಟ್ಟದ್ದೇವರು 1987ರಲ್ಲಿ ಒಂದೇ ಸಮಯಕ್ಕೆ ಬಿಡುಗಡೆ ಮಾಡಿದ್ದಾರೆ. ಇವುಗಳಲ್ಲಿ ಶ್ರೀ ಜಿ.ಬಿ. ವಿಸಾಜಿಯವರು ಬರೆದ "ಶ್ರೀ ಚೆನ್ನಬಸವ ಪಟ್ಟದ್ದೇವರು ಭಾಲ್ಕಿ" ಎಂಬ ಶ್ರೀಗಳ ಜೀವನ ಚರಿತ್ರೆ ತೆರೆದಿಟ್ಟ ಬುತ್ತಿಯಂತಿದೆ, ಅಲ್ಲದೆ ಸರಳ ಶೈಲಿಯಲ್ಲಿದೆ.

ದಿನಾಂಕ: 22.12.1991ರಂದು ಪೂಜ್ಯ ಶ್ರೀ ಮ.ಘ.ಚನ್ನಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ ಅವರ 101ನೆಯ ಹುಟ್ಟುಹಬ್ಬದ ಶುಭ ಸಂರ್ಭದಲ್ಲಿ, ಪ್ರೀತಿ ಭಕ್ತಿಗಳಿಂದ, ಸಮರ್ಪಿಸಿದ ಗೌರವ ಗ್ರಂಥವಾದ "ಕಾಯಕ ಪರಿಣಾಮಿ"ಯನ್ನು ಶತಮಾನೋತ್ಸವ ನಿಮಿತ್ತವಾಗಿ ಈ ಗ್ರಂಥವನ್ನು ಬಹಳ ವಿಜೃಂಭಣೆಯಿಂದ ಬಿಡುಗಡೆ ಮಾಡಿದ್ದಾರೆ. ಇದರ ಪ್ರಧಾನ ಸಂಪಾದಕರಾದ "ಶಾಂತರಸ ರಾಯಚೂರ ಚನ್ನಬಸಪ್ಪ ಬೆಟ್ಟದೂರ, ಸಂಪಾದಕರಾದ ಲಿಂಗಣ್ಣ ಸತ್ಯಂಪೇಟ ಮತ್ತು ಎಂ. ಬಂಡೆಪ್ಪ" ಎಂಬ ವಿವಿಧ ಲೇಖಕರಿಂದ ಡಾ. ಪೂಜ್ಯ ಚೆನ್ನಬಸವೇಶ್ವರ ಪಟ್ಟದ್ದೇವರ ಬಗ್ಗೆ ವಿವರವಾಗಿ ಬರೆಯಲಾಗಿದೆ.

ಭಾಲ್ಕಿ ಹಿರೇಮಠ ಸಂಸ್ಥಾನದಲ್ಲಿ ಸಾಹಿತ್ಯದ ಅಭಿವೃದ್ಧಿಗೋಸ್ಕರ ಬಸವ ಧರ್ಮ ಪ್ರಸಾರ ಸ್ಥಾಪಿಸಲಾಗಿದೆ.

ಕ್ರ.ಸಂ.	ಕೃತಿಗಳು	ಲೇಖಕರು	ವರ್ಷ
1	ವೈರಾಗ್ಯ ನಿಧಿ ಅಕ್ಕಮಹಾದೇವಿ	ರಾಮಲಿಂಪ್ಪಾ ಅಂಬುಲಗೆ	1969
2.	ಸಾಮೂಹಿಕ ಪ್ರಾರ್ಥನೆ	ಎಂ. ಬಂಡೆಪ್ಪಾ	1978
3.	ಷಣ್ಮುಖ ಶಿವಯೋಗಿಗಳು	ವಿ. ಸಿದ್ರಾಮಣ್ಣಾ	1984
4.	ಶಿವಶರಣ ರನ್ನಯ್ಯ	ವಿ. ಸಿದ್ರಾಮಣ್ಣಾ	1983
5.	ಇಷ್ಟಲಿಂಗ ಪೂಜಾ ವಿಧಾನ	ಶ್ರೀ ಬಸವಲಿಂಗ ಪಟ್ಟದ್ದೇವರು	1984
6.	ಇಷ್ಟಲಿಂಗ ಪೂಜಾ ವಿಧಾನ ಮರಾಠಿ	ವಿಠಲ ರುದ್ರಪ್ಪಾ ಬಿರದಾರ	1985
7.	ಶ್ರೀ ಬಸವೇಶ್ವರ ಸಹಸ್ರ ನಾಮಾವಳಿ	ಶ್ರೀ ವಿಠಲ ಬಿರದಾರ	1985
8.	ಚನ್ನಬಸವ ಪಟ್ಟದ್ದೇವರು	ಡಾ. ಜಿ.ಬಿ. ವಿಸಾಜಿ	1990
9.	ಚಿಂತನ	ಡಾ. ಜಿ.ಬಿ. ವಿಸಾಜಿ	1990
10.	ಚನ್ನಬಸವ	ವಿ.ಎಸ್. ಚರಂತಿ ಮಠ	1990

ಕ್ರ.ಸಂ.	ಕೃತಿಗಳು	ಲೇಖಕರು	ವರ್ಷ
11.	ಶಿವಶರಣ ಹರಳಯ್ಯ	ವಿ. ಸಿದ್ರಾಮಣ್ಣಾ	1991
12.	ಕಾಯಕ ಪರಿಣಾಮಿ	ಶಾಂತರಸ ರಾಯಚೂರು ಮತ್ತು ಚನ್ನಬಸಪ್ಪಾ ಬೆಟ್ಟದೂರು	1999
13.	ಬಸವೇಶ್ವರ ಅಂಬೇಡ್ಕರ್	ಡಾ. ದೇ. ಜವರೇಗೌಡ	1992
14.	ಚನ್ನನ ಮಹಿಮೆ	ಶಿವರುದ್ರಯ್ಯ ಸ್ವಾಮಿ	1993
15.	ಬಸವಣ್ಣನವರ ವಚನಗಳಲ್ಲಿ ದಲಿತ ದರ್ಶನ	ವ್ಹಿ.ಎಸ್.ಚರಂತಿಮಠ	1994
16.	ಬಸವೇಶ್ವರ ಅಂಬೇಡ್ಕರ್ (ಮರಾಠಿ)	ಶಶಿಕಲಾ ಮಡಕಿ	1994
17.	ಬಸವೇಶ್ವರ ಆತ್ಮಕತೆ	ವಿಜಯಲಕ್ಷ್ಮಿ	1995
18.	ಬಸವಜ್ಯೋತಿ	ಬಸವಲಿಂಗ ಪಟ್ಟದ್ದೇವರು	1997
19.	ಕಾಯಕಯೋಗಿ ಡಾ.ಚನ್ನಬಸವ ಪಟ್ಟದ್ದೇವರು	ಡಾ. ಶಾಲಿನಿ	1998
20.	ವಚನ ಸಾಹಿತ್ಯ ಚಿಂತನ	ಸಾರಭಗವನದಾಸ ತಿವಾರಿ	1998
21.	ಅಕ್ಕನವಚನಾಮೃತ	ಜಯದೇವಿ ತಾಯಿ ಲಿಗಡೆ	1999

ಹೀಗೆ ಭಾಲ್ಕಿ ಹಿರೇಮಠವು ಹಲವಾರು ರೀತಿಯಲ್ಲಿ ಸಾಮಾಜಿಕ ಜೀವನವನ್ನು ಶುದ್ಧೀಕರಿಸಲು ಅಮೋಘ ಸಾಹಿತ್ಯಿಕ ಕೊಡುಗೆಯನ್ನು ನೀಡುತ್ತಿದೆ.

ಹಾರಕೂಡ ಹಿರೇಮಠ :

ಹಾರಕೂಡ ಹಿರೇಮಠದ ಪೂಜ್ಯರಾದ ಶ್ರೀ ಚನ್ನವೀರ ಶಿವಾಚಾರ್ಯರು ನೂತನ ಶ್ರೀಗಳು. ಇವರು ಸಾಹಿತ್ಯಿಕವಾಗಿ ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಎಂಬ ಪ್ರಕಾಶನವನ್ನು ತೆರೆದು ಅದರ ಮೂಲಕ ಹಲವಾರು ಕನ್ನಡ ಕೃತಿಗಳನ್ನು ಪ್ರಕಟಿಸಿ ಜನರ ಕೈಗೆ ನೀಡುತ್ತಿದ್ದಾರೆ.

ಶ್ರೀ ಸದ್ಗುರು ಚನ್ನಬಸವ ಸ್ವಾಮಿಗಳ ಅಷ್ಟೋತ್ತರ ನಾಮಾವಳಿ : ಶ್ರೀ ಪುರಾಣಿಕ ಶರಣಯ್ಯ

ಜಾನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು : ಪ್ರೊ. ಸೂಗಯ್ಯ ಹಿರೇಮಠ 1991

ಅನುಭವ ಮಂಟಪದಲ್ಲಿ ವೀರಶೈವ ಸಂಸ್ಕೃತಿ : ವಿ.ಎಸ್. ಚರಂತಿಮಠ 1992

ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು : ಡಾ. ಎಂ.ಎಸ್. ಲಠ್ಠೆ 1992.

ಅನುಭಾವಿಯ ಆತ್ಮಕಥನ : ಡಾ. ಎಸ್.ಆರ್. ಗುಂಜಾಳ 1993.

ಅಂತರ : ಪ್ರೊ. ಸೂಗಯ್ಯ ಹಿರೇಮಠ 1993.

ಶರಣರ ವಚನಗಳಲ್ಲಿ ಸಮಾಜ : ಎಸ್.ಆರ್. ಶಾಸ್ತ್ರಿ 1994.

ಶರಣರ ದಾಸೋಹ ಮತ್ತು ಕಾಯಕ : ಶಿವರಾಜ ಪಾಟೀಲ್ 1994.

ಶೂನ್ಯ ಸಂಪಾದನೆಯ ಮುಖಗಳು : ಡಾ. ಸಂಗಮೇಶ ಸೌದತ್ತಿ ಮಠ 1995.

ಪುಣ್ಯಚಿತ್ತರು : ಪಂಚಾಕ್ಷರಿ ಹಿರೇಮಠ 1995.

ಚನ್ನವೀರ : ಡಾ. ಸಂಗಮೇಶ ಸೌದತ್ತಿ ಮಠ 1996.

ಹೀಗೆ ಹಾರಕೂಡ ಹಿರೇಮಠದಿಂದ ಪೂಜ್ಯರು ಹಲವಾರು ಕೃತಿಗಳನ್ನು ಪ್ರಕಟಿಸಿ ಜನರ ಕೈಗಿಟ್ಟಿದ್ದಾರೆ.

ಹುಲುಸೂರು ವಿರಕ್ತಮಠ :

ಈ ಮಠದ ಪೂಜ್ಯರಾದ ಶ್ರೀ ಶಿವಾನಂದ ಮಹಾಸ್ವಾಮಿಗಳು ಸಾಹಿತ್ಯದಲ್ಲಿ ತುಂಬ ಅಭಿರುಚಿವುಳ್ಳವರಾಗಿದ್ದಾರೆ. ಅಲ್ಲದೆ ಅವರು ಸ್ವತಃ ಕವಿಗಳಾಗಿ ಸಾಹಿತ್ಯ ರಚನೆ ಮಾಡುತ್ತಿದ್ದಾರೆ. ಹಲವಾರು ತತ್ವಪದಗಳನ್ನು ಬರೆದು ಪ್ರಕಟಿಸಿದ್ದಾರೆ. "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬ ವಾಣಿಯನ್ನು ಅರಿತು ಅದರಂತೆ ನಡೆದುಕೊಳ್ಳುವವರಾಗಿದ್ದಾರೆ.

ಅಂತೆಯೇ ಅವರು ರಚಿಸಿದ ಕೃತಿ "ಶಿವಾನಂದ ಸ್ವಾಮಿಗಳ ವಚನಗಳು" ಎಂಬ ವಚನ ಗ್ರಂಥವನ್ನು ಪ್ರಕಟಿಸಿದ್ದಾರೆ. ಇವರ ಅಂಕಿತನಾಮ "ಶಿವಾನಂದ ಪ್ರಿಯಾ ಗುರುಬಸವ ಪ್ರಭವೆ" ಎಂಬ ವಚನಾಂಕಿತ ನಾಮವಾಗಿದೆ. ಇವರ ವಚನಗಳನ್ನು ಶರಣರ ವಚನಗಳಿಗೆ ಅಲ್ಪಸ್ವಲ್ಪ ವರ್ಗಾವಣೆ ಮಾಡಿ ಪುನಃ ರಚಿಸಿರುವುದು ಅವರ ವಚನಗಳಲ್ಲಿಯೇ ಅರಿಯಬೇಕು.

"ಶರಣರ ನುಡಿಯಿಂದ ನುಡಿಗಲಿತೆನಯ್ಯ
ಶರಣರ ಕಾಯಕದಿಂದ ಕಾಯಕಗಲಿತೆನಯ್ಯ
ಶರಣರ ದಾಸೋಹದಿಂದ ದಾಸೋಹಗಲಿತೆನಯ್ಯ
ಶರಣರ ದಯದಿಂದ ದಯಗಲಿತೆನಯ್ಯ
ಶರಣರ ವಿಚಾರದಿಂದ ವಿಚಾರಗಲಿತೆನಯ್ಯ
ಶರಣರ ಆಚಾರದಿಂದ ಆಚಾರಗಲಿತೆನಯ್ಯ
ಶರಣರ ವಚನದಿಂದ ವಚನಗಲಿತೆನಯ್ಯ
ಶಿವಾನಂದ ಪ್ರೀಯ ಗುರುಬಸವ ಪ್ರಭುವೇ"

- ಶ್ರೀ ಶಿವಾನಂದ ಸ್ವಾಮಿಗಳು.

ಹೀಗೆ ಶಿವಾನಂದ ಸ್ವಾಮಿಗಳು ಶಿವಶರಣರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಮುಂದೆ ನಡೆಯುತ್ತಿರುವುದು ಈ ಮೇಲಿನ ವಚನದ ಮೂಲಕ ಮನವರಿಕೆಯಾಗುತ್ತಿದೆ. ಶ್ರೀಮಠದಲ್ಲಿ ಬಸವಧರ್ಮ ಪ್ರಚಾರ ಕೇಂದ್ರ ಎಂಬ ಪ್ರಕಾಶನವನ್ನು ಸ್ಥಾಪಿಸಿದ್ದಾರೆ. ಅದರ ಮೂಲಕ ಹಲವಾರು ಮೌಲಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಶ್ರೀ ಬಸವಕುಮಾರಸ್ವಾಮಿಗಳ ಸಂದೇಶ	:	ಶ್ರೀ ಶಿವಾನಂದ ಮಹಾಸ್ವಾಮಿಗಳು 1974.
ಸಾಮೂಹಿಕ ಪ್ರಾರ್ಥನೆ	:	ಶಿವಾನಂದ ಸ್ವಾಮಿಗಳು 1978.
ಹುಲುಸೂರು ಶಿವಾನಂದ ಸ್ವಾಮಿಗಳ ವಚನಗಳು	:	ಶಿವಾನಂದ ಸ್ವಾಮಿಗಳು 1982.
ಬೀದರ ಜಿಲ್ಲೆಯ ವೀರಶೈವ ಮಠಗಳು	:	ಡಾ|| ರಮೇಶ ಮೂಲಗೆ 1998.
ಬೀದರ ಜಿಲ್ಲೆಯ ಅನುಭಾವಿ ಕವಿಗಳು	:	ಡಾ|| ಬಸವರಾಜ ಸಬರದ 2001.
ಕಲ್ಯಾಣ ಕೈಲಾಸ	:	ಚನ್ನಬಸವ 2001.
ಹುಲುಸೂರು ಶ್ರೀಗಂಧ	:	ಚನ್ನಶೆಟ್ಟಿ 2003.
ಕಲ್ಯಾಣ ಶ್ರೀ	:	ವಿರಶೆಟ್ಟಿ ಬಾವುಗೆ 2003.
ಲೇಸನ್ನೆ ಬಯಸಿದವರು	:	ಡಾ|| ರಮೇಶ ಮೂಲಗೆ 2005
ಬಸವಯೋಗಿ	:	ಡಾ|| ಗುರುಲಿಂಗಪ್ಪಾ ಧಬಾಲೆ 2006.
ಶಿವಬಿಂಬ	:	ಡಾ|| ರಮೇಶ ಮೂಲಗೆ 2006.
ಶಿವಕಳೆ	:	ವಿರಶೆಟ್ಟಿ ಬಾವುಗೆ 2006.
ಬೀದರ ಜಿಲ್ಲೆಯ ಅನುಭಾವಿ ಕವಿಗಳು	:	ಡಾ|| ಗುರುಲಿಂಗಪ್ಪಾ ಧಬಾಲೆ 2006

ಹೀಗೆ ಹುಲುಸೂರು ವಿರಕ್ತ ಮಠದಿಂದ ಹಲವಾರು ಮೌಲಿಕ ಗ್ರಂಥಗಳು ಪ್ರಕಟಗೊಂಡಿವೆ.

ಭಾತಂಬ್ರಾ ವಿರಕ್ತ ಮಠ :

ಭಾತಂಬ್ರಾ ವಿರಕ್ತ ಮಠದ ಶ್ರೀಗಳು 'ಕಲ್ಯಾಣ ಕರ್ನಾಟಕ' ಎಂಬ ಸಂಸ್ಥೆ ಸ್ಥಾಪಿಸಿದ್ದಾರೆ. ಅದರ ಮೂಲಕ ಹಲವಾರು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳ ಪಟ್ಟಿ ಕೆಳಗಿನಂತಿವೆ :

ಅಕ್ಕನ ಅಕ್ಕರೆಯ ನುಡಿಮುತ್ತುಗಳು

ಭಕ್ತ ಭೂಮಿಕ - (ಹಿಂದಿ) : ಪ್ರೊ. ಶಿವಮೂರ್ತಿ ಸ್ವಾಮಿ

ಲಿಂಗಪೂಜಾ ವಿಧಿ

ಹನ್ನೊಂದು ಶಿವಶರಣರ ಹೊನ್ನುಡಿಗಳು

ಸಂಕ್ಷಿಪ್ತ ಲಿಂಗಪೂಜಾ ವಿಧಿ

ಶಿವಶರಣರ ಸೂಳ್ನುಡಿಗಳು

ಪ್ರಾರ್ಥನಾ ಸೌರಭ

ಭಜನಾಂಜಲಿ - ಮಾತೆ ಬಸವಾಂಜಲಿ

ಮಹಾತ್ಮ ಬಸವೇಶ್ವರರು (ಹಿಂದಿ) ದೇಶಾಂಶ ಹುಡುಗಿ

ದೇವರ ದಾಸಿಮಯ್ಯನ ವಚನಗಳು	-	ಸಂ. ಪಾಲಾಕ್ಷಯ್ಯ
ಅಲ್ಲಮಪ್ರಭುದೇವರ ವಚನಗಳು	-	ಸಂ. ಜಿ.ಬಿ. ವಿಸಾಜಿ
ಬಸವಣ್ಣನವರ ವಚನಗಳು	-	ಸಂ. ಎಚ್. ಕಾಶಿನಾಥರೆಡ್ಡಿ
ಚನ್ನಬಸವಣ್ಣನವರ ವಚನಗಳು	-	ಸಂ. ವೀರೇಂದ್ರ ಸಿಂಪಿ
ಸಿದ್ಧರಾಮೇಶ್ವರ ವಚನಗಳು	-	ಸಂ. ದೇಶಾಂಶ ಹುಡುಗಿ
ಅಕ್ಕಮಹಾದೇವಿಯ ವಚನಗಳು	-	ಸಂ. ಮಾತೆ ಬಸವಾಂಜಲಿ
ಮಡಿವಾಳ ಮಾಚಿದೇವರ ವಚನಗಳು	-	ಸಂ. ಮಾತೆ ಬಸವಾಂಜಲಿ
ಲಿಂಗಮ್ಮನವರ ವಚನಗಳು	-	ಸಂ. ಮಾತೆ ಬಸವಾಂಜಲಿ

ಷಣ್ಮುಖ ಶಿವಾಯೋಗಿಗಳ ವಚನಗಳು	-	ಸಂ. ರಘುಶಂಕ ಭಾತಂಬ್ರಾ
ಸರ್ವಜ್ಞನ ವಚನಗಳು	-	ಸಂ. ಬಸವಾಂಜಲಿ ಮಾತೆ
ಅಮುಗೆ ರಾಯಮ್ಮ ಮತ್ತು ಕಾಳವೆ	-	ಸಂ. ಮಾತೆ ಬಸವಾಂಜಲಿ
ನೀಲಮ್ಮನ ವಚನಗಳು	-	ಸಂ. ಮಾತೆ ಬಸವಾಂಜಲಿ
ಶಿವಶರಣೆಯರ ವಚನಗಳು	-	ಸಂ. ಮಾತೆ ಬಸವಾಂಜಲಿ
ಮೋಳಿಗೆ ಮಾರಯ್ಯನ ವಚನಗಳು	-	ಸಂ. ಮಾತೆ ಬಸವಾಂಜಲಿ
ಅಂಬಿಗರ ಚೌಡಯ್ಯನ ವಚನಗಳು	-	ಸಂ. ಮಾತೆ ಬಸವಾಂಜಲಿ
ತೋಂಟದ ಸಿದ್ಧಲಿಂಗೇಶ್ವರ ವಚನಗಳು	-	ಸಂ. ಮಾತೆ ಬಸವಾಂಜಲಿ
ಶರಣರ ದೃಷ್ಟಿಯಲ್ಲಿ ವಚನಗಳು	-	ಸಂ. ಮಾತೆ ಬಸವಾಂಜಲಿ
ಬಸವ ವಚನ ತರಂಗ	-	ಶಿವಮೂರ್ತಿ ಸ್ವಾಮಿಗಳು
ಶರಣ ಗೀತಾಂಜಲಿ	-	ಸಂ. ಮಾತೆ ಬಸವಾಂಜಲಿ
ಮಹಾ ಬಲಿದಾನ (ಹಿಂದಿ)	-	ಶಿವಮೂರ್ತಿ ಸ್ವಾಮಿ
ಬಯಲ ಕಾರಣಿಕ	-	ಸಂ. ಡಾ. ಸಂಗಮೇಶ ಸವದತ್ತಿ ಮಠ
ನಿರಾಭಾರಿ	-	ಡಾ. ಎಂ.ಎಸ್. ಲಠ್ಠೆ 2005

ಪರಾಮರ್ಶನ ಗ್ರಂಥಗಳು

1. ಸ. ಸ. ಮಾಳವಾಡ : ಬಸವಣ್ಣನವರ ವಚನ ಸಂಗ್ರಹ
2. ಜಿ.ಬಿ. ವಿಶಾಜಿ : ಕಾಯಕ ಪರಿಣಾಮಿ (1991)
3. ಸಂಗಮೇಶ ಸೌದತ್ತಿಮಠ : ಚನ್ನವೀರ (1996)
4. ರಮೇಶ ಮೂಲಗೆ : ಬೀದರ ಜಿಲ್ಲೆಯ ವೀರಶೈವ ಮಠಗಳು (1998)
5. ಎಸ್.ಜಿ. ಸ್ವಾಮಿ : ಕಾಯಕ ಪರಿಣಾಮಿ (1991)
6. ಎಂ.ಜಿ. ದೇಶಪಾಂಡೆ : ಕಾಯಕ ಪರಿಣಾಮಿ (1991)

7. ಲಲ್ಲೇಶ್ವರಿ ತಾಯಿ ಮೂಗಿ : ಕಾಯಕ ಪರಿಣಾಮಿ (1991)

8. ಸಿದ್ಧರಾಮೇಶ್ವರ ಬೆಲ್ದಾಳೆ : ಕಾಯಕ ಪರಿಣಾಮಿ (1991)

9. ಗುರುಬಸಯ್ಯ ಅಮ್ಮಾಪುರ : ಕಾಯಕ ಪರಿಣಾಮಿ (1991)

10. ಸುಬ್ಬಣ್ಣ ಅಂಬೆಸಂಗೆ : ಕಾಯಕ ಪರಿಣಾಮಿ (1991)

12. ಕೆ.ಜಿ. ಮಾಶೆಟ್ಟಿ ಹುಡಗಿ : ಕಾಯಕ ಪರಿಣಾಮಿ (1991)

12. ವಿಕ್ರಮ ವಿಸಾಜಿ, ಭಾಲ್ಕಿ : ಕಾಯಕ ಪರಿಣಾಮಿ (1991)

13. ಸೋಮನಾಥಾ ನುಚ್ಚಾ, ಭಾಲ್ಕಿ : ಕಾಯಕ ಪರಿಣಾಮಿ (1991)

14. ಬಸವರಾಜ ಸಂಗಮದ : ಕಾಯಕ ಪರಿಣಾಮಿ (1991)

15. ಎಂ.ಜಿ. ದೇಶಪಾಂಡೆ, ಮೋರಗಿ : ಕಾಯಕ ಪರಿಣಾಮಿ (1991)

17. ಶ್ರೀದೇವಿ ಸೋಲಾಪೂರೆ, ಕಮಾಲನಗರ: ಕಾಯಕ ಪರಿಣಾಮಿ (1991)

18. ದೇಶಾಂಶ ಹುಡಗಿ : ಕಾಯಕ ಪರಿಣಾಮಿ (1991)

19. ಶಾಂತರಸ ಕಾಯಕ ಪರಿಣಾಮಿ (1991)

20. ಜಯದೇವಿ ತಾಯಿ ಕಾಯಕ ಪರಿಣಾಮಿ (1991)

21. ದೇವೇಂದ್ರ ಕುಮಾರ ಹಕಾರಿ ಕಾಯಕ ಪರಿಣಾಮಿ (1991)

22. ಜಿ.ಬಿ. ವಿಸಾಜಿ, ಭಾಲ್ಕಿ ಕಾಯಕ ಪರಿಣಾಮಿ (1991)

23. ವಿ. ಸಿದ್ಧರಾಮಣ್ಣ ಕಾಯಕ ಪರಿಣಾಮಿ (1991)

24. ಶರಣಯ್ಯ ಮಠಪತಿ, ಯಲದಗುಂಡಿ ಕಾಯಕ ಪರಿಣಾಮಿ (1991)

25. ಮಹಾದೇವಮ್ಮ ಸಂಗಮ ಕಾಯಕ ಪರಿಣಾಮಿ (1991)

26. ಎಂ.ಜಿ. ಗಂಗನಪಳ್ಳಿ ಕಾಯಕ ಪರಿಣಾಮಿ (1991)

27. ವೈಜಿನಾಥ ಬಿರಾದಾರ, ಮುಚಳಂಬಿ ಕಾಯಕ ಪರಿಣಾಮಿ (1991)

28. ಗುರುಲಿಂಗಪ್ಪಾ ಧಬಾಲೆ : ಬಸವಯೋಗಿ (2006)

29. ಶ್ರೀ ಶಿವಾನಂದ ಸ್ವಾಮಿಗಳು : ಶ್ರೀ ಶಿವಾನಂದ ಸ್ವಾಮಿಗಳ ವಚನಗಳು (1998)

ಅಧ್ಯಾಯ - 5

ಉಪಸಂಹಾರ

ಆಧ್ಯಾತ್ಮಿಕ ತಳಹದಿಯ ಮೇಲೆ ನಿಂತಿರುವ ಮಠಗಳು ಇಂದು ಧಾರ್ಮಿಕ ಕೇಂದ್ರಗಳಾಗಿವೆ. ಮಠಗಳಲ್ಲಿ ನೂರೊಂದು ಸಂಪ್ರದಾಯದ ಮಠಗಳು ಕಂಡುಬರುತ್ತವೆ. ಕಾಯಕಕ್ಕೆ ಪ್ರಮುಖ ಸ್ಥಾನ ಕೊಡುವ ಮಠಗಳು ಹೆಚ್ಚು. ವಿರಕ್ತ ಮಠಗಳಲ್ಲಿ ಹೆಚ್ಚು ವೃತ್ತಿ ಆಧಾರದಿಂದ ಕೂಡಿರುತ್ತಿದ್ದವು. ಧಾರ್ಮಿಕ ವಿಚಾರ ಚಿಂತನೆ ಕಾಣುವುದರ ಜೊತೆಗೆ ಮಠಗಳು ಸಮಾಜದ ನಂದಾದೀಪಗಳಿದ್ದಂತೆ. ಅಂಧಕಾರದಲ್ಲಿ ಇರುವ ಮಾನವನಿಗೆ ಬೆಳಕಿನೆಡೆಗೆ ಕೊಂಡೊಯುವ ಪ್ರವೃತ್ತಿ ಮಠಗಳಲ್ಲಿವೆ. ಮಠಗಳಲ್ಲಿ ವಿಭಿನ್ನ ರೀತಿಯ ಮಠಗಳಿವೆ. ಉದಾ: ವಿರಕ್ತ ಮಠ, ಹಿರೇಮಠ, ಓದಿಸುವ ಮಠ, ಬಂಕಾಸಾಲೇಮಠ, ಚೌಕಿ ಮಠ, ಕರಿದ ಮಠ, ಕೆಂಡೆ ಮಠ, ಅದಮೂರು ಮಠ, ಸಾಲಿ ಮಠ, ದೊಡ್ಡ ಮಠ, ಗವಿ ಮಠ, ಪತ್ರಿ ಮಠ, ಫಲಹಾರ ಮಠ ... ಹೀಗೆ ಮುಂತಾದ ಮಠಗಳಿವೆ. ಇವುಗಳಲ್ಲಿ ಪ್ರಮುಖವಾಗಿ ಹಿರೇಮಠ ಹಾಗೂ ವಿರಕ್ತ ಮಠಗಳು ಮಾತ್ರ ಪ್ರಖ್ಯಾತಿಯನ್ನು ಪಡೆದುಕೊಂಡಿವೆ. ಇವುಗಳ ಶಾಖಾ ಮಠಗಳಿಗೆ ಹಲವಾರು ಹೆಸರು ಬಂದಿರುವ ಉಲ್ಲೇಖಗಳಿವೆ.

ಮಠ ಹಾಗೂ ಪೀಠಗಳ ಸಂಪ್ರದಾಯ ಪ್ರಾಚೀನವಾದುದು. ಮಠಗಳಿಗೆ ಮೊಟ್ಟಮೊದಲು ಪೀಠವೆಂದು ಕರೆಯುತ್ತಿದ್ದರೆಂದು ತಿಳಿದುಬಂದಿದೆ. ಮಠಗಳಲ್ಲಿ ಗುರುಪೀಠ ಹಾಗೂ ವಿರಕ್ತ ಪೀಠಗಳೆಂದು ಎರಡು ಬಗೆಯ ಪೀಠಗಳು ಕಂಡುಬರುತ್ತವೆ. ಗುರುಪೀಠಗಳು ಹಿರೇಮಠಕ್ಕೆ ಸಂಬಂಧಪಟ್ಟರೆ ವಿರಕ್ತ ಪೀಠಗಳು ವಿರಕ್ತ ಮಠಗಳಿಗೆ ಸಂಬಂಧ ಹೊಂದಿರುತ್ತದೆ. ಇವುಗಳಿಗೆ ನಿರಂಜನ ಪೀಠವೆಂದು ಸಹ ಕರೆಯುತ್ತಾರೆ. ಈ ಎರಡು ಪ್ರಕಾರದ ಮಠಗಳ ಸಂಪ್ರದಾಯ ವಿಭಿನ್ನವಾದುದು. ಅವರವರ ಭಕ್ತಿ ಭಾವ, ಸಂಪ್ರದಾಯ, ಸಂಸ್ಕೃತಿ, ಪಾಠ ಪ್ರವಚನ ಪೂಜ್ಯ ಮುಂತಾದವುಗಳಲ್ಲಿ ವಿಭಿನ್ನವಾಗಿ ಕಾಣುತ್ತೇವೆ. ಅವು ಯಾವುವೆಂದರೆ :

1) ಸಾಮಾನ್ಯ ಅಂಶಗಳು
2) ವಿಭಿನ್ನ ಅಂಶಗಳು
3) ವಿಶಿಷ್ಟ ಅಂಶಗಳು

1. ಸಮಾನ ಅಂಶಗಳು :

1. ಕಾರ್ಯಕ್ಕೆ ಪ್ರಾಮುಖ್ಯತೆ ಕೊಡುವುದು.
2. ಗುರುಲಿಂಗ ಜಂಗಮರಿಗೆ ಪ್ರಾಮುಖ್ಯತೆ

3. ಕಾಯಕದಲ್ಲಿ ಕೈಲಾಸ ಕಾಣುವುದು.

4. ಬಂದ ಆದಾಯದಲ್ಲಿ ದಾಸೋಹ ನಡೆಸುವುದು.

5. ಸ್ತ್ರೀ ಪುರುಷರೆಂಬ ಭೇಧ-ಭಾವನೆ ಇಲ್ಲ

6. ಶ್ರೀಮಂತ ಬಡವ ಮೇಲು-ಕೀಳೆಂಬ ಭಾವನೆ ಇಲ್ಲ.

7. ಭಕ್ತರಿಂದ ದಾಸೋಹ ಮಾಡಿಸುವುದು.

8. ವೇದ-ಶಾಸ್ತ್ರ ಪುರಾರಣ-ಪ್ರವಚನ ಹೇಳುವುದು.

9. ವಚನ ಸಾಹಿತ್ಯ ಪ್ರಚಾರ ಮಾಡುವುದು.

10. ಲಿಂಗಧೀಕ್ಷೆ ಕೊಟ್ಟು ಸಂಸ್ಕರಿಸುವುದು

11. ಮೂಢ ನಂಬಿಕೆಗಳನ್ನು ಹೋಗಲಾಡಿಸಲು ಪ್ರಯತ್ನಿಸುವುದು.

12. ಅಂತರಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡುವುದು.

ಭಿನ್ನ ಅಂಶಗಳು

1. ಹಿರೇಮಠದವರು ಪಂಚಚಾರ್ಯ ಜಯಂತಿ ಬಹಳ ವಿಜೃಂಭಣೆಯಿಂದ ನಡೆಸುತ್ತಾರೆ. ವಿರಕ್ತ ಮಠಗಳಲ್ಲಿ ವಿಜೃಂಭಣೆಯ ಕಾರ್ಯಕ್ರಮಗಲಿಗೆ ಆದ್ಯತೆ ಕೊಡುವುದಿಲ್ಲ.

2. ಕೆಲವು ಹಿರೇಮಠಗಳಲ್ಲಿ ಪಂಚಚಾರ್ಯರ ಅನುಮತಿಯಂತೆ ಕುಂಕುಮ ಹಳದಿಯನ್ನು ಬಳಸುತ್ತಾರೆ. ಆದರೆ ವಿರಕ್ತ ಮಠಗಳಲ್ಲಿ ಇಂತಹುದನ್ನು ತಡೆಯುತ್ತಾರೆ. ಅದರ ಬದಲಿಗೆ ವಿಭೂತಿ ಬಳಸುತ್ತಾರೆ.

3. ಹಿರೇಮಠದ ಮಠಾಧೀಶರಿಗೆ ವ್ಯವಸ್ಥಳ ಬ್ರಹ್ಮಮೂರ್ತಿ ಹಾಗೂ ಮಧ್ಯದವನ ಚಕ್ರವರ್ತಿಗಳೆಂದು ಕರೆಯುತ್ತಾರೆ. ವಿರಕ್ತ ಮಠಾಧೀಶರಿಗೆ ವಿರಕ್ತರು ಮನೋರಂಜನೆ ಪ್ರಣವ ಸ್ವರೂಪಗಳೆಂದು ಕರೆಯುತ್ತಾರೆ.

4. ಹಿರೇಮಠಗಳಲ್ಲಿ ಅಡ್ಡಪಲ್ಲಕ್ಕಿ ಮೆರವಣಿಗೆ ಹಾಗೂ ವಿವಿಧ ಶರಣರ ಉತ್ಸವ ಜಯಂತಿಯನ್ನು ಆಚರಿಸುತ್ತಾರೆ. ಆದರೆ ವಿರಕ್ತ ಮಠಗಳಲ್ಲಿ ಶರಣರ ಜಯಂತಿಗಳನ್ನು ಮಾತ್ರ ಆಚರಿಸುತ್ತಾರೆ. ಅವರ ಅಡ್ಡಪಲ್ಲಕ್ಕಿ ಆಚರಿಸುವುದಿಲ್ಲ.

5. ಹಿರೇಮಠಗಳು ರೇವಣಸಿದ್ಧ ಮರುಳಚಾರ್ಯರಿಗೆ ಸಂಬಂದಪಟ್ಟರೆ ವಿರಕ್ತ ಮಠಗಳು ಹನ್ನೆರಡನೆಯ ಶತಮಾನದ ಶರಣರಿಗೆ ಸಂಬಂಧಪಟ್ಟಿವೆ.

6. ಹಿರೇಮಠಗಳಲ್ಲಿ ಸ್ತ್ರೀಯರು ಮಠಾಧೀಶರಾಗಿರುವುದಿಲ್ಲ. ಸ್ತ್ರೀಯರಿಗೆ ಆ ಹಕ್ಕಿಲ್ಲ. ಆದರೆ ವಿರಕ್ತ ಮಠಗಳಲ್ಲಿ ಸ್ತ್ರೀಯರು ಕೂಡ ಮಠಾಧೀಶರಾಗಿರಲು ಅರ್ಹರಾಗಿರುತ್ತಾರೆ. ಜೀವನ ತ್ಯಾಗ ಮಾಡಿದ ವಿರಕ್ತ ಯಾರೇ ಇರಲಿ ಅವರು ಮಠಾಧೀಶರಾಗಿ ಸೇವೆ ಸಲ್ಲಿಸುತ್ತಾರೆ. ಸ್ತ್ರೀ ಪುರುಷರಂತೆ ಭೇಧ-ಭಾವನೆ ಇರುವುದಿಲ್ಲ.

7. ಹಿರೇಮಠಕ್ಕೆ ಮಠಾಧೀಶರಾಗಿ ಸೇವೆ ಸಲ್ಲಿಸುವವರು ಬ್ರಹ್ಮಚಾರಿಯಾಗಿಯೂ ಅಥವಾ ವಿವಾಹವಾಗಿಯೂ ಇರಬಹುದು. ಆದರೆ ವಿರಕ್ತ ಮಠಗಳಲ್ಲಿ ಮಠಾಧೀಶನಾಗಬೇಕಾದರೆ ಬ್ರಹ್ಮಚಾರಿ, ತ್ಯಾಗಿ ಅಲ್ಲದೆ ಮನೆಯ ಮೇಲಿನ ಮೋಹ ಇರಬಾರದು.

ಬೀದರ ಜಿಲ್ಲೆಯ ಮಠಗಳಾದ ಭಾಲ್ಕಿಯ ಹಿರೇಮಠ, ಹಾರಕೂಡ ಹಿರೇಮಠ, ಹುಲುಸೂರು ವಿರಕ್ತ ಮಠ, ಭಾತಂಬ್ರ ವಿರಕ್ತ ಮಠ, ಬೀದರ ಸಿದ್ಧಾರೂಢಮಠ, ಬೇಮಳಖೇಡ ಹಿರೇಮಠ, ನಿಡವಂಚಮಠ, ಹಿರೇನಾಗಾಂವ ಮಠ, ಹುಲುಕುಂಟಿ ವಿರಕ್ತ ಮಠ, ಚಾಂಬೋಲ ಹಿರೇಮಠ, ಹುಡುಗಿ ಹಿರೇಮಠ, ಠಾಣಾ ಕುಶನೂರು ವಿರಕ್ತ ಮಠ, ಆಲಿಯಂಬರ ಹಿರೇಮಠ ... ಹೀಗೆ ಮುಂತಾದ ವೀರಶೈವ ಮಠಗಳು ಸಾಮಾಜಿಕ ಬದಲಾವಣೆಯಲ್ಲಿ ತನ್ನದೆಯಾದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕ ನಿಟ್ಟಿನಲ್ಲಿ ಸೇವೆ ಸಲ್ಲಿಸುತ್ತಿವೆ.

ಧಾರ್ಮಿಕ ಹಿನ್ನೆಲೆಯಲ್ಲಿಯೇ ಹರಿಡಿಕೊಂಡಿರುವ ವೀರಶೈವ ಮಠಗಳು ಹಲವಾರು ವಿಧಗಳಲ್ಲಿ ಕಂಡುಬಂದರೂ ಅವುಗಳಲ್ಲಿ ಮುಖ್ಯವಾಗಿ ಗುರು ವರ್ಗದ ಮಠ ಹಾಗೂ ವಿರಕ್ತ ವರ್ಗದ ಮಠಗಳೆಂದು ಎರಡು ಪ್ರಕಾರಗಳಲ್ಲಿ ಎದ್ದು ಕಾಣುತ್ತೇವೆ. ಈ ಎರಡು ಪ್ರಕಾರದ ವೀರಶೈವ ಮಠಗಳ ಧ್ಯೇಯೋದ್ಧೇಶ ಒಂದೇಯಾಗಿರುತ್ತದೆ. ಸಮಾಜೋದ್ಧಾರ್ಮಿಕ ಜಾಗೃತಿಯೊಂದಿಗೆ ಸಮಾಜದಲ್ಲಿ ಹಬ್ಬಿವ ಕಂದಾಚಾರ, ಮೂಢನಂಬಿಕೆ, ಅಸ್ಪೃಶ್ಯತಾ ನಿವಾರಣೆ ಮತ್ತು ಶರಣರ ತತ್ವಾಚಾರಣೆಯನ್ನು ನಿಯಮಾನುಸಾರ ನಡೆಸಿಕೊಂಡು ಬರುತ್ತಿದ್ದಾರೆ.

ಮಠಗಳು ಅಸ್ಪೃಶ್ಯತಾ ನಿವಾರಣೆ ಅನಾಥರ ರಕ್ಷಣೆ ಪ್ರತಿಭಾ ಪುರಸ್ಕಾರ, ಅನ್ನದಾಸೋಹ, ಸಾಮೂಹಿಕ ವಿವಾಹ, ಉಚಿತ ನೇತ್ರ ಶಿಬಿರಗಳಂತಹ ಅನೇಕ ಸಾಮಾಜಿಕ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡು ಸಾವಿರಾರು ಭಕ್ತರ ಮನಸ್ಸನ್ನು ತಿದ್ದುತ್ತಿವೆ. ಪಾಠ ಪ್ರವಚನಗಳ ಮಾಡುವ ಉದ್ದೇಶದಿಂದ ಮಠಾಧೀಶರು ಹಳ್ಳಿ ಪಟ್ಟಣಗಳಿಗೆ ಸಂಚರಿಸಿದರು. ಭಕ್ತರಲ್ಲಿರುವ ಕಲ್ಮಶಗಳ ಬೀಜದ ಬೇರು ಸಹಿತ ಕಿತ್ತೊಗೆಯಲು ಶ್ರಮಿಸುತ್ತಿದ್ದಾರೆ. ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ವೀರಶೈವ ಮಠಗಳಿಗೂ ಹಾಗೂ ಶಿಕ್ಷಣಕ್ಕೆ

ನಿಕಟವಾದ ಸಂಬಂಧವಿದೆ. ಆದ್ದರಿಂದ ಹೆಚ್ಚಿನ ವೀರಶೈವ ಮಠಗಳಲ್ಲಿ ಶೈಕ್ಷಣಿಕ ಕೇಂದ್ರಗಳನ್ನು ಸ್ಥಾಪನೆಯಾಗಿರುವುದನ್ನು ಕಾಣುತ್ತೇವೆ. ಆಯಾ ಭಾಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶೈಕ್ಷಣಿಕತೆಯಲ್ಲಿ ಯಾವುದೇ ರೀತಿಯಲ್ಲಿ ತೊಂದರೆಯಾಗಬಾರದೆಂದು ದಾಸೋಹದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ ಮಠಗಳಲ್ಲಿ ಕನ್ನಡವೊಂದೇ ಶಿಕ್ಷಣವಲ್ಲದೆ ಇಂಗ್ಲಿಷ್, ಸಂಸ್ಕೃತ ಹಾಗೂ ಮರಾಠಿ, ಹಿಂದಿ ಹಾಗೂ ಸಂಗೀತಗಳು ಸಹ ಕಲಿಸುತ್ತಾರೆ. ಹೀಗೆ ಸಾಮಾಜಿಕ ಬದಲಾವಣೆಯಲ್ಲಿ ಬೀದರ ಜಿಲ್ಲೆಯ ವೀರಶೈವ ಮಠಗಳು ಶೈಕ್ಷಣಿಕ ರಂಗದಲ್ಲಿ ಅನುಪಮ ಸೇವೆ ಸಲ್ಲಿಸುತ್ತೇವೆ.

ಮಠ ಮತ್ತು ಶಿಕ್ಷಣಕ್ಕೆ ಹೇಗೆ ಸಂಬಂಧವಿದೆಯೋ ಹಾಗೆಯೇ ಮಠ ಮತ್ತು ಸಾಹಿತ್ಯಕ್ಕೆ ಹತ್ತಿರದ ಸಂಬಂಧವಿದೆ. ಮಠಗಳಲ್ಲಿ ವೀರಶೈವ ಧರ್ಮದ ತತ್ವಗಳು ಶರಣರ ವಚನಗಳು ತಾಡೋಲೆಗಳು ಸಂರಕ್ಷಿಸಿದ ಕೀರ್ತಿ ಇಂದಿನ ಮಠಗಳಿಗೆ ಸಲ್ಲುತ್ತದೆ. ಅನೇಕ ಶರಣರ ಸಂತರ ಸತ್ಪುರುಷರ ಯೋಗಿಗಳ ತ್ಯಾಗಿಗಳ ಕೃತಿಗಳನ್ನು ಬರೆಯಿಸಿ ಪ್ರಕಟಣೆ ಕೈಗೊಂಡಿದ್ದಾರೆ. ಕೆಲವು ಮಠಗಳ ಮಠಾಧೀಶರು ಸ್ವತಃ ಸಾಹಿತ್ಯವನ್ನು ರಚಿಸುತ್ತಿದ್ದಾರೆ. ಅವರು ಧಾರ್ಮಿಕ, ಆಧ್ಯಾತ್ಮಿಕ ಗ್ರಂಥಗಳನ್ನು ರಚಿಸಿ ಪ್ರಕಟಣೆಯ ಕಾರ್ಯವನ್ನು ಮಾಡಿದ್ದಾರೆ. ಹೀಗೆ ಬೀದರ ಜಿಲ್ಲೆಯ ವೀರಶೈವ ಮಠಗಳ ಸಾಹಿತ್ಯ ಪ್ರಕಾಶನವನ್ನು ತೆರೆದು ಅನೇಕ ಕೃತಿಗಳನ್ನು ಪ್ರಕಟಿಸಿವೆ. ಮಠಗಳು ಹಲವಾರು ರೀತಿಯಲ್ಲಿ ಧಾರ್ಮಿಕ ಗೋಷ್ಠಿ, ಚಿಂತನ, ಅನುಭವಗೋಷ್ಠಿ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಭಕ್ತರೊಡನೆ ನಿಕಟವಾದ ಸಂಬಂಧ ಹಾಗೂ ಸಂಪರ್ಕ ಇಟ್ಟುಕೊಂಡಿದೆ. ಒಟ್ಟಿನಲ್ಲಿ ಬೀದರ ಜಿಲ್ಲೆಯ ಮಠಗಳು ಈ ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಗ್ರಂಥಸೂಚಿ

ಅಣ್ಣಾರಾವ್, ಮಿರ್ಜಿ : ಜೈನಧರ್ಮ

ಅಣ್ಣಿಗೇರಿ, ಎ.ಎಂ. : ಶಾಸನ ಸಾಹಿತ್ಯ ಸಂಚಯ

ಕಲಬುರ್ಗಿ, ಎಂ.ಎಂ. : ಕನ್ನಡ ಗ್ರಂಥ ಸಂಪಾದನಶಾಸ್ತ್ರ

ಕೃಷ್ಣ ಎಂ.ಎಚ್. : ಕರ್ನಾಟಕದ ಪೂರ್ವಚರಿತ್ರೆ

ಕೃಷ್ಣರಾಯ, ಕಪಟರಾಳ : ಕರ್ನಾಟಕ ಲಾಕುಳ ಶೈವರ ಇತಿಹಾಸ

: ಕರ್ನಾಟಕ ಸಂಸ್ಕೃತಿಯ ಸಂಶೋಧನೆ

ಕೃಷ್ಣಶರ್ಮ, ಬೆಟಗೇರಿ : ಕರ್ನಾಟಕ ಜನಜೀವನ

ಕೃಷ್ಣಸ್ವಾಮಿ ಅಯ್ಯಂಗಾರ್, ಎಚ್.ಎಸ್. : ಶ್ರೀ ರಾಮಾನುಜ

ಗುಂಡಪ್ಪ, ಡಿ.ವಿ. : ಸಂಸ್ಕೃತಿ

ಚಿದಾನಂದಮೂರ್ತಿ, ಎಂ : ಶೂನ್ಯ ಸಂಪಾದನೆಯನ್ನು ಕುರಿತು

: ಸಂಶೋಧನ ತರಂಗ

: ಸಂಶೋಧನ ತರಂಗ, ಸಂ.2.,

ತಿಮ್ಮಪ್ಪಯ್ಯ, ಮುಳಿಯ : ಕವಿರಾಜಮಾರ್ಗ ವಿವೇಕ

ದೇಸಾಯಿ, ಪಿ.ಬಿ. : ಕನ್ನಡ ನಾಡಿನ ಚರಿತ್ರೆ, I

ನಂದೀಮಠ, ಎಸ್.ಸಿ. : ಕನ್ನಡ ನಾಡಿನ ಚರಿತ್ರೆ, II

ನರಸಿಂಹಮೂರ್ತಿ, ಎ.ವಿ. : ಸಾಂಸ್ಕೃತಿಕ ಬೃಹದ್ಭಾರತ

ನರಸಿಂಹಾಚಾರ್, ಆರ್. : ಶಾಸನ ಪದ್ಯಮಂಜರಿ (ಸಂಪಾದಿತ)

: ಕರ್ನಾಟಕ ಕವಿಚರಿತೆ, I. II

ಪಂಚಮುಖಿ, ಆರ್.ಎಸ್. : ಕರ್ನಾಟಕದ ಶಿಲಾಶಾಸನಗಳು

: ಕರ್ನಾಟಕ ಹರಿದಾಸ ಸಾಹಿತ್ಯ

ಪುಟ್ಟಣ್ಣ, ಎಂ.ಎಸ್. : ಕುಣಿಗಲ ರಾಮಾಶಾಸ್ತ್ರಿಗಳ ಚರಿತ್ರೆ

ಮುಗಳಿ, ರಂ. ಶ್ರೀ. : ಕನ್ನಡ ಸಾಹಿತ್ಯ ಚರಿತ್ರೆ

ಯಾಮುನಾಚಾರ್ಯ, ಎಂ.	:	ಆಚಾರ್ಯ ರಾಮಾನುಜರು
ರಮೇಶ್, ಕೆ.ವಿ.	:	ಕರ್ಣಾಟಕ ಶಾಸನ ಸಮೀಕ್ಷೆ
ಲಕ್ಷ್ಮೀನಾರಾಯಣರಾವ್, ಎನ್. ಮತ್ತು ಪಂಚಮುಖಿ, ಆರ್.ಎಸ್.	:	ಕರ್ಣಾಟಕದ ಅಸುರ ಮನೆತನಗಳು
ವೆಂಕಣ್ಣಯ್ಯ, ಟಿ.ಎಸ್.	:	ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು
ಶ್ರೀಕಂಠಶಾಸ್ತ್ರೀ, ಎಸ್.	:	ಭಾರತೀಯ ಸಂಸ್ಕೃತಿ
ಶ್ರೀನಿವಾಸಮೂರ್ತಿ, ಎಂ.ಆರ್.	:	ವಚನಧರ್ಮಸಾರ
ಸೀತಾರಾಮಯ್ಯ. ವಿ.	:	ಕವಿರಾಜಮಾರ್ಗ (ಲೇಖನ ಸಂಕಲನ)
ಶಾಂತರಸ ರಾಯಚೂರು	:	ಚನ್ನಬಸಪ್ಪ
ಬೆಟ್ಟದೂರು	:	ಕಾಯಕ ಪರಿಣಾಮಿ (1991)
ಜಿ. ಶಿವರುದ್ರಪ್ಪ	:	ಅರ್ಚನಾ
ಸಂಗಮೇಶ ಸವದತ್ತಿ ಮಠ	:	ಬಯಲ ಕಾರಣಿಕ (2000)
ಎಂ.ಎಂ. ಕಲ್ಬುರ್ಗಿ	:	ಹರಿಹರನ ರಗಳೆಗಳು (1999)
ಎಸ್.ಆರ್. ಗುಂಜಾಳ	:	ಅನುಭಾವಿಯ ಆತ್ಮಕಥನ (1993)
ಉತ್ತಂಗಿ ಚನ್ನಪ್ಪ	:	ಸರ್ವಜ್ಞನ ವಚನಗಳು (1970)
ಚಂದ್ರಶೇಖರ ಪಿ	:	ಸರಳ ವೀರಶೈವ ತ್ರಿರತ್ನಗಳು (1998)
ವಿ.ಎಸ್. ಚರಂತಿ ಮಠ	:	ಅನುಭವ ಮಂಟಪದಲ್ಲಿ ವೀರಶೈವ ಸಂಸ್ಕೃತಿ (1992)
ವಿ.ಎಸ್. ಚರಂತಿ ಮಠ	:	ಬಸವಣ್ಣನವರ ವಚನಗಳಲ್ಲಿ ದಲಿತ ದರ್ಶನ (1994)
ಎಂ. ಚಿದಾನಂದ ಮೂರ್ತಿ	:	ವೀರಶೈವ ಧರ್ಮ ಭಾರತೀಯ ಸಂಸ್ಕೃತಿ (2000)
ಎಂ. ಚಿದಾನಂದ ಮೂರ್ತಿ	:	ಲಿಂಗಾಯಿತ ಅಧ್ಯಯನಗಳು (1989)
ಎರೇಸಿಮೆ ಚನ್ನಪ್ಪ	:	ದಾಸೋಹಸಿರಿ (1981)
ಜಗನ್ನಾಥ ಹೆಬ್ಬಾಳೆ	:	ಬೀದರ ಜಿಲ್ಲಾ ದರ್ಶನ (1997)
ಎಚ್. ತಿಪ್ಪೇರುದ್ರಸ್ವಾಮಿ	:	ಶರಣ ಅನುಭವ ಸಾಹಿತ್ಯ (1981)
ಸ.ಸ.ಮಠ	:	ಚನ್ನವೀರ (1996)

ವೀರಶೆಟ್ಟಿ ಬಾವುಗೆ : ಚನ್ನಬಸವ ಪಟ್ಟದೇವರು (1995)

ಸಂಗಮೇಶ ಸವದತ್ತಿ ಮಠ : ಸನ್ನಿಧಿ (1994)

ಬಸವ ಶರಣರು : ಹುಲಸೂರು ಶಿವಾನಂದ ಸ್ವಾಮಿಗಳ ವಚನಗಳು (1981)

ಎಚ್. ತಿಪ್ಪೇರುದ್ರಸ್ವಾಮಿ : ವಚನಗಳಲ್ಲಿ ವೀರಶೈವ ಧರ್ಮ (1969)

ಹಿರೇಮಲ್ಲೂರು ಈಶ್ವರನ್ : ಬಸವಣ್ಣ ಮತ್ತು ಲಿಂಗಾಯಿತ ಧರ್ಮ (1997)

ಆರ್.ಸಿ. ಹಿರೇಮಠ : ಸಕಲ ಪುರಾತನ ವಚನಗಳು (1977)

ಸೂಗಯ್ಯ ಹಿರೇಮಠ : ಜಾನಪದ ಸಾಹಿತ್ಯ ಜೀವನ ಮೌಲ್ಯಗಳು (1991)

ಶಿವರಾಜ ಪಾಟೀಲ : ಶರಣ ದಾಸೋಹ ಮತ್ತು ಕಾಯಕ (1994)

ಎಸ್.ಆರ್. ಶಾಸ್ತ್ರೀ : ಶರಣರ ವಚನಗಳಲ್ಲಿ ಸಮಾಜದ ಕಾರ್ಯ (1994)

ಕೆ. ರವೀಂದ್ರನಾಥ : ಕನ್ನಡ ಸಾಹಿತ್ಯಕ್ಕೆ ಮಠಮಾನ್ಯಗಳ ಕೊಡುಗೆ (1995)

ಎಲ್. ಬಸವರಾಜು : ಅಲ್ಲಮನ ವಚನಗಳು (1995)

ಸ.ಸ. ಮಾಳವಾಡ : ಬಸವಣ್ಣನವರ ವಚನಗಳು (1995)

ವಿ.ಎಸ್. ಚರಂತಿಮಠ : ಚನ್ನಬಸವ (1990)

ಜಿ.ಬಿ. ವಿಸಾಜಿ : ಚನ್ನಬಸವೇಶ್ವರ ಪಟ್ಟದ್ದೇವರ ಜೀವನ ಚರಿತ್ರೆ

ಬಸವಲಿಂಗ ಪಟ್ಟದ್ದೇವರು : ಶಾಂತಿಕಿರಣ (2002)

ಶ್ರೀ ರಮೇಶ ಮೂಲಗೆ : ಬೀದರ ಜಿಲ್ಲೆಯ ವೀರಶೈವ ಮಠಗಳು (1998)

ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಗಳು : ಕಾಯಕ ದಾಸೋಹ (1994)

ಆರ್.ಸಿ. ಹಿರೇಮಠ : ಮಹಾಯಾತ್ರೆ (1997)

ಸಂ. ಸ. ಮಠ : ವೀರಶೈವ ವಿನ್ಯಾಸ (2000)

ಸಂ. ಸ. ಮಠ : ಶೂನ್ಯ ಸಂಪಾದನೆ ಮುಖಗಳು (1995)

ವಿ. ಶಿವಾನಂದ : ಸಗರ ನಾಡಿನ ಶಿವಶರಣರು (1967)

ವೀರಶೆಟ್ಟಿ ಬಾವುಗೆ : ನೂತನ ವಚನಕಾರರ ವಚನಗಳಲ್ಲಿ ಶತಾಯುಷಿ ಚನ್ನಬಸವ ಪಟ್ಟದ್ದೇವರು (1997)

ಕರ್ನಾಟಕ ರಾಜ್ಯ ಗೆಜೆಟಿಯರ್ : ಬೀದರ ಜಿಲ್ಲೆ, 1977.

ಚಂದ್ರಶೇಖರ ನಾರಾಣಾಪುರ : ಕರ್ನಾಟಕದ ವೀರಶೈವ ಮಠಗಳು, 2002.

ಮಲ್ಲದೇವರು ಹೆಚ್. ಪಿ : ಎಂ. ಜಿ. ನಂಜುಂಡರಾಧ್ಯ ಸ್ಮರಣ ಸಂಚಿಕೆ, 1983.

ತಿಪ್ಪೇರುದ್ರಸ್ವಾಮಿ ಹೆಚ್. : ಕನ್ನಡ ವಿಶ್ವಕೋಶ

ಸದಾಶಿವಯ್ಯ ಹೆಚ್. ಎಂ. : ಸಿದ್ಧಗಂಗಾಶ್ರೀ

ವೈ.ಹೆಚ್. ನಾಯಕವಾಡಿ : ಬೀದರ ಜಿಲ್ಲೆಯ ಮಠಗಳು : ಒಂದು ಸಾಂಸ್ಕೃತಿಕ ಅಧ್ಯಯನ 2008.